ಗೌರಿ ಲಂಕೇಶರ

ಲಂಕೇಶ್

ಏಪ್ರಿಲ್ 11, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ರುಚೆಂಡೂರಿನಲ್ಲಿ ವಾಮಾಚಾರ

ಶತ್ರು ಸಂಹಾರ ಹೋಮ!

ಲೆಮಹದೇಶ್ವರನಿಗೆ ಭ್ರಷ್ಟರ ಕಾಟ

ಬ್ಬಳ್ಳಿ: ಗುಡಿ ಸುತ್ತ ಚೆಡ್ಡಿಗಳಿಗೆ ನಿಶೆ

ಾವಣಗೆರೆ: ಚೋರ ಎ.ಸಿ
ಾಂಡಾಲ ತಹಶೀಲ್ದಾರ್



ಪೆದ್ದು ಸಿಎಂ
ಸಿದ್ದು ಗರಂ

ಚುನಾವಣಾ ಬಜೆಟ್ಟಲ್ಲ, ಅಪ್ಪಟ ಕೇಸರಿ ಬಜೆಟ್!

ಈ ಬಾರಿ ಯಡ್ಡಿ ಮಂಡಿಸಿದ ಎರಡನೇ ಬಜೆಟ್ಟಿನ ಬಗ್ಗೆ ಏಕೋ ಏನೋ ಎಲ್ಲರೂ ಸಾಫ್ಟ್ ಆಗಿಬಿಟ್ಟಿದ್ದಾರೆ. ವಿರೋಧ ಪಕ್ಷಗಳು ಮತ್ತು ಮಾಧ್ಯಮಗಳು ಸಹ ಅದನ್ನು ಅಬ್ಬಬ್ಬ ಎಂದರೆ ಚುನಾವಣಾ ಬಜೆಟ್ಟೆಂಬಂತೆ ಉಪೇಕ್ಷಿಸಿ ಪಾಸ್ ಮಾರ್ಕ್ ಕೊಟ್ಟುಬಿಟ್ಟಿದ್ದಾರೆ. ಯಡ್ಡಿ ತಮ್ಮ ಬಜೆಟ್ಟಿನಲ್ಲಿ ಅಬ್ಬರದ ಜನಪ್ರಿಯ ಘೋಷಣೆಗಳನ್ನು ಹಾಕಿರುವುದು ಒಂದು ಕಾರಣವಾದರೆ, ಪ್ರತಿ ಜಾತಿ ಮಠಗಳಿಗೂ ಒಂದಷ್ಟು ಕೋಟಿ ರೂಪಾಯಿಗಳನ್ನು ನೀಡಿರುವುದು ಮತ್ತು ಪ್ರತಿ ಸಾಹಿತ್ಯ ಪಂಥಗಳ ಅಧ್ಯಯನಕ್ಕೂ ಒಂದಷ್ಟು ಲಕ್ಷ ರೂಪಾಯಿ ಅನುದಾನ ನೀಡಿರುವುದೂ ಕಾರಣವಿರಬಹುದೇ?


ಅದೇನೇ ಇರಲಿ, ಯಡ್ಡಿ ಬಜೆಟ್ಟು ಜನಪ್ರಿಯ ಬಜೆಟ್ಟಲ್ಲ. ಅದು ಘೋಷಿಸಿಕೊಂಡಿರುವ ಸಾಲಮನ್ನಾ ಇತ್ಯಾದಿಗಳು ಚಾಟಿ ಇಲ್ಲದ ಬುಗುರಿಯಾಟಗಳು. ಬಹಳಷ್ಟು ಯೋಜನೆಗಳಿಗೆ ಸಂಪನ್ಮೂಲವೆಲ್ಲಿಂದ

ಚಾರ್ವಾಕ

ಶಿವಸುಂದರ್

ಎಂಬುದೇ ಸ್ಪಷ್ಟವಿಲ್ಲ. ಒಂದೆಡೆ ಸಾಲ ಮನ್ನಾಗಳಿಂದ ಹೆಚ್ಚುವರಿಯಾಗಿ ಹೊರೆ, ಮತ್ತೊಂದೆಡೆ ಸಾರಾಯಿ ನಿಷೇಧದಂಥ ಯೋಜನೆಗಳಿಂದ ಬರುತ್ತಿದ್ದ ಆದಾಯಕ್ಕೆ ಕತ್ತರಿ. ಹಾಗಿದ್ದರೂ ಹೋದ ವರ್ಷಕ್ಕಿಂತ ಈ ವರ್ಷ 3000 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಸಂಗ್ರಹಿಸಲಾಗುವುದೆಂಬ ಘೋಷಣೆ. ಹಾಗೆ ನೋಡಿದಲ್ಲಿ ಒಟ್ಟಾರೆಯಾಗಿ 7000 ಕೋಟಿಯಷ್ಟು ಅಧಿಕ ಸಂಪನ್ಮೂಲ ಸಂಗ್ರಹಣೆ ಇಲ್ಲದೆ ಯಡ್ಡಿ ಘೋಷಿಸಿರುವ ಯಾವುದೇ ಜನಪ್ರಿಯ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ.

ಈ ಹೆಚ್ಚುವರಿ ಸಂಗ್ರಹಣೆಗೆ ಬಜೆಟ್ಟಿನಲ್ಲಿ ನೀರಿನ ಮೇಲೆ ಮತ್ತು ಖನಿಜದ ಮೇಲೆ ಹೆಚ್ಚಿನ ತೆರಿಗೆ ಹಾಕುವ ಮತ್ತು ಕಟ್ಟುನಿಟ್ಟಾಗಿ ತೆರಿಗೆ ವಸೂಲಿ ಮಾಡುವ ದಾರಿಯನ್ನು ಅನುಸರಿಸುವುದಾಗಿ ಯಡ್ಡಿ ಕೊಚ್ಚಿ ಕೊಂಡಿದ್ದಾರೆ. ಅಂದರೆ ಒಂದೋ ಆ ಜನಪ್ರಿಯ ಯೋಜನೆಗಳು ಹಣದ ಕೊರತೆಯಿಂದಾಗಿ ಜಾರಿಗೆ ಬರುವುದಿಲ್ಲ, ಇಲ್ಲವೇ ಸಾಮಾನ್ಯ ಜನರ ಮೇಲೆ ಹೆಚ್ಚಿನ ತೆರಿಗೆ ಹೊರೆಗಳನ್ನು ಒಂದೊಂದಾಗಿ ಹಾಕಲಿದ್ದಾರೆ. ಇದು ಅವರ ಜನಪ್ರಿಯ ಘೋಷಣೆಗಳ ಅಸಲಿ ಹೂರಣ.



ಆದರೆ ಯಡ್ಡಿ ಅಷ್ಟು ಮಾತ್ರವಲ್ಲ, ಆತ ಪರಮ ಚಡ್ಡಿ ಕೂಡಾ! ಹೀಗಾಗಿ ಈ ಬಜೆಟ್ಟಿನಲ್ಲಿ ಜನರಿಗೆ ಪುಕ್ಕಟೆ ಭರವಸೆ ಕೊಟ್ಟು ಮೋಸ ಮಾಡುವ ಹುನ್ನಾರಗಳಲ್ಲದೆ ಇಡಿ ಕರ್ನಾಟಕವನ್ನೇ ಕೇಸರಿಕರಣ ಮಾಡುವ ಮತ್ತು ಸಂಘ ಪರಿವಾರದ ಅಂಗಸಂಸ್ಥೆಗಳನ್ನು ಆರ್ಥಿಕವಾಗಿ ಗಟ್ಟಿಗೊಳಿಸುವ ಪ್ರಚ್ಛನ್ನ ಹುನ್ನಾರಗಳು ಹುದುಗಿವೆ. ಸರಿ ಸುಮಾರು 150 ಕೋಟಿ ರೂಪಾಯಿಗಳಷ್ಟು ಹಣವನ್ನು ಹತ್ತು ಹಲವು ಹೆಸರಿನಲ್ಲಿ ಈ ಬಾಬತ್ತಿಗಾಗಿ ಎತ್ತಿಡಲಾಗಿದೆ. ಬೆಂಗಳೂರಿನ ಬಳಿಯ ಪ್ರಶಾಂತಿಧಾಮದಂತ ಯೋಗದ ಹೆಸರಿನ ಆರೆಸ್ಸೆಸ್ಸಿನ ಅಡ್ಡೆಗೆ ಎರಡು ಕೋಟಿ ರೂಪಾಯಿ, ವಿಶ್ವ ಗೋರಕ್ಷಣಾ ಸಮ್ಮೇಳನಕ್ಕೆ ರಾಘವೇಶ್ವರ ಸ್ವಾಮೀಜಿ ಎಂಬ ಸಂಘಪರಿವಾರದ ವಕ್ತಾರನ ಮಠಕ್ಕೆ ಎರಡು ಕೋಟಿ ರೂಪಾಯಿ, ಅಷ್ಟು ಮಾತ್ರವಲ್ಲದೆ 'ಅಮೃತಾ' ಎಂಬ ಹೊಸ ಯೋಜನೆಯಡಿಯಲ್ಲಿ 50000 ಮಹಿಳೆಯರಿಗೆ ಹಸುಗಳನ್ನು ಕೊಡುವ ಯೋಜನೆಗೆ 50 ಕೋಟಿ ರೂಪಾಯಿಗಳನ್ನು ಎತ್ತಿಡಲಾಗಿದೆ.

ಇದನ್ನು ಪ್ರತಿ ಜಿಲ್ಲೆಯಲ್ಲಿ ಸಂಘ ಪರಿವಾರಿ ಕಾರ್ಯಕರ್ತರ ಸುಪರ್ದಿನಲ್ಲಿ ಸಕಲ ಸರ್ಕಾರಿ ರಕ್ಷಣೆ ಮತ್ತು ತಲಾ ಎರಡು ಕೋಟಿ ಅನುದಾನಗಳಿಂದ ಏರ್ಪಾಡಾಗುವ ಗೋಶಾಲೆಗಳ ಯೋಜನೆಯೊಂದಿಗೆ ಸೇರಿಸಿ ನೋಡಿದರೆ 50 ಕೋಟಿ ಯಾರಿಗೆ ದಕ್ಕುತ್ತದೆ ಎಂದು ತಿಳಿಯುತ್ತದೆ. ಇದಲ್ಲದೆ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಸಂಘಪರಿವಾರಕ್ಕೆ ಪ್ರಿಯವಾದ ಅಧ್ಯಯನಗಳು ಪ್ರಾರಂಭವಾಗಲಿವೆ. ಅವೆಲ್ಲಕ್ಕೂ ಕನಿಷ್ಠವೆಂದರೂ ಒಟ್ಟಾರೆ 30 ಕೋಟಿಯನ್ನು ಎತ್ತಿಡಲಾಗಿದೆ. ಇವಲ್ಲದೆ ಈ ಬಾರಿ ಬಜೆಟ್ಟಿನಿಂದಲೇ ನೇರವಾಗಿ ಮಠಮಾನ್ಯ ಗಳಿಗೆ 40 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಲಾಗಿದೆ. ಇದ ರೊಂದಿಗೆ "ಶ್ರೀ ಶ್ರೀ ರವಿಶಂಕರ್ ಗುರೂಜಿಯವರಿಗೆ ಜ್ಞಾನೋದಯವಾದ ಭದ್ರಾ ಜಲಾಶಯದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ"ಗೂ ಬಜೆಟ್ಟಿನಿಂದ ನೇರವಾಗಿ ಹಣವನ್ನು ಎತ್ತಿಡುವ ಮೂಲಕ ಮೌಢ್ಯದ ಪರಮಾವಧಿಗೆ ಜನತೆಯ ಹಣವನ್ನು ತೆಗೆದಿಡಲಾಗಿದೆ.

ಹಜ್ ಯಾತ್ರೆಗೆ ಸರ್ಕಾರಿ ಅನುದಾನ ನೀಡಲಾಗುತ್ತದಲ್ಲ ಎಂಬ ತರ್ಕವನ್ನು ಮುಂದಿಡುತ್ತಾ ಮಾನಸಸರೋವರದ ಯಾತ್ರಾರ್ಥಿಗಳಿಗೂ ಸರ್ಕಾರಿ ಹಣದ ಅನುದಾನ ಹೆಚ್ಚಿಸಲಾಗಿದೆ. ಶಿಕ್ಷಣ ಮಂತ್ರಿ ಶಂಕರಮೂರ್ತಿಯಂತೂ ಮಾನಸ ಯಾತ್ರಾರ್ಥಿಗಳಿಗೆ ಶೇ.10ರಷ್ಟು ಇಂಜಿನಿಯರಿಂಗ್ ಸೀಟುಗಳನ್ನೂ ಎತ್ತಿಡುವ ಪ್ರಸ್ತಾಪವನ್ನು ಮಾಡಿದ್ದರು. ಈಗ ಅದರ ಶೀರ್ಷಿಕೆ ಬದಲಾಯಿಸಿ ಸಾಹಸ ಯಾತ್ರೆಗಳಲ್ಲಿ ಭಾಗವಹಿಸಿದವರಿಗೆ ಸೀಟುಗಳೆಂದು ಎತ್ತಿಡಲಾಗಿದೆ!

ಸಾಲಮನ್ನಾಗೆ ಹಣವಿರುತ್ತದೋ ಇಲ್ಲವೋ ಈ ಬಾಬತ್ತುಗಳಿಗೆ ಮಾತ್ರ ಬಿಜೆಪಿ ಸರ್ಕಾರ ಕಡ್ಡಾಯವಾಗಿ ಹಣವನ್ನು ಒದಗಿಸುತ್ತದೆ. ಜನರ ಈ ಹಣವೆಲ್ಲಾ ಸಂಘ ಪರಿವಾರದ ಸಮಾಜದ್ರೋಹಿ ಯೋಜನೆಗಳಿಗೆ ಮತ್ತು ಸಂಘಪರಿವಾರದ ಅಂಗಸಂಸ್ಥೆಗಳನ್ನು ಗಟ್ಟಿಗೊಳಿಸುವುದಕ್ಕೆ ವ್ಯಯವಾಗುತ್ತದೆ. ಇದು ಸಮ್ಮಿಶ್ರ ಸರ್ಕಾರ ಬಹಿರಂಗವಾಗಿ ನಡೆಸಿರುವ ಸಂವಿಧಾನ ದ್ರೋಹವಲ್ಲವೆ??

ಹಿಂದುಳಿದ ಜಾತಿಗಳು ಮತ್ತು ಮುಂದುವರೆದವರ ನ್ಯಾಯಾಲಯಗಳು!!

ಈ ದೇಶದ ನ್ಯಾಯಾಲಯಗಳೇ ಈ ದೇಶದ ಪ್ರಜಾಸತ್ತೆಗೆ ಮೊಟ್ಟಮೊದಲ ಅಡ್ಡಿಗಳೆಂಬುದು ದಿನೇದಿನೇ ಸ್ಪಷ್ಟವಾಗುತ್ತಿದೆ. ಈ ನಿಟ್ಟಿನಲ್ಲಿ ಉನ್ನತ ವಿದ್ಯಾಸಂಸ್ಥೆಗಳಲ್ಲಿ ಹಿಂದುಳಿದ ಜಾತಿಗಳಿಗೆ ಶೇ.27ರ ಮೀಸಲಾತಿಯನ್ನು ತಡೆಹಿಡಿದ ಸರ್ವೋಚ್ಚ ನ್ಯಾಯಾಲಯದ ತೀರ್ಮಾನ ಮತ್ತೊಂದು ಉದಾಹರಣೆ. ಕೇಂದ್ರ ಸರ್ಕಾರವು ಉನ್ನತ ವಿದ್ಯಾಲಯಗಳಲ್ಲಿ ಶೇ.27ರ ಮೀಸಲಾತಿ ಘೋಷಿಸಿ ಹಲವಾರು ತಿಂಗಳುಗಳೇ ಕಳೆದಿದ್ದವು. ಸರ್ಕಾರ ತನ್ನ ವಾದಕ್ಕೆ ಪೂರಕ ಮಾಹಿತಿಯನ್ನೂ ಒದಗಿಸಿ ತಿಂಗಳುಗಳು ಕಳೆದಿದ್ದವು. ಹಾಗಿದ್ದರೂ ಸುಪ್ರೀಮ್‌ಕೋರ್ಟು ಈಗ ಅದನ್ನು ತಡೆಹಿಡಿದು ಆದೇಶವನ್ನು ಹೊರಡಿಸಲು ಕಾರಣವೇನು? ಈಗ ಈ ಸಂಸ್ಥೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗುತ್ತಿದೆ. ಆ ಸಂದರ್ಭದಲ್ಲಿ ಈ ಆದೇಶ ಹೊರಬಿದ್ದಿರುವುದರಿಂದ ಕೋರ್ಟಿನ ಅಂತಿಮ ಆದೇಶ ಸಕಾರಾತ್ಮಕವಾಗಿಯೇ ಬಂದರೂ ಈ ಸಾಲಿನಲ್ಲಂತೂ ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗ ಇಲ್ಲದಂತಾಗುತ್ತದೆ!

ಇದಲ್ಲದೆ ಮತ್ತೆ ತಥಾಕಥಿತ ಸರ್ವೋಚ್ಚ ನ್ಯಾಯಾಲಯವು ಜಾತಿ ಎಂಬುದು ಹಿಂದುಳಿದಿರುವಿಕೆಗೆ ಮಾನದಂಡವೋ ಅಲ್ಲವೋ ಎಂಬ ಬಗ್ಗೆ ಈಗಾಗಲೇ ಬಗೆಹರಿದಿರುವ ಪ್ರಶ್ನೆಯನ್ನು ಮತ್ತೆ ಎತ್ತಿದೆ. ಪ್ರಶ್ನೆಯನ್ನು ಎತ್ತಿರುವ ರೀತಿಯಲ್ಲೇ ನಕಾರಾತ್ಮಕ ಧೋರಣೆಯೂ ಎದ್ದು ಕಾಣುತ್ತಿದೆ. ಮೀಸಲಾತಿಯನ್ನು ಮುಂದಿನ ಆದೇಶದ ತನಕ ತಡೆಹಿಡಿಯುವ ಆದೇಶ ನೀಡುತ್ತಾ ನ್ಯಾಯಾಧೀಶರುಗಳು "ಪ್ರಪಂಚದಲ್ಲೆಲ್ಲೂ ಜಾತಿಯನ್ನು ಹಿಂದುಳಿದಿರುವಿಕೆಗೆ ಮಾನದಂಡವನ್ನಾಗಿ ಬಳಸುವುದಿಲ್ಲ" ಎಂದು ಹೀಗೆಳೆದಿದೆ. ಪ್ರಪಂಚದಲ್ಲೆಲ್ಲೂ ಜಾತಿ ವ್ಯವಸ್ಥೆ ಇಲ್ಲದಿರುವಾಗ ಪ್ರಪಂಚದಲ್ಲಿ ಬೇರೆಲ್ಲೂ ಜಾತಿ ವ್ಯವಸ್ಥೆಯನ್ನು ಹಿಂದುಳಿದಿರುವಿಕೆಗೆ ಮಾನದಂಡವನ್ನಾಗಿ ಬಳಸುವುದಿಲ್ಲ ಎಂಬ ಸನ್ಮಾನ್ಯರ ತಿಳಿವಳಿಕೆಗೆ ಏನು ಹೇಳಬೇಕು? ಅದರಲ್ಲಿರುವುದು ಪಕ್ಕಾ ಮೀಸಲಾತಿ ವಿರೋಧಿ ಪೂರ್ವಾಗ್ರಹಗಳೇ ಹೊರತು ಬೇರೇನಲ್ಲ.



ಜಗತ್ತಿನೆಲ್ಲೆಡೆಯಲ್ಲೂ — ಅಮೆರಿಕದಲ್ಲೂ ಸಹ — ಒಂದು ಸಮುದಾಯದ ಪಾರಂಪರಿಕ ಹಿಂದುಳಿದಿರುವಿಕೆಗೆ ಅವರ ಸಮಕಾಲೀನ ಆರ್ಥಿಕ ಹಿಂದುಳಿದಿರುವಿಕೆಯನ್ನು ಮಾತ್ರ ಮಾನದಂಡಗಳನ್ನಾಗಿ ಬಳಸುವುದಿಲ್ಲ. ಬದಲಿಗೆ ಆ ಸಮಾಜ ರೂಪುಗೊಳ್ಳುವ ಪ್ರಕ್ರಿಯೆಯಲ್ಲಿ ವರ್ಣಭೇದ, ಜಾತಿ ಇನ್ನಿತ್ಯಾದಿ ಆರ್ಥಿಕೇತರ ಅಂಶಗಳು ಇಡೀ ಸಮುದಾಯವನ್ನು ಎಲ್ಲಾ ಅವಕಾಶಗಳಿಂದ ವಂಚಿತಗೊಳಿಸಿ ಹಿಂದುಳಿಸಿರುತ್ತವೆ ಎಂಬುದನ್ನು ಎಲ್ಲಾ ಪ್ರಜಾತಂತ್ರಗಳೂ ಒಪ್ಪಿಕೊಳ್ಳುತ್ತವೆ. ಅದನ್ನು ನಿವಾರಿಸುವ ಸೂತ್ರ ರಚಿಸುವ ಸಮಯ ಬಂದಾಗ ಕೇವಲ ಸಮಕಾಲೀನ ಆರ್ಥಿಕ ಸ್ಥಿತಿಗತಿಗಳ ಮಾನದಂಡಗಳನ್ನು ಮಾತ್ರ ಬಳಸದೆ ಈ ಆರ್ಥಿಕೇತರ ಹಿಂದುಳಿಸಲ್ಪಟ್ಟ ಮಾನದಂಡಗಳನ್ನು ಬಳಸುತ್ತವೆ. ಅಸಮಾನ ಸಮಾಜದಲ್ಲಿ ಅದೇ ಸಮಾನತೆಯೆಡೆಗೆ ಸಾಗುವ ಸೂತ್ರ.

ಹೀಗಾಗಿ ಹಿಂದುಳಿದಿರುವಿಕೆಯನ್ನು ತೀರ್ಮಾನಿಸುವಲ್ಲಿ ಜಾತಿ ಅಂಶದ ನಿರಾಕರಣೆಯೆಂದರೆ ಇತಿಹಾಸದ ನಿರಾಕರಣೆ ಮತ್ತು ಸಮಾನತೆಯ ನಿರಾಕರಣೆಯೇ ಆಗುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಈಗ ತೀರ್ಮಾನವಾಗಬೇಕಿರುವುದು ಪ್ರಜಾತಂತ್ರವನ್ನು ಆಧರಿಸಿ ಕೆಲಸ ಮಾಡಬೇಕಿರುವ ಸಂಸ್ಥೆಗಳೇ ಪ್ರಜಾತಂತ್ರಕ್ಕೆ ವಿರೋಧವಾಗಿ ನಿಂತಾಗ ಜನತೆ ಏನು ಈ ಸಂಸ್ಥೆಗಳಿಗೆ ಬದ್ಧವಾಗಿರಬೇಕೋ ಅಥವಾ ಅದನ್ನು ಮೀರಿದ ಪ್ರಜಾತಂತ್ರವೆಂಬ ಮೌಲ್ಯವನ್ನು ಸಾಕಾರಗೊಳಿಸಲು ಹೋರಾಡಬೇಕೋ ಎಂಬುದು!

ಕೊನೆ ಮಾತು • ಸಾಲಮನ್ನಾ ಎಂಬ ಚಾಟಿಯಿಲ್ಲದ ಬುಗುರಿ



ಯಡ್ಡಿ ಸರ್ಕಾರ ದೊಡ್ಡದಾಗಿ ರೈತರ ಸಾಲಮನ್ನಾ ಮಾಡಿದ ಏಕೈಕ ಸರ್ಕಾರ ಎಂಬಂತೆ ಪೋಸು ಹೊಡೆಯುತ್ತಿದೆ. ಆದರೆ ಅದರ ಅಸಲಿ ಹೂರಣವೇನು? ಬಜೆಟ್ ಭಾಷಣದಲ್ಲೇ ತಿಳಿಸಿರುವಂತೆ ಕೋ-ಆಪರೇಟೀವ್ ಬ್ಯಾಂಕ್‌ಗಳಿಂದ 25000 ರೂ. ಒಳಗೆ ಸಾಲ ಮಾಡಿರುವ ರೈತರ ಸಾಲಮನ್ನಾ ಮಾಡಬೇಕೆಂದರೂ 1505 ಕೋಟಿ ರೂ.ಗಳು ಬೇಕು. ಈಗದನ್ನು 50000 ರೂ.ಗಳಿಗೆ ಏರಿಸಿರುವುದರಿಂದ 1900 ಕೋಟಿ ರೂ.ಗಳು ಬೇಕು. ಆದರೆ ಸರ್ಕಾರ ಈ ಬಾರಿ ಅದಕ್ಕೆ ಎತ್ತಿಟ್ಟಿರುವ ಹಣ ಕೇವಲ 500 ಕೋಟಿ ರೂ.ಮಾತ್ರ. ಅಂದರೆ ಕೊಟ್ಟ ಭರವಸೆಯ ಶೇ.30 ರಷ್ಟು ಮಾತ್ರ. ಇದಲ್ಲದೆ ಶೆ.4ರ ಬಡ್ಡಿದರದಲ್ಲಿ ಸಾಲ ಮುಂದುವರಿಕೆಗೆ ಈ ಬ್ಯಾಂಕ್‌ಗಳಿಗೆ ಸರ್ಕಾರ ಉಳಿಸಿಕೊಂಡಿರುವ ಬಾಕಿಯೇ 400 ಕೋಟಿಗೂ ಹೆಚ್ಚು, ಮತ್ತು ಅದನ್ನು ಈ ಸಾಲಿನಲ್ಲೂ ಮುಂದುವರೆಸಲು ಕನಿಷ್ಠ 500 ಕೋಟಿ ಬೇಕು. ಆದರೆ ಈ ಬಾಬತ್ತಿಗೆ ಯಡ್ಡಿ ಒದಗಿಸಿರುವುದು ಕೇವಲ 160 ಕೋಟಿ! ಮೇಲಾಗಿ ಕೋ-ಆಪರೇಟೀವ್ ಸಾಲ ರೈತರು ಬ್ಯಾಂಕುಗಳಲ್ಲಿ ಮಾಡುವ ಸಾಲದ ಶೇ.10 ರಷ್ಟು ಮಾತ್ರ. ಮತ್ತು ರೈತರು ಎಲ್ಲಾ ಬ್ಯಾಂಕುಗಳಲ್ಲಿ ಮಾಡುವ ಸಾಲ ಅವರು ಮಾಡುವ ಒಟ್ಟಾರೆ ಸಾಲದ ಶೇ.30 ರಷ್ಟು ಮಾತ್ರ. ಉಳಿದದ್ದನ್ನು ಅವರು ಬಡ್ಡಿ ವ್ಯಾಪಾರಿಗಳ ಬಳಿ ಮಾಡುತ್ತಾರೆ. ಹೀಗಾಗಿ ಒಟ್ಟಾರೆ ರೈತರ ಸಾಲ 54000 ಕೋಟಿ ರೂಪಾಯಿಗಳಷ್ಟಾಗುತ್ತದೆ. ಅದರಲ್ಲಿ ಯಡ್ಡಿ ತೀರಿಸಲು ಮುಂದಾಗಿರುವುದು ಕೇವಲ 500 ಕೋಟಿಯಷ್ಟು. ಅಂದರೆ ಶೇ.1 ರಷ್ಟು. ಆದರೆ ಅಬ್ಬರ ಶೇ.1000 ದಷ್ಟು. ಕೊಟ್ಟ ಹಣ ಸಾಸಿವೆಯಷ್ಟು, ಬೊಗಳೆ ಬೆಟ್ಟದಷ್ಟು!!

No Comments



"ನಮ್ಮ ಆಟಗಾರರು ಒತ್ತಡದಲ್ಲೇನೂ ಆಡಲಿಲ್ಲ, ಪಂದ್ಯ ಶುರುವಾಗುವ ಮುನ್ನ ರಾಹುಲ್ ದ್ರಾವಿಡ್ ನನಗೆ ಕರೆ ಮಾಡಿ ತಂಡದ ಎಲ್ಲಾ ಆಟಗಾರರು ಪ್ರದರ್ಶನ ತೋರಲು ಹಾತೊರೆಯುತ್ತಿದ್ದಾರೆ ಎಂದು ಹೇಳಿದ್ದರು."

- ಶರದ್ ಪವಾರ್

"ಭಾರತಕ್ಕೆ ಒಂದು ಯುವತಂಡ ಬೇಕಿತ್ತು. ಆದರೆ ಕ್ಯಾಪ್ಟನ್ ಮತ್ತು ಮೇನೇಜರ್‌ಗಳು ಮಾಧ್ಯಮಗಳಿಗೆ ಹೆದರಿ ವಯಸ್ಸಾದ ತಂಡವನ್ನು ಉಳಿಸಿಕೊಂಡರು."

- ಗ್ರೆಗ್ ಚಾಪೆಲ್

"ಇನ್ಫೋಸಿಸ್ ನಾರಾಯಣಮೂರ್ತಿಗಳು ಚೀನಾದ ತಂತ್ರಾಂಶ ಅಭಿವೃದ್ಧಿಪಡಿಸಲು ಚೀನಾಗೆ ಹೋಗುತ್ತಾರೆ. ಆದರೆ ಕನ್ನಡ ತಂತ್ರಾಂಶದ ಅಭಿವೃದ್ಧಿಗೆ ಅವರು ಏನೂ ಮಾಡಿಲ್ಲ"

- ಚಂದ್ರಶೇಖರ ಕಂಬಾರ.

"ಎಡಪಕ್ಷಗಳು ಕಾರ್ಮಿಕ, ವಿದ್ಯಾರ್ಥಿ, ಮಹಿಳೆಯರ ಪರ ಗಟ್ಟಿಯಾಗಿ ದನಿ ಎತ್ತಿದಂತೆ ರೈತರ ಪರವಾಗಿ ದನಿ ಎತ್ತಲು ಮುಂದಾಗಲಿಲ್ಲ ಎನ್ನುವುದು ಈಗ ಇತಿಹಾಸ."

- ಜಾಣಗೆರೆ ವೆಂಕಟರಾಮಯ್ಯ.

"ಸಚಿವ ಹಾಗೂ ಸಂಸದನ ಸ್ಥಾನಕ್ಕೆ ರಾಜೀನಾಮೆ ನೀಡಿದ ಅಂಬರೀಶ್ ಈಗ ಎಲ್ಲಿದ್ದಾರೆ?"

-ಪಾಟೀಲ್ ಪುಟ್ಟಪ್ಪ

ನಂಬಿದ್ರೆ ನಂಬಿ ಬಿಟ್ರೆ ಬಿಡಿ


"ಕಾವೇರಿ ಹೋರಾಟದಲ್ಲಿ ನಾವು ನಿಮ್ಮ (ಕರ್ನಾಟಕದ) ಪರವಾಗಿದ್ದೇವೆ."

- ಜಯಲಲಿತಾ (ಒಂದು ಪತ್ರಿಕಾ ವರದಿ)



"ಕಾವೇರಿ ಬಗ್ಗೆ ನಮ್ಮ ನಿಲುವು ಸ್ಪಷ್ಟ. ತಮಿಳುನಾಡಿನಲ್ಲಿ ತಮಿಳುನಾಡಿನ ಪರ..ಕರ್ನಾಟಕದಲ್ಲಿ ಕರ್ನಾಟಕದ ಪರ..ಹಾಗೂ ನಾನು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಆಗಿರುವುದರಿಂದ ನಾನು ಕರ್ನಾಟಕದ ಪರ..!"

- ವೆಂಕಯ್ಯ ನಾಯ್ಡು ಬಿಜೆಪಿ ನಾಯಕ



"ಜನರ ಹೃದಯ ಮುಟ್ಟುವುದಕ್ಕೆ ಸಿನಿಮಾ ಮಾಡುತ್ತಿದ್ದೇನೆ. ಹಣ ಮಾಡುವುದಕ್ಕಲ್ಲ."

- ಸುದೀಪ್. ಚಿತ್ರ ನಟ

"ನಾನು ಖಾಸಗಿ ಭೇಟಿಗೆ ಮಂಗಳೂರಿಗೆ ಬಂದಿದ್ದೆ. ಆದ್ದರಿಂದಲೇ ಸರ್ಕಾರಿ ರಿವಾಜುಗಳನ್ನು ಪಾಲಿಸಲಿಲ್ಲ. ಅದರ ಹೊರತು ಬೇರೇನೂ ಗುಟ್ಟಿಲ್ಲ."

- ಎಚ್. ದಿ. ಕುಮಾರಸ್ವಾಮಿ

"ಏಪ್ರಿಲ್ 14ರ ನಂತರ ಅಭಿ-ಐಷ್ ಮದುವೆಯಾದರೆ ಐಶ್ವರ್ಯ ರಾಯ್ ಒಳ್ಳೆಯ ಹೆಂಡತಿಯಾಗುತ್ತಾಳೆ."

- ನವೀನ್ ಖನ್ನಾ, ದೆಹಲಿ ಮೂಲದ ಜ್ಯೋತಿಷಿ

ವಾರದ ಅಸಂಬದ್ಧ



"ನಮ್ಮ ವ್ಯವಸ್ಥೆ ಸರಿ ಇಲ್ಲದೇ ಇರಬಹುದು. ಆದರೆ ಅದಕ್ಕೆ ನಕ್ಸಲಿಸಂ ಪರ್ಯಾಯ ಅಲ್ಲ. ಸಮಾನತೆಯ ಪ್ರಶ್ನೆಗೆ ಆಯುಧ ಉತ್ತರ ಅಲ್ಲ. ರಕ್ತದ ನೆಲದಲ್ಲಿ ಶಾಂತಿಯ ಬೀಜ ಎಂದೂ ಮೊಳಕೆಯೊಡೆಯುವುದಿಲ್ಲ."

- ರಾಜಶೇಖರ ರಾವ್
'ಒಂದು ಪ್ರೀತಿಯ ಕಥೆ'ಯ ನಿರ್ದೇಶಕ

ವಾರದ ಅವಿವೇಕ

"ವಿಶ್ವದಲ್ಲಿ ಬೇರೆಲ್ಲೂ ಹಿಂದುಳಿದಿರುವಿಕೆಗೆ ಜಾತಿಯನ್ನು ಮಾನದಂಡವಾಗಿ ಬಳಸುವುದಿಲ್ಲ."


-ಒಬಿಸಿ ಮೀಸಲಾತಿಯನ್ನು ತಡೆಹಿಡಿಯುತ್ತಾ ಸುಪ್ರೀಂಕೋರ್ಟು

ವಾರದ ಸುಳ್ಳು

"ಸಮಾಜ ಮತ್ತು ಕೈಗಾರಿಕಾಭಿವೃದ್ಧಿ ನಡುವೆ ವೈರುಧ್ಯವೇಕಿರಬೇಕೆಂಬುದೇ ನನಗೆ ಅರ್ಥವಾಗುತ್ತಿಲ್ಲ."

- ಮನಮೋಹನ್ ಸಿಂಗ್

ವಾರದ ವಿವೇಕ



"ಕನ್ನಡವನ್ನು ಉಳಿಸಲು ಸಮ್ಮೇಳನಗಳನ್ನು ಮಾಡುವುದರಿಂದ ಪ್ರಯೋಜನವಿಲ್ಲ. ಬದಲಿಗೆ ಕನ್ನಡ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದೊಂದೇ ಮಾರ್ಗ."

- ಚಂದ್ರಶೇಖರ ಕಂಬಾರ

ಸಂಪುಟ:3 ಸಂಚಿಕೆ :5



ಕಂಡಹಾಗೆ

ಭಾರತ ವಿಭಜನೆಗೊಂಡಿದೆ

"ಪ್ರಜಾಪ್ರಭುತ್ವದ ಹೆಸರಲ್ಲಿ ನಾವೆಲ್ಲರೂ ನಮ್ಮ ಸ್ವಾತಂತ್ರ್ಯವನ್ನು ಹಲವರ ಕೈಗಳಿಗೆ ನೀಡಿದ್ದೇವೆ. ಆದರೆ ಅವರು ಅದನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ನಮ್ಮ ಸ್ವಾತಂತ್ರ್ಯವನ್ನೇ ಇತರರಿಗೆ ಮಾರಾಟ ಮಾಡುತ್ತಿದ್ದಾರೆ. ಇದು ಜಗತ್ತಿನೆಲ್ಲೆಡೆ ನಡೆಯುತ್ತಿದೆ. ಈಗ ನಾವು ಪ್ರಜೆಗಳಾಗಿ ನಮ್ಮ ಸ್ವಾತಂತ್ರ್ಯವನ್ನು ಹಿಂದಕ್ಕೆ ಪಡೆಯಲು ಹೊಸ ಯುದ್ಧವನ್ನು ಪ್ರಾರಂಭಿಸಬೇಕಿದೆ. ಇಂತಹ ಯದ್ಧಕ್ಕೆ ಕ್ರಾಂತಿ ಎಂದು ಕರೆಯುತ್ತಾರೆ"....

ಈ ಮಾತುಗಳನ್ನು ಆಡಿರುವವರು ಇವತ್ತು ಈ ದೇಶದಲ್ಲಿ ಮತ್ತು ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅರ್ಥಮಾಡಿಕೊಂಡು ಅವೆಲ್ಲವುಗಳ ಬಗ್ಗೆ ಸ್ಪಷ್ಟತೆ, ಸೌಮ್ಯತೆ, ಸ್ವಾಭಿಮಾನ ಮತ್ತು ಸಹಾನುಭೂತಿಯಿಂದ ಚಿಂತಿಸುತ್ತಿರುವ, ಬರೆಯುತ್ತಿರುವ ಆರುಂಧತಿ ರಾಯ್. ಇವತ್ತು ಜಾಗತೀಕರಣದಿಂದಾಗುತ್ತಿರುವ ಅನ್ಯಾಯಗಳ ಬಗ್ಗೆಯಾಗಲಿ, ಖಾಸಗೀಕರಣದ ಹೆಸರಿನಲ್ಲಿ ನಡೆಯುತ್ತಿರುವ ದರೋಡೆ ಬಗ್ಗೆಯಾಗಲಿ, ಉದಾರೀಕರಣದ ಹೆಸರಲ್ಲಿ ನಮ್ಮ ನೆಲ, ಜಲ, ನೈಸರ್ಗಿಕ ಸಂಪತ್ತುಗಳನ್ನು ಲೂಟಿ ಮಾಡುತ್ತಿರುವ ಬಗ್ಗೆಯಾಗಲಿ, ಪ್ರದೇಶ-ದೇಶದ ಹೆಸರಲ್ಲಿ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆಯಾಗಲಿ ಅತಿ ಸ್ಪಷ್ಟವಾಗಿ ಚಿಂತಿಸುತ್ತಿರುವ ಮತ್ತು ಸರಳವಾಗಿ ವ್ಯಕ್ತಪಡಿಸುತ್ತಿರುವ ಚಿಂತಕಿ ಈಕೆ.

ಅಣು ಅಸ್ತ್ರದ ವಿರೋಧಿ ಧೋರಣೆಯಿಂದ ಹಿಡಿದು, ಅಮೆರಿಕದ ಸಾಮ್ರಾಜ್ಯಶಾಹಿ ಸಿದ್ಧಾಂತವನ್ನು ದಾಟಿ, ಭಾರತದಂತಹ ಪ್ರಜಾಪ್ರಭುತ್ವದಲ್ಲಿ ಯಾಕೆ ನರ್ಮದಾ ಬಚಾವೋ ಆಂದೋಲನದಂತಹ ಅಹಿಂಸಾತ್ಮಕ ಮತ್ತು ಪ್ರಜಾಸತ್ತಾತ್ಮಕ ಹೋರಾಟಗಳು ವಿಫಲಗೊಂಡವು ಎಂಬುದನ್ನೂ ಯಾವ ಹಿಂಜರಿಕೆ ಇಲ್ಲದೆ ನೇರವಾಗಿ ವಿಶ್ಲೇಷಿಸುತ್ತಿರುವ ಏಕೈಕ ಬರಹಗಾರ್ತಿ ಈಕೆ.

ಇವತ್ತು ಅಮೆರಿಕಾದಂತಹ ಸಾಮ್ರಾಜ್ಯಶಾಹಿ ಸರಕಾರ ದೇಶಗಳನ್ನೇ ಆಕ್ರಮಿಸಿಕೊಳ್ಳುತ್ತಿದೆ. ಕಮ್ಯುನಿಸ್ಟರು ಜನಪರ ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸುತ್ತಿದ್ದಾರೆ (ಪಶ್ಚಿಮ ಬಂಗಾಳದ ನಂದೀಗ್ರಾಮ, ಚೈನಾದ ಟಿಯಾನನ್‌ಮೆನ್ ಸ್ಕ್ವೇರ್, ರಷ್ಯಾದ ಚೆಚೆನ್ಯಾ ಸ್ವಾತಂತ್ರ್ಯ ಸಂಗ್ರಾಮ). ಕಾವೇರಿ ತೀರ್ಪಿನ ವಿರುದ್ಧ ಜನ ಪ್ರತಿಭಟಿಸುತ್ತಿದ್ದಾರೆ. ಆದರೆ ತಮ್ಮ ಮನೆಯವರಿಗೂ ಗೊತ್ತಿಲ್ಲದಂತಹ 'ವೈಯಕ್ತಿಕ' ಕೆಲಸಕ್ಕೆಂದು ರಾಜ್ಯದ ಮುಖ್ಯಮಂತ್ರಿಯೇ ನಿಗೂಢವಾಗಿ ನಾಪತ್ತೆಯಾಗುತ್ತಾರೆ. ಜಾತಿ ಎಂಬ ಕ್ಷುದ್ರ ವ್ಯವಸ್ಥೆ ಇಲ್ಲದಿರುವ ದೇಶಗಳಲ್ಲೂ ಜಾತಿ ಆಧಾರಿತ ಮೀಸಲಾತಿಯನ್ನು ಯಾರೂ ಕೇಳಿಲ್ಲ ಎಂದು ನಮ್ಮ ಘನ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ...

ಎಲ್ಲೆಡೆ ಪ್ರಕ್ಷುಬ್ಧತೆ, ಸಂಘರ್ಷ, ಹೋರಾಟ. ಮೊನ್ನೆ ಮಿತ್ರರೊಬ್ಬರು ಹೇಳಿದರು "ಕಳೆದ ಎರಡು ವಾರಗಳಿಂದ ಪ್ರತಿ ದಿನ ಮೇಧಾ ಪಾಟ್ಕರ್‌ರವರ ಫೋಟೋಗಳು ಬರುತ್ತಿವೆ. ಆಕೆ ಹಲವಾರು ಅನ್ಯಾಯಗಳ ವಿರುದ್ಧದ ಪ್ರತಿಭಟನೆಗಳಲ್ಲಿ ಹಲವಾರು ಕಡೆ ಭಾಗವಹಿಸುತ್ತಿದ್ದಾರೆ. ಮೇಧಾ ಪಾಟ್ಕರ್ ಪಾಲ್ಗೊಂಡಿದ್ದರಿಂದ ಆ ಪ್ರತಿಭಟನೆಗಳ ಚಿತ್ರಗಳಾದರೂ ಬರುತ್ತಿದೆ. ಆಕೆ ಪಾಲ್ಗೊಳ್ಳದಿರುವ ಇನ್ನೆಷ್ಟು ಪ್ರತಿಭಟನೆಗಳು ಇವತ್ತು ನಮ್ಮ ದೇಶದಲ್ಲಿ ನಡೆಯುತ್ತಿರಬಹುದು?"

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಇಷ್ಟೊಂದು ಪ್ರತಿಭಟನೆಗಳಿಗೆ ಅರ್ಥವಿತ್ತು, ಆದರೆ ಸ್ವತಂತ್ರ ಭಾರತದಲ್ಲಿ? ಜಗತ್ತಿನಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವವಾದ ಭಾರತದಲ್ಲಿ? ಇವತ್ತು ನಿಜವಾದ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವರು ಬೀದಿಗೆ ಇಳಿಯುತ್ತಿದ್ದಾರೆ. ಆದರೆ ಪ್ರಜಾಪ್ರಭುತ್ವವೆಂದರೇ ಚುನಾವಣೆಗಳು (ಅವು ಭ್ರಷ್ಟಗೊಂಡಿವೆ ಎಂದು ಗೊತ್ತಿದ್ದರೂ) ಎಂದು ನಂಬಿರುವ ಹಲವು ಬುದ್ಧಿಜೀವಿಗಳು ಪ್ರತಿಭಟನಾಕಾರರನ್ನೇ ಲೇವಡಿಮಾಡುತ್ತಾ, ಅವರೂ ಸಹ ಪ್ರತಿಭಟನಾಕಾರರ ವಿರುದ್ಧ ಸರಕಾರಗಳು ಮಾಡಿರುವ ಆರೋಪಗಳನ್ನೇ ಮಾಡುತ್ತಾ, ನಿಷ್ಪ್ರಯೋಜಕ ಚರ್ಚೆಗಳಲ್ಲಿ ತೊಡಗಿದ್ದಾರೆ.

ಅದೆಲ್ಲ ಇರಲಿ..... ಇವತ್ತು ಎಲ್ಲೆಡೆ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಮೊನ್ನೆ 'ತೆಹೆಲ್ಕಾ' ಪತ್ರಿಕೆಯ ಶೋಮಾ ಚೌಧರಿಯವರು ಆರುಂಧತಿ ರಾಯ್‌ರವರ ಸಂದರ್ಶನವನ್ನು ಮಾಡಿದ್ದಾರೆ. ಈ ಸಂದರ್ಶನದಲ್ಲಿ ನಮ್ಮೆಲ್ಲರನ್ನೂ ಕಾಡುತ್ತಿರುವ ವಿಷಯಗಳ ಬಗ್ಗೆ ಆರುಂಧತಿ ರಾಯ್‌ರವರು ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಅದು ನಮ್ಮ ಓದುಗರಿಗೂ ಸಿಗುವಂತಾಗಲಿ ಎಂದು ಅನುವಾದಿಸಿ ಇಲ್ಲಿ ನೀಡಿದ್ದೇನೆ.

ಪ್ರಶ್ನೆ: ಇವತ್ತು ದೇಶದೆಲ್ಲೆಡೆ ಹಿಂಸೆ ಹೆಚ್ಚಾಗುತ್ತಿರುವ ವಾತಾವರಣ ಸೃಷ್ಟಿಯಾಗಿದೆ. ಇವುಗಳ ಸಂಕೇತಗಳನ್ನು ನೀವು ಹೇಗೆ ಗುರುತಿಸುತ್ತೀರ?

ಉತ್ತರ: ಹೆಚ್ಚುತ್ತಿರುವ ಹಿಂಸೆಯ ಸಂಕೇತಗಳನ್ನು ಗುರುತಿಸುವುದಕ್ಕೆ ಯಾರೂ ಜೀನಿಯಸ್ ಆಗಿರಬೇಕಿಲ್ಲ, ಕೊಳ್ಳುಬಾಕ ಸಂಸ್ಕೃತಿ ಮತ್ತು ಲೋಭವನ್ನೇ ತನ್ನ ಮೂಲಭೂತ ಸಿದ್ಧಾಂತವನ್ನಾಗಿಸಿಕೊಂಡಿರುವ ಮಧ್ಯಮ ವರ್ಗ ಬೆಳೆಯುತ್ತಿದೆ. ಕೈಗಾರಿಕೀಕರಣಗೊಳ್ಳುತ್ತಿದ್ದ ಪಾಶ್ಚಿಮಾತ್ಯ ದೇಶಗಳಿಗೆ ತನ್ನ ಮಧ್ಯಮವರ್ಗದ ದಾಹಗಳನ್ನು ಇಂಗಿಸಲು ಅವು ಆಕ್ರಮಿಸಿಕೊಂಡಿದ್ದ ವಸಾಹತು ನಾಡುಗಳಲ್ಲಿನ ಸಂಪತ್ತುಗಳಿದ್ದವು. ಅಲ್ಲಿ ಜೀತದಾಳುಗಳನ್ನಾಗಿಸಿಕೊಳ್ಳಬಲ್ಲ ಮಾನವ ಸಂಪನ್ಮೂಲಗಳಿದ್ದವು. ಆದರೆ ನಾವು ನಮ್ಮವರನ್ನೇ, ನಮ್ಮ ಕೆಳಗಿನ ಅಂಗಗಳನ್ನೇ ವಸಾಹತುಪಡಿಸಿಕೊಳ್ಳಬೇಕಿದೆ. ಆದ್ದರಿಂದ ನಾವು ನಮ್ಮ ಕೈಕಾಲುಗಳನ್ನೇ ಭಕ್ಷಿಸಲಾರಂಭಿಸಿದ್ದೇವೆ. ಲೋಭವನ್ನೇ ವಿಕಾಸಗೊಳಿಸುತ್ತಿರುವ — ಅದನ್ನೇ ರಾಷ್ಟ್ರೀಯ ತತ್ವ ಎಂಬಂತೆ ಮಾರಾಟ ಮಾಡುತ್ತಿರುವ — ಈ ಸಂದರ್ಭದಲ್ಲಿ ಅಸಹಾಯಕರಿಂದ ಭೂಮಿ, ನೀರು ಮತ್ತು ಸಂಪತ್ತನ್ನು ಕಸಿದುಕೊಳ್ಳುವುದರಿಂದ ಮಾತ್ರ ನಮ್ಮ ಮಧ್ಯಮವರ್ಗದ ದಾಹವನ್ನು ತಣಿಸಲಾಗುತ್ತದೆ.

ನಾವು ಇವತ್ತು ನೋಡುತ್ತಿರುವುದು ಸ್ವತಂತ್ರ ಭಾರತದಲ್ಲಿ ಯಶಸ್ವಿಯಾಗಿರುವ ಏಕೈಕ ಪ್ರತ್ಯೇಕತಾ ಹೋರಾಟ-ಮಧ್ಯಮ ಮತ್ತು ಮೇಲುವರ್ಗದವರು ಇತರರ ಭಾರತದಿಂದ ಪಡೆದಿರುವ ಪ್ರತ್ಯೇಕತೆಯ ಯಶಸ್ಸು. ಜಗತ್ತಿನ ಉತ್ಕೃಷ್ಟ ಜನರೊಂದಿಗೆ ವಿಲೀನಗೊಳ್ಳಲು ಹಪಹಪಿಸುತ್ತಿರುವ ಈ ಮಧ್ಯಮ-ಮೇಲುವರ್ಗದ ಜನ ಈಗಾಗಲೇ ಇಲ್ಲಿನ ಸಂಪತ್ತು, ಇದ್ದಿಲು, ಗಣಿ, ಅಲ್ಯುಮಿನಿಯಂ, ನೀರು, ವಿದ್ಯುತ್.... ಎಲ್ಲದರ ಮೇಲೆ ಹತೋಟಿ ಹೊಂದಿದ್ದಾರೆ. ಸರ್ವೋನ್ನತ ರಾಷ್ಟ್ರದ ಸರ್ವೋನ್ನತ ಪ್ರಜೆಗಳಾಗಿ ಅವರು ಹೆಚ್ಚು ಕಾರುಗಳನ್ನು, ಹೆಚ್ಚು ಬಾಂಬುಗಳನ್ನು, ಹೆಚ್ಚು ಗಣಿಗಳಂತಹ ಸರ್ವೋನ್ನತ ಆಟಿಕೆಗಳನ್ನು ತಯಾರಿಸಲು ಹವಣಿಸುತ್ತಿದ್ದಾರೆ. ಅದಕ್ಕೇ ಇವತ್ತು ನೇರ ಯುದ್ಧ ನಡೆಯುತ್ತಿದೆ ಮಾತ್ರವಲ್ಲ, ಆಯಾ ಕಡೆ ಇರುವ ಜನ ತಮಗೆ ಬೇಕಿರುವ ಆಯುಧಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ವಿಶ್ವ ಬ್ಯಾಂಕ್, ಎಡಿಬಿ, ಎಫ್‌ಡಿಐ, ನ್ಯಾಯಾಲಯಗಳು ನೀಡಿರುವ ಅನುಕೂಲ ತೀರ್ಪುಗಳು, ತಮಗೆ ಬೇಕಾದಂತಹ ನಿಯಮಗಳನ್ನು ರೂಪಿಸುವ ನಾಯಕರು, ತಮ್ಮನ್ನು ಬೆಂಬಲಿಸುವ ಮಾಧ್ಯಮಗಳು ಮತ್ತು ಇವೆಲ್ಲವುಗಳನ್ನು ಜನರ ಗಂಟಲಿಗೆ ತುರುಕುವ ಪೊಲೀಸ್ ವ್ಯವಸ್ಥೆಯನ್ನೇ ತಮ್ಮ ಆಯುಧಗಳಾಗಿ ಸರ್ಕಾರ ಮತ್ತು ಕಾರ್ಪೊರೇಟ್‌ಗಳು ಆಯ್ಕೆ ಮಾಡುತ್ತಿವೆ. ಆದರೆ ಈ ಪ್ರಕ್ರಿಯೆಯನ್ನು ವಿರೋಧಿಸುವ ಜನ ಇಲ್ಲಿಯವರೆಗೂ ಆಯ್ಕೆ ಮಾಡಿಕೊಂಡಿದ್ದ ಆಯುಧಗಳೆಂದರೆ ಧರಣಿ, ಸತ್ಯಾಗ್ರಹ, ಉಪವಾಸ, ಪ್ರತಿಭಟನೆ ಮತ್ತು ತಮ್ಮ ಪರವಾಗಿದೆ ಎಂದು ಭಾವಿಸಿದ್ದ ನ್ಯಾಯಾಲಯಗಳು ಹಾಗೂ ಮಾಧ್ಯಮಗಳನ್ನು. ಆದರೆ ಈಗ ಅವರಲ್ಲಿ ಹೆಚ್ಚು ಹೆಚ್ಚು ಜನ ಶಸ್ತ್ರಾಸ್ತ್ರಗಳತ್ತ ಕೈಚಾಚುತ್ತಿದ್ದಾರೆ. ಇದೆಲ್ಲದರಿಂದ ಹಿಂಸೆ ಉಲ್ಬಣಿಸುತ್ತದೆಯೇ? ಎಲ್ಲಿಯವರೆಗೆ ಸರಕಾರ 'ಅಭಿವೃದ್ಧಿಯ ಸಂಖ್ಯೆ' ಮತ್ತು ಸೆನ್ಸೆಕ್ಸ್‌ನ ಪ್ರಗತಿಯನ್ನೇ ಈ ದೇಶದ ಪ್ರಗತಿ ಮತ್ತು ಜನಸಾಮಾನ್ಯರ ನೆಮ್ಮದಿ ಎಂದು ಪರಿಗಣಿಸುತ್ತದೆಯೋ ಅಲ್ಲಿಯವರೆಗೂ ಇದು ಉಲ್ಬಣಗೊಳ್ಳುತ್ತಲೇ ಇರುತ್ತದೆ. ಇದೆಲ್ಲದರ ಸಂಕೇತಗಳನ್ನು ಗುರುತಿಸುವುದು ಹೇಗೆ? ಅದು ಅಷ್ಟು ಕಷ್ಟವಲ್ಲ, ಈಗಾಗಲೇ ಇವು ತಾರಕಕ್ಕೆ ಏರಿದೆ.....



ಪ್ರಶ್ನೆ: ನೀವು ಸ್ವತಃ ಹಿಂಸಾಮಾರ್ಗವನ್ನು ಆಯ್ಕೆ ಮಾಡಿಕೊಳ್ಳದಿದ್ದರೂ, ಅಂತಹ ಮಾರ್ಗವನ್ನು ಖಂಡಿಸಲಾಗುವುದಿಲ್ಲ ಎಂದಿದ್ದೀರಿ. ಈ ನಿಮ್ಮ ಅಭಿಪ್ರಾಯವನ್ನು ವಿವರಿಸುತ್ತೀರಾ?

ಉತ್ತರ: ನನಗನ್ನಿಸುವುದು ಇಷ್ಟು: ಹಲವಾರು ದಶಕಗಳಿಂದ ನಮ್ಮ ದೇಶದಲ್ಲಿ ನಡೆದಿರುವ ಅಹಿಂಸಾತ್ಮಕ ಹೋರಾಟಗಳೆಲ್ಲವೂ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಎಲ್ಲಾ ಸಂಸ್ಥೆಗಳ ಬಾಗಿಲುಗಳನ್ನು ತಟ್ಟಿವೆ ಮಾತ್ರವಲ್ಲ, ಅವುಗಳಿಂದ ತಿರಸ್ಕಾರ ಮತ್ತು ಅವಮಾನಕ್ಕೆ ಗುರಿಯಾಗಿವೆ. ಉದಾಹರಣೆಗೆ ಭೂಪಾಲ್ ಅನಿಲ ದುರಂತಕ್ಕೆ ಬಲಿಯಾದವರ ಹೋರಾಟ ಮತ್ತು ನರ್ಮದಾ ಬಚಾವೋ ಆಂದೋಲನದ ಹೋರಾಟಗಳಿಗೆ ಏನಾಯಿತು ಎಂಬುದನ್ನು ನೋಡಿ. ಈ ಅಹಿಂಸಾತ್ಮಕ ಹೋರಾಟಗಳು ವಿಫಲವಾಗಿದ್ದು ಯಾಕೆ? ಇವತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮೂಹಿಕ ಅಸಹಕಾರ ಚಳವಳಿ ಸಾಧ್ಯವೇ? ಕಾರ್ಪೊರೇಟ್‌ಗಳ ಹಿಡಿತದಲ್ಲಿರುವ ಮಾಧ್ಯಮಗಳು ನಡೆಸುವ ಅಪಪ್ರಚಾರದ ಇಂದಿನ ಯುಗದಲ್ಲಿ ಅಂತಹ ಆಂದೋಲನ ಸಾಧ್ಯವೇ? ಇವತ್ತು ಸಂಗ್ಹಾ ಮಾಚಿ ಅಥವಾ ಭಟ್ಟ ಗಣಿಗಳ ಜನ ಉಪವಾಸ ಧರಣಿ ಕೂತರೆ ಯಾರೂ ಅವರತ್ತ ಗಮನ ಹರಿಸುವುದಿಲ್ಲ, ಇರೋಮ್ ಶರ್ಮಿಳಾ ಆರು ವರ್ಷಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾಳೆ. ಅದು ಇಲ್ಲಿಯವರೆಗೂ ಫಲ ನೀಡಿಲ್ಲದಿರುವುದು ನಮ್ಮೆಲ್ಲರಿಗೂ ಪಾಠವಾಗಬೇಕಿದೆ. ಇದೆಂತಹ ವಿಪರ್ಯಾಸ ನೋಡಿ.... ಇಲ್ಲಿನ ಬಹಳಷ್ಟು ಜನರು ಹಸಿವಿನ ಜೊತೆ ಜೀವನವನ್ನು ಸಾಗಿಸುತ್ತಿರುವಾಗ ಉಪವಾಸ ಸತ್ಯಾಗ್ರಹವೇ ಇಲ್ಲೊಂದು ರಾಜಕೀಯ ಅಸ್ತ್ರವಾಗಿದೆ! ನಾವು ಇವತ್ತು ಹೊಸ ಯುಗ ಮತ್ತು ಹೊಸ ಸಂದರ್ಭದಲ್ಲಿ ಬದುಕುತ್ತಿದ್ದೇವೆ. ಅಷ್ಟೇ ಅಲ್ಲ ಸಂಕೀರ್ಣ ಆಯಾಮಗಳನ್ನು ಹೊಂದಿರುವ ಹೊಸ ಎದುರಾಳಿಗಳನ್ನು ಎದುರಿಸುತ್ತಿದ್ದೇವೆ.

ಹಿಂದೆಲ್ಲ ಸಾಮೂಹಿಕ ಹೋರಾಟಗಳು ನ್ಯಾಯಕ್ಕಾಗಿ ನ್ಯಾಯಾಲಯಗಳನ್ನೇ ನಂಬಿದ್ದವು. ಆದರೆ ಇತ್ತೀಚೆಗೆ ನ್ಯಾಯಾಲಯಗಳೂ ಸಹ ಅನ್ಯಾಯಯುತ ಮತ್ತು ಬಡಜನ ವಿರೋಧಿ ತೀರ್ಪುಗಳನ್ನೇ ನೀಡಿವೆ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪೊಂದರಲ್ಲಿ ಕಾರ್ಪೊರೇಟ್‌ಗಳು ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳಿದೆ. ಜಾಗತೀಕರಣದ ಈ ಯುಗದಲ್ಲಿ ಕಾರ್ಪೊರೇಟ್‌ಗಳು ಭೂಕಬಳಿಕೆಗೆ ಇಳಿದಿರುವಾಗ, ಎನ್ರಾನ್, ಮಾನ್ಸಂಟೋ, ಹ್ಯಾಲಿಬರ್ಟನ್ ಮತ್ತು ಬೆಕ್ಟೆಲ್‌ನಂತಹ ಕಂಪೆನಿಗಳು ದರ್ಬಾರು ನಡೆಸುತ್ತಿರುವಾಗ ಅಂತಹ ತೀರ್ಪು ಅನುಚಿತವಾದದ್ದೇ ಆಗಿದೆ. ಅಷ್ಟೇ ಅಲ್ಲ ನಮ್ಮ ಅತಿ ಶಕ್ತಿಯುತ ಸಂಸ್ಥೆಯೊಂದರ ಹೃದಯದಲ್ಲಿ ಅಡಗಿರುವ ಧೋರಣೆಯನ್ನು ಬಯಲುಗೊಳಿಸುತ್ತದೆ.

ಇಂತಹ ವಾತಾವರಣದಲ್ಲಿ ಅಂತ್ಯವೇ ಇಲ್ಲದಂತಿರುವ ಪ್ರಜಾಸತ್ತಾತ್ಮಕ ಹೋರಾಟಗಳಿಂದ ಸಿಗುವುದು ಅವಮಾನ ಮಾತ್ರ ಎಂಬುದು ಗೊತ್ತಾಗಿ ಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಿರುವ ಜನ ಇನ್ನೇನು ಮಾಡುತ್ತಾರೆಂದು ನಿರೀಕ್ಷಿಸಬೇಕು? ಹೌದು, ಹಿಂಸೆ ಮತ್ತು ಪ್ರತಿಹಿಂಸೆ ಎಂಬುದು ಜೋಡಿ ಆಯ್ಕೆಗಳಲ್ಲ, ಹಲವು ರಾಜಕೀಯ ಪಕ್ಷಗಳು ತಮ್ಮ ಹೋರಾಟದ ಒಂದು ಅಂಗವಾಗಿ ಸಶಸ್ತ್ರ ಹೋರಾಟವನ್ನು ಇಟ್ಟುಕೊಂಡಿವೆ. ಇಂತಹ ರಾಜಕೀಯ ಪಕ್ಷಗಳ ಹೋರಾಟಗಾರರನ್ನು ಅಮಾನುಷವಾಗಿ ಸದೆಬಡಿಯಲಾಗಿದೆ, ಕಲ್ಪಿತ ಆರೋಪಗಳ ಮೇಲೆ ಬಂಧಿಸಲಾಗಿದೆ ಅಥವಾ ಕೊಲ್ಲಲಾಗಿದೆ. ಅವರಿಗೆಲ್ಲಾ ಚೆನ್ನಾಗಿಯೇ ಗೊತ್ತು, ಭಾರತ ಸರ್ಕಾರ ಚಲಾಯಿಸುವ ಹಲವಾರು ರೀತಿಯ ಹಿಂಸೆಗಳಿಗೆ ತಾವು ತುತ್ತಾಗುತ್ತೇವೆ ಎಂಬುದು ಆ ಪಕ್ಷಗಳ ಸಶಸ್ತ್ರ ಸದಸ್ಯರಿಗೆ ಚೆನ್ನಾಗಿಯೇ ಗೊತ್ತು, ಯಾವ ಕ್ಷಣ ಸಶಸ್ತ್ರ ಹೋರಾಟವೇ ನಿಮ್ಮ ತಂತ್ರವಾಗುತ್ತದೆಯೋ ಆಗ ಜಗತ್ತಿನ ವಿವಿಧ ಬಣ್ಣಗಳು ಮಾಯವಾಗಿ ಕಪ್ಪು ಮತ್ತು ಬಿಳುಪು ಮಾತ್ರ ಉಳಿದುಕೊಳ್ಳುತ್ತದೆ. ಆದರೆ ತಮ್ಮ ಹೋರಾಟದ ಮುಂದಿನ ಆಯ್ಕೆಗಳು ಬಂದ್ ಆಗಿದೆ ಎಂದು ಗೊತ್ತಾದ ನಂತರ ಅವರು ಸಶಸ್ತ್ರ ಹೋರಾಟವನ್ನೇ ಆಯ್ಕೆ ಮಾಡಿಕೊಂಡರೆ ನಾವು ಅವರನ್ನು ಹೇಗೆ ಖಂಡಿಸಲು ಸಾಧ್ಯ? ನಂದಿಗ್ರಾಮದ ಜನರು ಧರಣಿಯನ್ನು ಹೂಡಿ, ಹಾಡುಗಳನ್ನು ಹಾಡಿದ್ದರೆ ಪಶ್ಚಿಮ ಬಂಗಾಳ ಸರ್ಕಾರ ಹಿಂದೆ ಸರಿಯುತ್ತಿತ್ತು ಎಂದು ಯಾರಾದರೂ ನಂಬುವುದಕ್ಕೆ ಸಾಧ್ಯವೇ? ನಾವು ಇವತ್ತು ಎಂತಹ ಸಮಯದಲ್ಲಿ ಬದುಕುತ್ತಿದ್ದೇವೆಂದರೆ, ನಾವು ಅಸಮರ್ಥ ಹೋರಾಟಗಳಲ್ಲಿ ತೊಡಗಿಸಿಕೊಂಡಷ್ಟೂ ಈ ವ್ಯವಸ್ಥೆಯನ್ನು ಬೆಂಬಲಿಸಿದಂತಾಗುತ್ತದೆ. (ಅಂತಹ ನಿರುಪದ್ರವಿ ಹೋರಾಟಗಳೇ ನಮ್ಮಲ್ಲಿ ಹಲವರಿಗೆ ಇಷ್ಟ ಎಂಬುದು ಬೇರೆ ಮಾತು). ಆದರೆ ಪರಿಣಾಮಕಾರಿ ಹೋರಾಟಗಳಲ್ಲಿ ತೊಡಗಿರುವವರು ಅದಕ್ಕೆಂದು ಆಘಾತಕಾರಿ ಬೆಲೆಯನ್ನೇ ತೆರಬೇಕಿದೆ. ಆ ಬೆಲೆಯನ್ನು ತೆರಲು ಮುಂದಾಗಿರುವವರನ್ನು ಖಂಡಿಸಲು ನನ್ನಿಂದ ಸಾಧ್ಯವಿಲ್ಲ.

ಪ್ರಶ್ನೆ: ಇತ್ತೀಚೆಗೆ ನೀವು ಹಲವಾರು ಸೂಕ್ಷ್ಮ ಪ್ರದೇಶಗಳಿಗೆ ಭೇಟಿ ನೀಡಿದ್ದೀರಿ. ಅಲ್ಲೆಲ್ಲ ಎಂತಹ ಯುದ್ಧಗಳು ನಡೆಯುತ್ತಿವೆ ಎಂಬುದರ ಬಗ್ಗೆ ವಿವರಿಸುತ್ತೀರಾ?

ಉತ್ತರ: ಕಾಶ್ಮೀರದಲ್ಲಿ ಸೈನ್ಯದ ಆಕ್ರಮಣ, ಗುಜರಾತಿನಲ್ಲಿ ನವ ಫ್ಯಾಸಿಸಂ, ಛತ್ತೀಸ್‌ಗಢ್‌ನಲ್ಲಿ ಅಂತರ್‌ಯುದ್ಧ, ಒರಿಸ್ಸಾವನ್ನೇ ರೇಪ್ ಮಾಡುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳು, ನರ್ಮದಾ ಕಣಿವೆಯಲ್ಲಿ ನೂರಾರು ಹಳ್ಳಿಗಳ ಮುಳುಗಡೆ, ಹಸಿವಿನಿಂದ ಸಾವಿನ ಬಾಗಿಲಲ್ಲಿ ನಿಂತಿರುವ ಜನ, ಕಾಡುಗಳ ನಾಶ, ನ್ಯಾಯ ಸಿಗದೇ ಇರುವ ಭೂಪಾಲ್ ಅನಿಲ ದುರಂತದ ಜನ ತಮ್ಮ ಕಣ್ಣಮುಂದೆಯೇ ತಮ್ಮ ದುರಂತಕ್ಕೆ ಕಾರಣವಾದ ಯೂನಿಯನ್ ಕಾರ್ಬೈಡ್ ಕಂಪನಿಗೆ- ಅದರ ಈಗಿನ ಹೆಸರು ಡವ್ ಕೆಮಿಕಲ್ಸ್ - ಪಶ್ಚಿಮ ಬಂಗಾಳಕ್ಕೆ ಕೆಂಪು ಕಂಬಳಿ ಹಾಸಿ ಆಹ್ವಾನಿಸುತ್ತಿರುವ ಸರ್ಕಾರ, ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಆತ್ಮಹತ್ಯೆಗೆ ಶರಣಾಗಿರುವ ಲಕ್ಷಾಂತರ ರೈತರು, ಆಂಧ್ರ ಪ್ರದೇಶದಲ್ಲಿ ನಡೆಯುತ್ತಿರುವ ದಬ್ಬಾಳಿಕೆ ಮತ್ತು ಕೊಟ್ಟಿ ಎನ್‌ಕೌಂಟರ್‌ನಲ್ಲಿ ಸತ್ತಿರುವ ಜನರು.... ಪ್ರತಿಯೊಂದು ಪ್ರದೇಶವೂ ತನ್ನದೇ ಆದ ಇತಿಹಾಸ, ಆರ್ಥಿಕ ಪರಿಸ್ಥಿತಿ, ನೈಸರ್ಗಿಕ ಸಂಪತ್ತುಗಳನ್ನು ಹೊಂದಿದೆ. ಇವ್ಯಾವುದನ್ನೂ ಒಂದೇ ಸೂತ್ರದ ಅಡಿ ತರಲಾಗುವುದಿಲ್ಲ. ಆದರೆ ಇವೆಲ್ಲವುಗಳ ಮೇಲೆ ಬೃಹದಾಕಾರವಾದ ಅಂತರರಾಷ್ಟ್ರೀಯ ಸಾಂಸ್ಕೃತಿಕ ಮತ್ತು ಆರ್ಥಿಕ ಒತ್ತಡವನ್ನು ಹೇರಲಾಗುತ್ತಿರುವುದೇ ಈ ಎಲ್ಲಾ ದುರಂತಗಳ ನಡುವೆ ಇರುವ ಸಮಾನ ಅಂಶ.

ಇದೆಲ್ಲದರೊಂದಿಗೆ ಅಂತರಾಳದಲ್ಲಿ ಹರಡುತ್ತಿರುವ ಹಿಂದೂತ್ವ ಎಂಬ ಸಿದ್ಧಾಂತ ಯಾವ ಗಳಿಗೆಯಲ್ಲಾದರೂ ಸ್ಫೋಟಗೊಳ್ಳಬಹುದೆಂಬುದನ್ನು ಹೇಗೆ ನಿರ್ಲಕ್ಷಿಸಲಾದೀತು? ಅದಕ್ಕಿಂತ ಮಿಗಿಲಾಗಿ ಒಂದು ದೇಶವಾಗಿ, ಸಂಸ್ಕೃತಿಯಾಗಿ, ಸಮುದಾಯವಾಗಿ ಇವತ್ತಿಗೂ ಅಸ್ಪೃಶ್ಯತೆ ಎಂಬಂತಹ ಆಚರಣೆಯನ್ನು ಪೋಷಿಸುತ್ತಾ, ಪಾಲಿಸುತ್ತಾ ಬಂದಿರುವ ಜನ ನಾವು. ಇದನ್ನು ಖಂಡಿಸದೇ ಬೇರೆ ಮಾರ್ಗವಿಲ್ಲ. ನಮ್ಮ ಆರ್ಥಿಕ ತಜ್ಞರು ಅಂಕಿಅಂಶಗಳನ್ನು ನೀಡುತ್ತಾ 'ನಮ್ಮ ದೇಶ ಪ್ರಗತಿಯ ಪಥದಲ್ಲಿದೆ' ಎಂದು ಕೊಂಡಾಡುತ್ತಿರುವಾಗಲೇ ಇವತ್ತಿಗೂ ನಮ್ಮ ದೇಶದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನರು ಪ್ರತಿನಿತ್ಯ ಇತರರ ಮಲವನ್ನು ತಮ್ಮ ತಲೆಯ ಮೇಲೆ ಹೊರುವ ಮೂಲಕ ಜೀವನ ಸಾಗಿಸುತ್ತಿದ್ದಾರೆ. ಅವರು ಹಾಗೆ ಇತರರ ಮಲವನ್ನು ಹೊತ್ತೊಯ್ಯದಿದ್ದರೆ ಹಸಿವಿನ ಸಾವೇ ಅವರಿಗೆ ಕಾದಿರುವ ಗತಿ. ನೈತಿಕವಾಗಿ ಸತ್ತಿರುವ ಈ ದೇಶವನ್ನು ಅದ್ಹೇಗೆ ಸರ್ವೋನ್ನತ ರಾಷ್ಟ್ರ ಎಂದು ಕರೆಯಲಾದೀತು?

ಪ್ರಶ್ನೆ: ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದಿರುವ ಪೊಲೀಸರ ಹಿಂಸೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಮುಖ್ಯವಾಹಿನಿಯ ಎಲ್ಲಾ ರಾಜಕೀಯ ಪಕ್ಷಗಳು -ಎಡಪಕ್ಷಗಳೂ ಸೇರಿದಂತೆ - ಇವತ್ತು ಆಷಾಢಭೂತಿತನ ಮತ್ತು ಎಡಬಿಡಂಗಿತನದಲ್ಲಿ ತೊಡಗಿದ್ದಾವೆ. ಪಶ್ಚಿಮ ಬಂಗಾಳದಲ್ಲಿ ನಡೆದ ಹಿಂಸೆಗೂ, ಇತರೆಡೆ ಸರಕಾರ ನಡೆಸಿರುವ ಹಿಂಸೆಗೂ ವ್ಯತ್ಯಾಸಗಳಿಲ್ಲ. ಕಮ್ಯುನಿಸ್ಟರ ಗುಂಡುಗಳಿಗೂ, ಕ್ಯಾಪಿಟಲಿಸ್ಟರ ಗುಂಡುಗಳಿಗೂ ವ್ಯತ್ಯಾಸ ಎಲ್ಲಿದೆ? ಜಗತ್ತಿನಲ್ಲಿ ಇವತ್ತು ವಿಚಿತ್ರ ವಿದ್ಯಮಾನಗಳು ಜರುಗುತ್ತಿವೆ. ಇತ್ತೀಚೆಗೆ ಖಾಸಗಿಯಾಗಿ ಆಸ್ತಿಯನ್ನು ಹೊಂದುವ ಕಾನೂನನ್ನು ಅಂಗೀಕರಿಸಿದ ಚೀನಾ ದೇಶದ ಸರ್ಕಾರ 21ನೇ ಶತಮಾನದ ಅತಿ ದೊಡ್ಡ ಬಂಡವಾಳಶಾಹಿ ವಕ್ತಾರನಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಚುನಾವಣಾ ಪಕ್ಷಗಳಾದ ಎಡಪಂಥೀಯ ಪಕ್ಷಗಳಿಂದ ಬೇರೆಯದನ್ನು ನಿರೀಕ್ಷಿಸಲು ಹೇಗೆ ಸಾಧ್ಯ?

ನಂದಿಗ್ರಾಮ ಮತ್ತು ಸಿಂಗೂರು ನಮಗೆ ಸ್ಪಷ್ಟ ಸಂದೇಶಗಳನ್ನು ನೀಡಿವೆ. ಅವೆರಡೂ ಘಟನೆಗಳು ನಮ್ಮ ಎಲ್ಲ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಕಾದಿರುವ ಗತಿಯ ಬಗ್ಗೆ ಚಿಂತಿಸುವಂತೆ ಮಾಡಿವೆ. ಒಂದು ಕ್ಷಣ ಯೋಚಿಸಿ..... ಎಲ್ಲಾ ಕ್ರಾಂತಿಗಳೂ ಅಂತ್ಯಗೊಳ್ಳುವುದು ಮಾತುಕತಾಹಿಂಗಳ ತೆಕ್ಕೆಯಲ್ಲಿಯೇ? ಫ್ರಾನ್ಸಿನ ಕ್ರಾಂತಿ, ರಷ್ಯಾದ ಕ್ರಾಂತಿ, ಚೀನಾದ ಕ್ರಾಂತಿ, ವಿಯೆಟ್ನಾಂ ಯುದ್ಧ, ವರ್ಣಭೇದದ ವಿರುದ್ಧ ನಡೆದ ಚಳವಳಿ, ಭಾರತದ ಸ್ವಾತಂತ್ರ್ಯಕ್ಕೆ ಕಾರಣವಾಯಿತೆಂದು ಎಲ್ಲರೂ ನಂಬಿರುವ ಗಾಂಧಿವಾದ- ಇವೆಲ್ಲವೂ ಅಂತ್ಯಗೊಳ್ಳುತ್ತಿರುವುದು ಎಲ್ಲಿ? ಇದು ನಮ್ಮ ಕಲ್ಪನೆಯ ಅಂತ್ಯವೆ?

ಪ್ರಶ್ನೆ: ಇತ್ತೀಚೆಗೆ ಮಾವೋವಾದಿಗಳು ಬಿಜಾಪುರದಲ್ಲಿ (ಛತ್ತೀಸ್‌ಗಢ) 55 ಪೊಲೀಸರನ್ನು ಹತ್ಯೆಗೈದರು. ಇದರಿಂದ ದಂಗೆಕೋರರನ್ನು ಸರಕಾರದ ದೌರ್ಜನ್ಯದ ಇನ್ನೊಂದು ಮುಖ ಎಂದು ಕರೆಯಬಹುದೇ?

(15ನೇ ಪುಟಕ್ಕೆ)

ಕಳ್ಳ ಪರಸ್ಯಾನ ಕೊಲೆ ಪ್ರಕರಣವೂ, ಪೊಲೀಸರ ಕೈಚಳಕವೂ

ಗದಗ ಸೈಲೆಂಟ್ ಸಿಟಿ ಆಗಿ ಉಳಿದಿಲ್ಲ ಅಂತಾ ಸಾಬೀತಾಗಿದ್ದು ಮೊನ್ನೆ ರಾಜೀವಗಾಂಧಿ ನಗರದ ಪ್ರೊಫೆಷನಲ್ ಪಿಕ್ ಪಾಕೆಟರ್ ಪರಶುರಾಮ ಸಾಬೋಜಿ ಉರುಫ್ ಕಳ್ಳ ಪರಸ್ಯಾ ಕೊಲೆಯಾದಾಗ. ಸತ್ತವನೇನು ಸಾಚಾ ಆಗಿರಲಿಲ್ಲ. ಆದರೆ ಇವನಿಗೆ ಸ್ಕೆಚ್ ಹಾಕಿ ಮುಚ್ಚು ಇಟ್ಟವನ ಜೊತೆಜೊತೆಗೆ ಇಲ್ಲಿನ ಪೊಲೀಸರು ನಿರಪರಾಧಿಗಳನ್ನೂ ಜೈಲಿಗೆ ಅಟ್ಟಿದ್ದಾರೆ. ರಾಜಕಾರಣಿಗಳ ಮಾತಿಗೆ ಜೋತು ಬಿದ್ದು ಡೀಲ್ ಮುಗಿಸಿಕೊಂಡು, ಕೇಸ್ ಬುಕ್ ಮಾಡಿಕೊಂಡು ಪರಸ್ಯಾನ ಸಾವಿಗೆ ಯಾವುದೇ ರೀತಿಯಿಂದಲೂ ಸಂಬಂಧವಿಲ್ಲದವರನ್ನು ಒಳದಬ್ಬಿದ್ದಾರೆ.


ಡಿವೈಎಸ್ಪಿ ಪಾಪಯ್ಯ

ಕೊಲೆಯಾದ ಕಳ್ಳ ಪರಸ್ಯಾ ಪೊಲೀಸರ ಆತ್ಮೀಯ ಸ್ನೇಹಿತ. "ಇವಾ ಯಾಕಾರ ಸತ್ತ" ಎಂದು ಮರಮರ ಮರುಗುತ್ತಿರುವವರಲ್ಲಿ ಖಾಕಿಗಳೇ ಹೆಚ್ಚು. ಯಾಕೆಂದರೆ ಆತ ಕದ್ದ ರೊಕ್ಕದಲ್ಲಿ ಖಾಕಿಗಳಿಗೆ ನಿಯತ್ತಾಗಿ ಪಾಲು ಕೊಡುತ್ತಿದ್ದ. "ಅದಕ್ಕೇ ಏನೋ, ಅವನ ಆತ್ಮಶಾಂತಿಗಾಗಿ ನಿರಪರಾಧಿಗಳನ್ನು ಈ ಕೇಸಿನಲ್ಲಿ ಸಿಕ್ಕಾಕಿಸಿರುವುದು" ಅಂತ ಗದಗಿನ ಜನ ಮಾತಾಡಿಕೊಳ್ಳುತ್ತಿದ್ದಾರೆ.

ಪರಸ್ಯಾ ಎಂತಹ ಚಾಲಾಕಿ ಅಂದರೆ ದೇಹದ ಯಾವುದೇ ಮೂಲೆಯಲ್ಲಿ ಹಣದ ಪರ್ಸ್ ಇಟ್ಟಿದ್ದರೂ ಅದನ್ನು ನೀಟಾಗಿ ಕದಿಯುವಷ್ಟು ಅನುಭವ ಹೊಂದಿದ್ದ. ಆದ್ದರಿಂದಲೇ ಗದಗಿನ ರೈಲ್ವೆ ಪೊಲೀಸರಿಗೆ ಅತೀ ಬೇಕಾದ ವ್ಯಕ್ತಿ ಆಗಿದ್ದ. ಅದರಲ್ಲೂ ಮೊಬೈಲ್ ಬಂದ ಮೇಲೆ ಪರಸ್ಯಾನಿಗೆ ಹಬ್ಬವೋ ಹಬ್ಬ. "ಇದು ಬಂದಿದ್ದೇ ನನ್ನ ಅನ್ನಕ್ಕಾಗಿ" ಎನ್ನುತ್ತಿದ್ದ ಆತ ಗದಗ, ಹಾವೇರಿ, ಹುಬ್ಬಳ್ಳಿ ಮತ್ತು ಬೆಳಗಾಂವ್ ಜಿಲ್ಲೆಗಳನ್ನು ತನ್ನ ಕಾರ್ಯಾಚರಣೆಯ ಏರಿಯಾ ಆಗಿ ಫಿಕ್ಸ್ ಮಾಡಿಕೊಂಡಿದ್ದ. ಹೀಗೆ ಎಲ್ಲೆಡೆ ಕದ್ದ ವಸ್ತುಗಳನ್ನು ಹುಬ್ಬಳ್ಳಿ ಮಾರ್ಕೆಟ್‌ಗೆ ಬಿಡುತ್ತಿದ್ದ. ಪರಸ್ಯಾ ಗಿಫ್ಟ್ ಕೊಟ್ಟ ಕೆಲವು ದುಬಾರಿ ಮೊಬೈಲ್‌ಗಳು ಇಂದಿಗೂ ಹಿರಿಯ ಅಧಿಕಾರಿಗಳಿಂದ ಹಿಡಿದು ಪೊಲೀಸ್ ಪೇದೆಗಳ ಕೈಗಳಲ್ಲಿ ರಿಂಗನಿಸುತ್ತಿವೆ. ಕೆಲವರಂತೂ "ಇದು ಪರಸ್ಯಾನ ಮೆಮೊರಿಗೆ" ಎಂದು ಮರುಗುತ್ತಿದ್ದಾರೆ. ಸ್ಟ್ಯಾಂಡರ್ಡ್ ಕಳ್ಳ ಎನಿಸಿಕೊಂಡಿದ್ದಲ್ಲದೇ ವಿಕೃತ ಕಾಮಿ, ಹೆಣ್ಣು ಬಾಕ ಎಂಬ ಬಿರುದುಗಳನ್ನೂ ಪಡೆದಿದ್ದ ಪರಸ್ಯಾ ಕೆರವಿನ ಹೊಡ್ತಾ ತಿಂದದ್ದೇ ಜಾಸ್ತಿ. ಇಂತಹ ರೆಕಾರ್ಡ್‌ಗಳನ್ನು ಬೆನ್ನಿಗೆ ಅಂಟಿಸಿಕೊಂಡು ಓಡಾಡುತ್ತಿದ್ದ ಪರಸ್ಯಾ ಕೊಲೆಯಾಗಿದ್ದು ಹೆಣ್ಣಿನಿಂದಲೇ.


ನಾರಾಯಣಸ್ವಾಮಿ

ಸ್ನೇಹಿತನ ಹೆಂಡತಿ ಮೇಲೆ ಕಣ್ಣು

"ಇರ್ಲಿ ಬಿಡು, ಅವ ನನ್ ಸ್ನೇಹಿತ" ಎಂದು ಮನೆ ಒಳಗೆ ಸೇರಿಸಿಕೊಂಡ ಗೆಳೆಯ ರಾಜೇಸಾಬನ ಹೆಂಡತಿ ಮೇಲೆಯೇ ಪರಸ್ಯಾ ಕಣ್ಣಾಕೋದೇ? ಅಷ್ಟೇ ಅಲ್ಲಾ, ಅವಳನ್ನು ತನ್ನ ಗಿಲೀಟ್ ಮಾತುಗಳಿಂದ ಮರುಳು ಮಾಡಿ, ಗಂಡನ ವಿರುದ್ಧ ತಿರುಗಿ ಬೀಳುವಂತೆಯೂ ಮಾಡಿದ್ದ ಪರಸ್ಯಾ. ಆತನ ಹಲ್ಕಾ ಕೆಲಸಗಳ ಬಗ್ಗೆ ರಾಜೇಸಾಬ ಎಷ್ಟೇ ಹೇಳಿದರೂ ಆಕೆ ಸುಧಾರಿಸಲಿಲ್ಲ. ಪಂಚಾಯತಿ ಕರೆಸಿ ಎಲ್ಲವನ್ನು ಸರಿ ಮಾಡೋಣ ಎಂದು ಹಿರಿಯರನ್ನು ಸೇರಿಸಿದರೆ, ಗಂಡನ್ನ ಬಿಟ್ಟೇನು ಆದರೆ ಮಿಂಡನ್ನ ಬಿಡಲಾರೆ ಎಂದಳು ಗರತಿ ಗಂಗವ್ವ. ಇಷ್ಟೆಲ್ಲಾ ಆದನಂತರ ರಾಜೇಸಾಬ ಹಾಗೂ ಪರಸ್ಯಾನ ನಡುವೆ ಸಾಕಷ್ಟು ಜಗಳ ಮತ್ತು ಹೊಡೆದಾಟಗಳೂ ನಡೆದವು. ಆದರೂ ಆತನಿಗೆ ಬುದ್ಧಿ ಬರಲಿಲ್ಲ. ಕೊನೆಗೆ, ಫೆಬ್ರವರಿ 27 ರ ರಾತ್ರಿ 8-20 ರ ಸುಮಾರಿಗೆ, ಕಲ್ಯಾಣರ ಎಂಬುವವರಿಗೆ ಸೇರಿದ್ದ ಸಾರಾಯಿ ಅಂಗಡಿಯಲ್ಲಿ ಕಂಠಪೂರ್ತಿ ಕುಡಿದಿದ್ದ ಪರಸ್ಯಾ ಎಲ್ಲರ ಮುಂದೆ ತನ್ನ ಪ್ರವಚನವನ್ನು ಶುರು ಹಚ್ಚಿಕೊಂಡ. "ನನ್ನನ್ನ ಯಾರು ಏನೂ ಮಾಡಕಾಗಲ್ಲ, ಯಾವ ಮಗಂದ ಏನ್" ಎಂದು ಪರಸ್ಯಾ ಡೈಲಾಗ್ ಹೊಡೆಯುತ್ತಿದ್ದಾಗ ಇವನ ಕಥೆ ಮುಗಿಸಿಯೇ ಬಿಟ್ಟರಾಯಿತು ಎಂದು ನಿರ್ಧರಿಸಿಯೇ ರಾಜೇಸಾಬ ಮಚ್ಚು ಹಿಡಿದು ಬಂದ. ಬಂದವನೇ ಸಾರಾಯಿ ಅಂಗಡಿಯ ಹಿಂದಿನ ಬೈಲು ಜಾಗೆಗೆ ಕುಡಿದು ತೂರಾಡುತ್ತಿದ್ದ ಪರಸ್ಯಾನನ್ನು ಎಳೆದುಕೊಂಡು ಹೋಗಿ ಮಚ್ಚಿನಿಂದ ಮನಬಂದಂತೆ ಕೊಚ್ಚಿಹಾಕಿದ. ಅಲ್ಲಿಂದ ನೇರವಾಗಿ ಪೊಲೀಸ್ ಠಾಣೆಗೆ ಹೋಗಿ ಖುದ್ದು ಶರಣಾದ. "ನಿನ್ನನ್ನ ಸ್ನೇಹಿತ ಎಂದಿದ್ದಕ್ಕೆ ಸಾಯಿಸುವ ಹಂತಕ್ಕೆ ತಂದೆಯಲ್ಲಾ ಪರಸ್ಯಾ" ಎಂದು ರೊಚ್ಚಿನಿಂದ ಹೇಳುವ ರಾಜೇಸಾಬ ಇಂದು ಈ ಕೊಲೆಯ ಪ್ರಮುಖ ಆರೋಪಿ.

ರಾಜೇಸಾಬ ಈಗ ಒಳಗಿದ್ದಾನೆ. ಆದರೆ ಈ ಪ್ರಕರಣವನ್ನೇ ನೆಪ ಮಾಡಿಕೊಂಡು ಗದಗಿನ ನಗರಸಭೆಯ ಮಾಜಿ ಅಧ್ಯಕ್ಷ ಲಕ್ಷ್ಮಣ ಚಂದಾವರಿ, ಡೀಲ್ ರಾಜಾ ಎಸ್. ಎನ್. ಬಳ್ಳಾರಿ ಮತ್ತು ಗ್ಯಾಂಬ್ಲರ್ ಸುಭಾಸ ಕರಣಿ ಎಂಬ ದುರುಳರು ಜೊತೆಗೂಡಿ ಪರಸ್ಯಾನ ಕೊಲೆ ಕೇಸಿನಲ್ಲಿ ಬೇರೆಯವರ ಸ್ಕೆಚ್ ಇದೆ ಎಂದು ಹೇಳಿ ತಮಗೆ ಆಗದವರನ್ನೆಲ್ಲ ಇದರಲ್ಲಿ ಫಿಕ್ಸ್ ಮಾಡಲು ಯತ್ನಿಸುತ್ತಿದ್ದಾರೆ.



ಸಿದ್ದಪ್ಪ ಲಿಂಗದಾಳ್

ಹೇಳಿಕೇಳಿ ನಗರಸಭೆಯ ಮಾಜಿ ಅಧ್ಯಕ್ಷ ಚಂದಾವರಿ ಕೊಲೆಯಾದ ಪರಸ್ಯಾನ ದೋಸ್ತು. ಹಿಂದೊಮ್ಮೆ ತನ್ನ ದಂಧೆಗೆ ತ್ರಾಸ ಕೊಟ್ಟ ಎಂಬ ಕಾರಣಕ್ಕೆ ಸಿದ್ದಪ್ಪ ಲಿಂಗದಾಳ ಎಂಬ ದಲಿತನ ಮನೆಯ ಮೇಲೆ ಕಲ್ಲು ತೂರಿ ದಾಂಧಲೆ ಮಾಡಿದ್ದ ಪರಸ್ಯಾ. ಆಗ ಆತನ ವಿರುದ್ಧ ಸಿದ್ದಪ್ಪ, ಅವನ ಸಹೋದರ ದೇವಪ್ಪ ಮತ್ತು ಎಲ್. ನಾರಾಯಣಸ್ವಾಮಿ ಎಂಬ ಪ್ರಗತಿಪರ ಸಂಘಟನೆಗಳ ಹೋರಾಟಗಾರರು ಪೊಲೀಸರಿಗೆ ದೂರು ನೀಡಿದ್ದರು. ಆದರೆ ಅವತ್ತು ಪರಸ್ಯಾನ ನೆರವಿಗೆ ನಿಂತ ಚಂದಾವರಿ ಪೊಲೀಸ್ ಠಾಣೆಗೆ ಬಂದು ಖಾಕಿಗಳಿಗೆ ಪ್ರಸಾದ ಕೊಟ್ಟು, ಪರಸ್ಯಾನನ್ನು ಸೇಫ್ ಮಾಡಿದ್ದ. ಏಕೆಂದರೆ, ಚೋರ ಗುರು ಚಂದಾವರಿಗೆ ಪರಸ್ಯಾನೇ ಚಂಡಾಳ ಶಿಷ್ಯ!

ಚಂದಾವರಿಯ ವೃತ್ತಾಂತ

ಪಂಚಾಯತಿಯ ಅಧ್ಯಕ್ಷನಾಗಿದ್ದಾಗ ತಾನೂ ತಿಂದು, ತಿನ್ನವರಿಗೂ ಅನ್ನದಾತನಂತೆ ವರ್ತಿಸಿದ್ದ ಈ ಚಂದಾವರಿ. ಇವನ ನುಂಗಾಟಕ್ಕೆ ಸರಕಾರಿ ರಸ್ತೆಗಳೂ ಉಳಿಯಲಿಲ್ಲ. ಉದಾಹರಣೆಗೆ ವಾರ್ಡ್ ನಂ. 27 ರಲ್ಲಿ ಮುಖ್ಯರಸ್ತೆಗೆ ಅಡ್ಡಗೋಡೆ ಕಟ್ಟಿಸಿ ಗೆಸ್ಟ್‌ಹೌಸ್ ರೆಡಿಮಾಡಿಕೊಂಡಿದ್ದಾನೆ. ಬಡ್ಡಿ ದಂಧೆ ಸೇರಿದಂತೆ ಗದಗಿನ ಮೂಲೆ ಮೂಲೆಗಳಲ್ಲಿ ಅಕ್ರಮವಾಗಿ ಜೂಜಿನ ಅಡ್ಡೆಗಳನ್ನು ನಡೆಸುತ್ತಿರುವ ಚಂದಾವರಿ ತನ್ನ ವ್ಯವಹಾರಗಳು ಸಲೀಸಾಗಿ ನಡೆಯಲಿ ಎಂದು ಪರಸ್ಯಾ ಮತ್ತು ಸುಭಾಸ ಕರಣಿ ತರಹದ ಹಲವಾರು 420 ಗಳನ್ನು ಸಾಕಿಕೊಂಡಿದ್ದಾನೆ.

ಇನ್ನೊಂದೆಡೆ ಗದಗ ನಗರದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಬಿಸಿಯೂಟ ತಯಾರಿಸಿ ಕೊಡುವ ಖಾಸಗಿ ಗುತ್ತಿಗೆಯನ್ನೂ ಚಂದಾವರಿ ಪಡೆದಿದ್ದಾನೆ. ಆದರೆ ಈತ ಒಂದು ದಿನವೂ ಮಕ್ಕಳು ತಿನ್ನಬಹುದಾದಂತಹ ಆಹಾರವನ್ನು ವಿತರಿಸಿಲ್ಲ. ಒಮ್ಮೆ ಜಿಲ್ಲಾ ಉಸ್ತುವಾರಿ ಮಂತ್ರಿ ಬೆಡ್ಡಿ ಶ್ರೀರಾಮುಲು ಶಾಲೆಗೆ ವಿಸಿಟ್ ನೀಡಿದಾಗ, ಈತ ಕೊಡುವ ಕರ್ಮದ ಊಟವನ್ನು ಕಂಡು ಹೌಹಾರಿದ್ದರು. "ತಕ್ಷಣ ಈತನ ಕಾಂಟ್ರ್ಯಾಕ್ಟ್ ಕ್ಯಾನ್ಸಲ್ ಮಾಡಿ" ಎಂದು ಡಿ. ಸಿ. ಗೆ ಆದೇಶ ಮಾಡಿದ್ದರು.


ಚಂದಾವರಿ

ಇದೇ ಹೊತ್ತಿಗೆ ಇವನ ನಾನಾ ಲೀಲೆಗಳ ವಿರುದ್ಧ ಪ್ರಗತಿಪರ ಸಂಘಟನೆಯ ಎಲ್. ನಾರಾಯಣಸ್ವಾಮಿ ಲೋಕಾಯುಕ್ತರಿಗೆ ದೂರನ್ನು ಸಲ್ಲಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ್ದ ಲೋಕಾಯುಕ್ತರು ಈತನ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದರು. ಆದರೆ ಪೊಲೀಸರು ಮಾತ್ರ ಚಂದಾವರಿಯ ಕೆನ್ನೆಗೆ ಮುತ್ತು ಕೊಟ್ಟು ಕಳುಹಿಸಿದ್ದರು.

ಸ್ಕೆಚ್ ಹಾಕಿ ಕಾಯುತ್ತಿದ್ದ ದುರುಳರು

ಚಂದಾವರಿಯ ದಂಧೆಗಳನ್ನು ಬಯಲಿಗೆ ಎಳೆಯುತ್ತಿದ್ದ ಎಲ್. ನಾರಾಯಣಸ್ವಾಮಿಯನ್ನು ಹೇಗಾದರೂ ಮಾಡಿ ಹಣಿಯಬೇಕು ಅಂತಾ ಕಾದು ಕೂತಿತ್ತು ಚಂದಾವರಿ ಮತ್ತಾತನ ಪಡೆ. ಅದಕ್ಕೇ ಪರಸ್ಯಾನ ಕೊಲೆ ಪ್ರಕರಣದಲ್ಲಿ ಕೊಲೆ ಮಾಡಿದ್ದ ರಾಜೇಸಾಬನೊಂದಿಗೆ ನಿರಪರಾಧಿಗಳಾದ ನಾರಾಯಣಸ್ವಾಮಿ, ಸಿದ್ದಪ್ಪ ಲಿಂಗದಾಳ, ದೇವಪ್ಪ ಲಿಂಗದಾಳ, ಕಲ್ಯಾಗಾರ ಮತ್ತು ರಾಜು ದೊಡ್ಡಮನಿ ಎಂಬುವವರ ವಿರುದ್ಧ ದೂರು ನೀಡಿ ಅವರನ್ನೆಲ್ಲ ಒಳಗೆ ಕಳುಹಿಸುವ ಸ್ಕೆಚ್ ಅನ್ನು ಚಂದಾವರಿ ಹಾಕಿದ.

ಇದಕ್ಕೆ ಸ್ಪಂದಿಸಿದ ಪೊಲೀಸರು ಅವರೆಲ್ಲರನ್ನು ಕೇಸಿನಲ್ಲಿ ಫಿಕ್ಸ್ ಮಾಡಿ ಜೈಲಿಗೆ ಅಟ್ಟಿದರು. ಅವರೆಲ್ಲ ಹದಿನೈದು ದಿನಗಳನ್ನು ಜೈಲಲ್ಲಿ ಕಳೆದು ಈಗ ಜಾಮೀನಿನ ಮೇಲೆ ಹೊರ ಬಂದಿದ್ದಾರೆ. ನಾರಾಯಣಸ್ವಾಮಿ ಮಾತ್ರ ಅಂಟಿಸಿಪೇಟರಿ ಬೈಲಿಗೆ ಅರ್ಜಿ ಸಲ್ಲಿಸಿ ಜಾಮೀನಿಗಾಗಿ ಕಾಯುತ್ತಿದ್ದಾರೆ.

ಅಸಲಿಗೆ ಕಳ್ಳ ಪರಸ್ಯಾ ಕೊಲೆಯಾದಾಗ ನಾರಾಯಣಸ್ವಾಮಿ ತಮ್ಮ ಮಕ್ಕಳೊಂದಿಗೆ ಬೆಳಗಾವಿಗೆ ಹೋಗಿದ್ದರು. ಆದರೆ ಮಾರನೆ ದಿನವೇ ಗದಗಿನಲ್ಲಿ ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯದ ಕಾರ್ಯಕ್ರಮ ಇದ್ದದ್ದರಿಂದ ಅದನ್ನು ಕುರಿತು ಡಿ.ವೈ.ಎಸ್.ಪಿ. ಪಾಪಯ್ಯ ಹಾಗೂ ಎಸ್.ಐ. ಬಿ. ಬಿ. ಪಾಟೀಲರ ಜೊತೆ ಅಲ್ಲಿಂದಲೇ ಮಾತನಾಡಿದ್ದಾರೆ. ಅದೇ ದಿನ ಲಿಂಗದಾಳ ಸಹೋದರರು ಕ್ಯಾನ್ಸರ್ ರೋಗದಿಂದ ನರಳುತ್ತಿರುವ ತಮ್ಮ ತಾಯಿಯ ಆರೈಕೆಯಲ್ಲಿ ಆಸ್ಪತ್ರೆಯಲ್ಲಿದ್ದರು. ಇದೆಲ್ಲ ಗೊತ್ತಿದ್ದರೂ ಪೊಲೀಸರು ಏಕೆ ಇವರೆಲ್ಲರ ವಿರುದ್ಧ ಕೇಸ್ ದಾಖಲಿಸಿಕೊಳ್ಳಲು ಮುಂದಾದರು ಎಂಬ ಪ್ರಶ್ನೆಯನ್ನು ಜನ ಎಲ್ಲೆಡೆ ಕೇಳುತ್ತಿದ್ದಾರೆ.

ಗದಗ

ಈ ಮಧ್ಯೆ ಎಸ್. ಐ. ಪಾಟೀಲರು ಚಂದಾವರಿಯ ಮನೆಗೆ ಹೋಗಿ, "ಪರಸ್ಯಾನ ಕೊಲೆ ಮಾಡಿದ್ದು ನಾನೊಬ್ಬನೆ ಅಂತ ರಾಜೇಸಾಬ ಒಪ್ಪಿಕೊಂಡಿದ್ದಾನೆ. ಇದರಲ್ಲಿ ಅನಗತ್ಯವಾಗಿ ಬೇರೆಯವರನ್ನು ಸಿಲುಕಿಸಬೇಡಿ" ಎಂದು ಕೇಳಿಕೊಂಡರಂತೆ. ಆದರೆ ಚಂದಾವರಿ ಬುದ್ಧಿ ಗೊತ್ತಿರುವ ಜನ "ಆತನತ್ರ ಉಗಿಸಿಕೊಳ್ಳುವ ಬುದ್ಧಿ ಈ ಖಾಕಿ ಗೌಡಪ್ಪನಿಗೆ ಯಾಕೆ ಬೇಕಿತ್ತು?' ಎಂದು ಕೇಳುತ್ತಿದ್ದಾರೆ. ಯಾಕೆಂದರೆ ಪಾಟೀಲರಿಗೆ ಈ ಚಂದಾವರಿ ಕೊಟ್ಟಿರುವ ಉತ್ತರವೇನು ಗೊತ್ತಾ? "ನಾವ್ಹೇಳಿದ ಹೆಸರುಗಳನ್ನು ಎಫ್.ಐ.ಆರ್. ನಲ್ಲಿ ಸೇರಿಸಿಕೊಳ್ಳದಿದ್ದರೆ ಜಿಲ್ಲೆಗೆ ಬರುತ್ತಿರುವ ಸಿ. ಎಂ. ಮುಂದೆ ಪರಸ್ಯಾನ ಹೆಣ ಇಟ್ಟು ಸ್ಟ್ರೈಕ್ ಮಾಡುತ್ತೇವೆ" ಎಂದು ಧಮಕಿ ಹಾಕಿದ್ದಾನೆ ಚಂದಾವರಿ.

"ನಮ್ ನೌಕರಿ ಸಲುವಾಗಿ ಹೀಗೆ ಮಾಡಿದಿವಿ" ಎಂದು ಈಗ ಖಾಕಿಗಳು ಫ್ಲಾಶ್ ಬ್ಯಾಕ್ ಸ್ಟೋರಿ ಹೇಳುತ್ತಿದ್ದಾರೆ. ಕೆಟ್ಟ ರಾಜಕಾರಣಿಗಳ ಆದೇಶಗಳನ್ನು ಪೊಲೀಸರು ಕಣ್ಣುಮುಚ್ಚಿ ಪಾಲಿಸುತ್ತಿರುವುದರಿಂದಲೇ ಇಲ್ಲಿನ ಜನರ ಬದುಕು ಬರ್ಬಾದ್ ಆಗಿದೆ. ಸ್ವಸ್ಥ ಸಮಾಜಕ್ಕೆ ಮಾರಕವಾಗಿದ್ದ ಪರಶುರಾಮ ಉರುಫ್ ಕಳ್ಳ ಪರಸ್ಯಾ ನೆಗೆದು ಬಿದ್ದಿದ್ದು ಗದಗಿನ ಜನಕ್ಕೆ ಸಂತೋಷ ತಂದಿದ್ದರೂ, ಆತನ ಕೊಲೆ ಕೇಸಿನಲ್ಲಿ ಅಮಾಯಕರಿಗೂ, ನಿರಪರಾಧಿಗಳಿಗೂ ವಿನಾಕಾರಣ ಹಿಂಸೆ ನೀಡುತ್ತಿರುವುದು ದುರಂತದ ಸಂಗತಿಯಾಗಿದೆ. ಗದಗಿನ ಪೊಲೀಸರಿಗೆ ಬುದ್ಧಿ ಬರುವುದೆಂದು?


– ಹುರಳಿಕುಪ್ಪಿ ವಿನಯ

ಎತ್ತು ಏರಿಗೆಳೆದರೆ ಕೋಣ ಕೊಚ್ಚೆಗೆಳೆಯಿತು ಎನ್ನುವಂತಾ ಸ್ಥಿತಿ ಇವತ್ತಿನ ಮೊರಾರ್ಜಿ ದೇಸಾಯಿ ವಸತಿ ಶಾಲಾ ಶಿಕ್ಷಕರದ್ದು. ಇಲ್ಲಿ ಶಿಕ್ಷಕರನ್ನು ಎತ್ತು ಎಂತಲೂ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವ ಮತ್ತು ಉನ್ನತಾಧಿಕಾರಿಗಳನ್ನು ಕೋಣ ಎಂದುಕೊಳ್ಳಬಹುದು.

ನಮ್ಮಲ್ಲಿ ಜನಪರವಾಗಿರಬೇಕಿದ್ದ ಹೊಸ ಶಿಕ್ಷಣ ಯೋಜನೆಗಳನ್ನು ಹೇಗೆ ವ್ಯವಸ್ಥಿತವಾಗಿ ನಾಶಗೊಳಿಸಲಾಗುತ್ತದೆ ಎಂಬುದಕ್ಕೆ ಕರ್ನಾಟಕದಲ್ಲಿರುವ ಈ ಮೊರಾರ್ಜಿ ವಸತಿ ಶಾಲೆಗಳೇ ಜೀವಂತ ಉದಾಹರಣೆಗಳಾಗಿವೆ. ಬೋಧನೆಗೆ ತಕ್ಕಷ್ಟು ಶಿಕ್ಷಕರಿಲ್ಲ, ಇರುವ ಶಿಕ್ಷಕರಿಗೆ ಖಾಯಂಮಾತಿಯಿಲ್ಲ, ಸರಿಯಾದ ಸಂಬಳವಿಲ್ಲ, ಶಾಲಾ ಪರಿಕರಗಳಿಲ್ಲ, ಹೀಗೆ ಎಲ್ಲಾ ಇಲ್ಲಗಳ ನಡುವೆಯೂ ಕೆಲವೊಂದು ವಸತಿ ಶಾಲೆಗಳು ಶೇ. 100 ರಷ್ಟು ಅತ್ಯದ್ಭುತ ಫಲಿತಾಂಶ ನೀಡುತ್ತಿವೆ.

ಮೊರಾರ್ಜಿ ವಸತಿ ಶಾಲೆ

ಅವಿವೇಕಿ ಇಲಾಖೆ ತಬ್ಬಲಿ ಶಿಕ್ಷಕರು



ಇದು ಮಾತ್ರ ಶಿಕ್ಷಕರ ಅರ್ಪಣಾ ಮನೋಭಾವದಿಂದಾಗಿರುವ ಸಾಧನೆ.

1993 ರಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆರಂಭವಾದ ಈ ವಸತಿ ಶಾಲೆಗಳಲ್ಲಿ ಈಗಲೂ ನೂರಾರು ಜನ ಶಿಕ್ಷಕರು ಗುತ್ತಿಗೆ ಆಧಾರದಲ್ಲೇ ಕೆಲಸ ಮಾಡುವಂಥ ಅತಂತ್ರ ಸ್ಥಿತಿ ಸೃಷ್ಟಿಸಲಾಗಿದೆ. ರಾಜ್ಯದ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಆರಂಭಿಸಲಾದ ಈ ವಸತಿ ಶಾಲಾ ಯೋಜನೆ ಅವಿವೇಕಿ ಅಧಿಕಾರಿಗಳ ನಾನಾ ಕುಚೇಷ್ಟೆಗಳಿಗೆ ಬಲಿಯಾಗುತ್ತಿದೆ. ಮೊದಲಿಗೆ ಇಂಗ್ಲಿಷ್ ಮೀಡಿಯಂ ವಸತಿಶಾಲೆಗಳಾಗಿ ಇವು ಶುರುವಾದವಾದರೂ ಇಲಾಖೆ ಇಂಗ್ಲಿಷ್‌ನಲ್ಲಿ ಪಾಠ ಹೇಳಬಲ್ಲ ಶಿಕ್ಷಕರನ್ನೇ ನೇಮಿಸಿರಲಿಲ್ಲ. ಸಹಜವಾಗೇ ಫಲಿತಾಂಶ ಕುಸಿದಿತ್ತು. ನಂತರ ಜ್ಞಾನೋದಯವಾದವರಂತೆ ಎಲ್ಲಾ ಶಾಲೆಗಳನ್ನು ಕನ್ನಡ ಮಾಧ್ಯಮವಾಗಿ ಬದಲಾಯಿಸಿ ಶಿಕ್ಷಕರನ್ನು ಒದಗಿಸಿದ ಕಾರಣ ಉತ್ತಮ ಫಲಿತಾಂಶ ಬರತೊಡಗಿತ್ತು. ಕೆಲವು ಶಾಲೆಗಳು ಶೇ. 100 ರಿಸಲ್ಟ್ ಸಾಧಿಸಿದ್ದವು. ಇದನ್ನು ಇನ್ನಷ್ಟು ಉತ್ತಮಪಡಿಸುವ ಬದಲು ಅವಿವೇಕಿ ಅಧಿಕಾರಿಯೊಬ್ಬ ಈಗ ಮತ್ತೆ ಎಲ್ಲಾ ಶಾಲೆಗಳನ್ನು ಇಂಗ್ಲಿಷ್ ಮೀಡಿಯಂಗೆ ಬದಲಿಸಲು ಹೊರಟಿದ್ದಾನೆ. ಆದರೆ ಇಂಗ್ಲಿಷ್ ಮೀಡಿಯಂನಲ್ಲಿ ಪಾಠ ಹೇಳಬಲ್ಲ ಶಿಕ್ಷಕರಿಂದ ಅದೇ ಹಳೇ ಸಮಸ್ಯೆ ಮತ್ತೆ ಎದುರಾಗಿದೆ. ಪರಿಹಾರದ ಬಗ್ಗೆ ಸಚಿವ ಅಧಿಕಾರಿಗಳ್ಯಾರೂ ಯೋಚಿಸುತ್ತಿಲ್ಲ.

ಈ ವಸತಿ ಶಾಲೆಗಳು ಶುರುವಾದಾಗ ನಿವೃತ್ತ ಶಿಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ತೆಗೆದುಕೊಳ್ಳಲಾಗಿತ್ತು. ಸರ್ಕಾರವು ಅವರ ಜೀವನವನ್ನೆಲ್ಲಾ ಹಿಂಡಿದ ನಂತರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಅಸ್ತಿತ್ವಕ್ಕೆ ಬಂದು ಶಾಲಾ ಉಸ್ತುವಾರಿ ವಹಿಸಿಕೊಂಡಿತ್ತು. ಈ ಸಂಘದ ಕಾರ್ಯನಿರ್ವಹಣಾಧಿಕಾರಿಯಾಗಿದ್ದ ಎಸ್. ನಂಜುಂಡಯ್ಯ ನಿವೃತ್ತರ ಬದಲು ಯುವ ಶಿಕ್ಷಕರನ್ನು ನೇಮಿಸಿಕೊಂಡರು. ಆದರೆ ದುರದೃಷ್ಟವಶಾತ್ ಅವತ್ತಿನ ಕೆಲ ಆಡಳಿತಾತ್ಮಕ ಸಮಸ್ಯೆಗಳಿಂದಾಗಿ ಈ ಯಾವ ಶಿಕ್ಷಕರ ಖಾಯಮಾತಿ ಮಾಡಲು ಆಗಿರಲಿಲ್ಲ. ಮೆರಿಟ್ ಇದ್ದರೂ, ರೋಸ್ಟರ್ ನಿಯಮ ಪಾಲಿಸಲಾಗಿದ್ದರೂ ಇಂದಿಗೂ ಈ ಶಿಕ್ಷಕರ ಪರಿಸ್ಥಿತಿ ಅತಂತ್ರವಾಗೇ ಇದೆ. ಪರೀಕ್ಷೆ ಮುಗಿದೊಡನೆ ರಿಲೀವ್ ಮಾಡುವುದು ನಂತರ ಶಾಲೆ ಶುರುವಾಗುವಾಗ ಮರುನೇಮಕ ಮಾಡಿಕೊಳ್ಳುವುದು ಈ ರೀತಿ ಶಿಕ್ಷಕರ ಜೀವನದೊಂದಿಗೆ ಇಲಾಖೆ ಕ್ರೂರವಾಗಿ ವರ್ತಿಸುತ್ತಿದೆ.

ಮುಖ್ಯವಾಗಿ ಸಮಾಜ ಕಲ್ಯಾಣ ಸಚಿವ ಜಾರಕೀಹೊಳಿ ಈ ಕೂಡಲೆ ಇತ್ತ ಗಮನ ಹರಿಸಿ ಶಿಕ್ಷಕರ ಬವಣೆ ಪರಿಹರಿಸಬೇಕಿದೆ. ಶಿಕ್ಷಕರ ಈ ಅತಂತ್ರ ಪರಿಸ್ಥಿತಿಯ ದುರ್ಲಾಭ ಪಡೆದು ಈಗಾಗಲೇ ಕೆಲವರು ಖಾಯಂ ಮಾಡಿಸಲು ಹಣ ಎತ್ತುತ್ತಿದ್ದಾರೆಂಬ ಸುದ್ದಿಗಳೂ ಕೇಳಿಬರುತ್ತಿವೆ. ಈ ಗುಂಪಿನ ಬಗ್ಗೆ ಬರೆದರೆ ಅದೇ ದೊಡ್ಡ ಕ್ರೈಂ ಸ್ಟೋರಿಯಾಗಬಲ್ಲದು. ಸರ್ಕಾರ ಕನಿಷ್ಠ ಈಗಲಾದರೂ ಶಿಕ್ಷಕರೊಂದಿಗೆ ಮಾನವೀಯವಾಗಿ ವರ್ತಿಸಲಿ.

ಪೆದ್ದು ಸಿಎಂ ಸಿದ್ದು ಗರಂ

ಮುಖ್ಯಮಂತ್ರಿ ಕುಮಾರಸ್ವಾಮಿ ಒಬ್ಬ ಅಪ್ರಬುದ್ಧ ರಾಜಕಾರಣಿ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಮತದಾರನಿಂದ ಸೋಲಿನ ಒದೆ ತಿಂದ ಮೇಲೂ ಈತನಿಗೆ ಬುದ್ಧಿ ಬಂದಂತಿಲ್ಲ.

ಇಂತಾ ಐಲುಪೈಲುಗಳು ಅಧಿಕಾರ ಸೂತ್ರ ಹಿಡಿದಾಗಲೇ ಸಿದ್ದರಾಮಯ್ಯ ಬಂಧನದ ತರಹ ಘಟನೆಗಳು ನಡೆಯುವುದು.


ಪೊಲೀಸರೊಂದಿಗೆ ಸಿದ್ದರಾಮಯ್ಯ ವಾಗ್ವಾದ

ಮೊನ್ನೆ ಮೈಸೂರಿನ ಜಯಪುರದಲ್ಲಿ ನಡೆದ ಪ್ರಕರಣವನ್ನೇ ನೋಡಿ.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಸಿದ್ದರಾಮಯ್ಯ ಜಯಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಉನ್ನತೀಕರಿಸಬೇಕಿದ್ದ ಕಟ್ಟಡದ ಶಿಲಾನ್ಯಾಸ ನೆರವೇರಿಸಲು ಹೋಗಿದ್ದಾರೆ. ವಾಸ್ತವವಾಗಿ ಇಂಥ ಕಾರ್ಯಕ್ರಮಗಳನ್ನು ಸರ್ಕಾರದ ಯಾವುದಾದರೂ ಒಂದು ಇಲಾಖೆಯೇ ಏರ್ಪಡಿಸುತ್ತದೆ. ಆದರೆ ಮೊನ್ನಿನ ಕಾರ್ಯಕ್ರಮ ಅರೇಂಜ್ ಮಾಡಿದ್ದವರ್‍ಯಾರೆಂಬುದು ಯಾರಿಗೂ ಗೊತ್ತಿರಲಿಲ್ಲ. ಅದೇನೇ ಇರಲಿ, ಈ ಆಸ್ಪತ್ರೆ ಮಂಜೂರು ಮಾಡಿಸಿದ ಕ್ರೆಡಿಟ್ ಕಾಂಗ್ರೆಸ್‌ಗೆ ಅದರಲ್ಲೂ ಸಿದ್ದರಾಮಯ್ಯಗೆ ಸಿಗಲಿ ಎಂದು ಅವರ ಬೆಂಬಲಿಗರು ಅಪೇಕ್ಷಿಸಿದ್ದಿರಬಹುದು. ಹಾಗಾಗಿ ಈ ಕಾರ್ಯಕ್ರಮಕ್ಕೆ ಜೆಡಿಎಸ್‌ನ ಜಿಲ್ಲಾ ಉಸ್ತುವಾರಿ ಸಚಿವ ಜಿ.ಟಿ. ದೇವೇಗೌಡರಿಗೂ ಆಹ್ವಾನವಿರಲಿಲ್ಲ, ಸ್ಥಳೀಯ ಪಂಚಾಯಿತಿ ಲೀಡರ್‌ಗಳ ಹೆಸರೂ ಆಹ್ವಾನ ಪತ್ರಿಕೆಯಲ್ಲಿ ಇರಲಿಲ್ಲ. ಇದನ್ನೇ ನೆಪ ಮಾಡಿಕೊಂಡು ಜಯಪುರ ಗ್ರಾಮ ಪಂಚಾಯತಿಯ ಅಧ್ಯಕ್ಷ ಜಿವರಾಜಿನಾಯ್ಕ ಪೊಲೀಸ್ ದೂರು ನೀಡಿದ್ದಾನೆ. ಬಹುಶಃ ಕುಮಾರಸ್ವಾಮಿ ಚೇಲಾನಂತಿರುವ ಡಿವೈಎಸ್‌ಪಿ ಚೆಲುವರಾಜನೇ ಇದಕ್ಕೆ ಕುಮ್ಮಕ್ಕು ಕೊಟ್ಟಿರಬೇಕು, ಪೊಲೀಸರು ಕೆಲವರ ಆಕ್ಷೇಪ ಇರೋದರಿಂದ ಸಮಾರಂಭ ನಡೆಸಲು ಅನುಮತಿ ಕೊಡಲ್ಲ ಎಂದುಬಿಟ್ಟರು.

ಯಾವುದೇ ಕ್ಷೇತ್ರದ ಶಾಸಕ ಎನಿಸಿಕೊಂಡಿರುವವರಿಗೆ ಉರಿ ಹತ್ತಿಸುವಂತಾ ಸಂದರ್ಭ ಅದು. ಸಹಜವಾಗೇ ಸಿದ್ದರಾಮಯ್ಯ ಕೂಡ ಕೆರಳಿದ್ದಾರೆ. ಶಾಸಕನಾಗಿ ನನ್ನ ಕ್ಷೇತ್ರದಲ್ಲಿ ನಾನೇ ಒಂದು ಕಾರ್ಯಕ್ರಮ ಮಾಡುವಂತಿಲ್ಲ, ಎಂದರೆ ಹೇಗೆ ಎಂಬುದು ಅವರ ಪ್ರಶ್ನೆ. ಆದರೆ ಅವಿವೇಕಿ ಪೊಲೀಸರು ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸಿದರೇ ವಿನಃ ಶಮನಗೊಳಿಸಲಿಲ್ಲ. ಜಯಪುರ ಪೊಲೀಸ್ ಠಾಣೆ ಎದುರೇ ಶಾಸಕ ಸಿದ್ದರಾಮಯ್ಯನವರನ್ನು ಸರಿಸುಮಾರು 2 ಗಂಟೆ ಕಾಲ ಕಾಯಿಸಲಾಯಿತು. ಅನುಮತಿ ಕೊಡೋಣಂತೆ ಮಾತಾಡೋಣಂತೆ... ಎಂದೆಲ್ಲಾ ಕತೆ ಹೇಳಿ ಕೊನೆಗೆ ವಿಕಾವಿಕಿ ಅಸಿಸ್ಟೆಂಟ್ ಕಮಿಷನರ್‌ನನ್ನು ಕರೆಸಿ ನಿಷೇಧಾಜ್ಞೆ ಹೇರಿಬಿಟ್ಟರು. ಈ ಗದ್ದಲದಲ್ಲಿ ಇನ್ನಿಬ್ಬರು ಅವಿವೇಕಿ ಆಫೀಸರ್‌ಗಳಾದ ತಹಶೀಲ್ದಾರ್ ಕಾಂತರಾಜು ಹಾಗೂ ಇಓ ರಘುನಂದನ್ ಗೊಂದಲಮಯವಾಗಿ ವರ್ತಿಸುತ್ತಿದ್ದರು. ಯಾವಾಗ ನಿಷೇಧಾಜ್ಞೆ ಇದೆ ಎಂದು ಅವರೇನಾದರೂ ವಾಪಸ್ಸಾಗಿ ಬಿಟ್ಟಿದ್ದರೆ ಜೆಡಿಎಸ್‌ನವರು 'ನೋಡಿದ್ರಾ ಸಿದ್ದರಾಮಯ್ಯನ್ನೇ ಹೆಂಗೆ ಓಡಿಸ್ದೋ' ಎಂದು ಮೀಸೆ ತಿರುವಿಕೊಳ್ಳಲು ಕಾದು ನಿಂತಿದ್ದರು. ಆದರೆ ಸಿದ್ದು ಅದಕ್ಕೆ ಆಸ್ಪದ ಕೊಡದೆ 'ಪುಢಾರಿ ರಾಜಕೀಯದ' ಹುತಾತ್ಮರಾಗಲು ನಿಂತೇ ಬಿಟ್ಟರು. ಅಲ್ಲಿಂದಾಚೆಗೆ ನಡೆದದ್ದೇನೆಂಬುದು ಈಗ ಎಲ್ಲರಿಗೂ ಗೊತ್ತಾಗಿದೆ.

ಚಾಮುಂಡೇಶ್ವರಿಯಲ್ಲಿ ಇಂಥ ಘಟನೆ ನಡೆದಿರುವುದು ಇದೇ ಮೊದಲೇನಲ್ಲ. ಉಪಚುನಾವಣೆಗೂ ಮುನ್ನ ಹುದಗೂರು ಶಾಲಾ ಕಟ್ಟಡ ಉದ್ಘಾಟನೆಗೆಂದು ಸಿದ್ದರಾಮಯ್ಯ ಬಂದಿದ್ದಾಗಲೂ ಜೆಡಿಎಸ್‌ನ ಕೆಲ ಘಟಿಂಗರು ದಾಂಧಲೆ ನಡೆಸಿದ್ದರು.

ಈ ದೇವೇಗೌಡ-ಕುಮಾರಸ್ವಾಮಿ ಹೊಟ್ಟೆಗೆ ಏನು ತಿನ್ನುತ್ತಾರೋ ಗೊತ್ತಿಲ್ಲ, ಆದರೆ ರಾಜಕಾರಣವನ್ನು ಸೇಡು, ವೈಯಕ್ತಿಕ ದ್ವೇಷ, ಅಧಿಕಾರ ದುರ್ಬಳಕೆಗೆಲ್ಲಾ ಬಳಸಲು ಹೊರಟಿದ್ದಾರೆ. ಪ್ರಜಾಪ್ರಭುತ್ವವೆಂಬುದರ ಅರ್ಥವೇ ಗೊತ್ತಿರದ ಇಂಥ ಅವಿವೇಕಿಗಳಿಂದಾಗಿಯೇ ಸಣ್ಣಪುಟ್ಟ ವಿಚಾರಗಳೂ ದೊಡ್ಡ ಗಾಯವಾಗಿ ರಕ್ತಸಿಕ್ತವಾಗುವ ಹಂತ ತಲುಪುತ್ತಿವೆ.

ಸಿದ್ದರಾಮಯ್ಯ ಬಂಧನ, ನಂತರದ ಮೈಸೂರು ಬಂದ್ ಲಕ್ಷಾಂತರ ಜನರಿಗೆ ಸಂಕಷ್ಟ ತಂದಿದೆ. ಈಗ ಎರಡನೇ ಪಿಯುಸಿ ಪರೀಕ್ಷೆಗಳು ಬೇರೆ ನಡೆಯುತ್ತಿವೆ. ಬಂದ್ ವೇಳೆ ಸಾವಿರಾರು ವಿದ್ಯಾರ್ಥಿಗಳು ಹಾಗು ಪೋಷಕರ ಮನಸ್ಥಿತಿ ಹೇಗಾಗಿರಬೇಡ ಯೋಚಿಸಿ ನೋಡಿ.

ದೇವೇಗೌಡನ ಮಕ್ಕಳು ಅಧಿಕಾರದಲ್ಲಿರುವ ತನಕ ಕರ್ನಾಟಕದಲ್ಲಿ ಯಾರಿಗಾದರೂ ನೆಮ್ಮದಿ ಸಿಗಲು ಸಾಧ್ಯವೆ? ಶಾಸಕ ಸಿದ್ದರಾಮಯ್ಯ ಅಕಸ್ಮಾತ್ ಜಯಪುರ ಆಸ್ಪತ್ರೆಯ ಕಟ್ಟಡದ ಶಿಲಾನ್ಯಾಸ ನೆರವೇರಿಸಿಬಿಟ್ಟಿದಿದ್ದರೆ ಏನು ಈ ಜಗತ್ತೇ ತಲೆ ಕೆಳಗಾಗಿಬಿಡುತ್ತಿತ್ತೆ? ಅಥವಾ ಕೋ-ಜಾ ಸರ್ಕಾರ ಉರುಳುತ್ತಿತ್ತೆ?

ಇಂಥ ಸಣ್ಣಪುಟ್ಟದ್ದನ್ನು ಸಹಿಸಿಕೊಳ್ಳಲಾಗದ ಗೌಡರ ಮಕ್ಕಳನ್ನು ಕರ್ನಾಟಕದ ಜನ ಯಾಕೆ ಸಹಿಸಿಕೊಳ್ಳಬೇಕು ಹೇಳಿ?

-ಈಶ


ಕೆಲಸವಿಲ್ಲದ ಸಿದ್ದು...

ಸಿದ್ದರಾಮಯ್ಯನ ತರಹ ಹಿರಿಯ ನಾಯಕರಿಂದ ಜನ ಹೆಚ್ಚಿನದನ್ನು ನಿರೀಕ್ಷಿಸುತ್ತಿದ್ದಾರೆ. ಈಗ ಬಜೆಟ್ ಮಂಡನೆಯಾಗಿದೆ. ಆರ್ಥಿಕ ತಜ್ಞ ಎಂಬ ಆರೋಪ ಹೊತ್ತಿರುವ ಸಿದ್ದರಾಮಯ್ಯ ಬಜೆಟ್ ಬಗ್ಗೆ ಅದರ ಹುಳುಕುಗಳ ಬಗ್ಗೆ, ಮುಖ್ಯಮಂತ್ರಿಯ ರಾಧಿಕಾ ಲೀಲೆಗಳ ಬಗ್ಗೆ, ಯಡ್ಡಿಯ ಭ್ರಷ್ಟಾಚಾರಗಳ ಬಗ್ಗೆ ಗಂಭೀರ ಚರ್ಚೆ ನಡೆಸುವುದು ಬಿಟ್ಟು ಆಸ್ಪತ್ರೆ, ಶಂಕುಸ್ಥಾಪನೆ ವಿಚಾರವನ್ನೇ ದೊಡ್ಡದು ಮಾಡಿಕೊಂಡಿದ್ದಾರೆ. ಇದರಿಂದ ಸಿದ್ದೂಗೆ ಭಾರಿ ಪ್ರಚಾರವೇನೋ ಸಿಕ್ಕಿದೆ. ಆದರೆ ಇದೊಂತರ ಇಂಡಿಯಾ ಟೀಮು ಬರ್ಮುಡಾ ಮೇಲೆ ಕ್ರಿಕೆಟ್ ಮ್ಯಾಚ್ ಗೆದ್ದಂತೆ ಅಲ್ಲವಾ,

ಸಿದ್ದರಾಮಯ್ಯ ಯೋಚಿಸಲಿ.

ಎಸ್‌ಪಿ ಮುರುಗನ್ ಪರಾರಿ

ಈ ಮುರುಗನ್ ಸಿದ್ದರಾಮಯ್ಯನವರ ಕೈಲಿ ಏಟು ತಿನ್ನುವುದರಿಂದ ಸ್ವಲ್ಪದರಲ್ಲಿ ತಪ್ಪಿಸಿಕೊಂಡು ಓಡಿಹೋಗಿದ್ದಾನೆ. ತಾನೊಬ್ಬ ಅವತಾರ ಪುರುಷ ಸ್ಟ್ರಿಕ್ಟ್ ಆಫೀಸರ್ ಎಂಬ ಭ್ರಮೆಯಲ್ಲಿರುವ ಮೈಸೂರು ಎಸ್‌ಪಿ ಮುರುಗನ್ ವಾಸ್ತವವಾಗಿ ಬೆನ್ನೆಲುಬಿಲ್ಲದ ಮನುಷ್ಯ. ಈತನೆಂದೂ ತನ್ನ ಸ್ವಂತ ಬುದ್ಧಿ ವಿವೇಚನೆ ಬಳಸಿ ಆಡಳಿತ ನಡೆಸಿದವನಲ್ಲ.



ಎಸ್ಪಿ ಮುರುಗನ್

ಉಡುಪಿಯ ಈದು ಎನ್‌ಕೌಂಟರ್‌ನಲ್ಲಿ ಪಾರ್ವತಿ- ಹಾಜಿಮಾ ಎಂಬ ಹೋರಾಟಗಾರ್ತಿಯರನ್ನು ಕೊಲೆ ಮಾಡಿಸುವ ಮೂಲಕ ರಾಜ್ಯದ ಜನತೆಗೆ ಪರಿಚಯವಾದ ಮುರುಗನ್ ಆತ್ಮಗೌರವ- ವೃತ್ತಿಗೌರವ ಎರಡೂ ಇರದವ. ಸಿದ್ದರಾಮಯ್ಯ ಹಾಗೂ ಕುಮಾರಸ್ವಾಮಿ ನಡುವೆ ಏನೇ ಜಗಳವಿರಲಿ ಸಿದ್ದು ಓರ್ವ ಶಾಸಕ ಹಾಗೂ ಮುರುಗನ್ ಓರ್ವ ಜಿಲ್ಲಾ ಎಸ್ಪಿಯಾಗಿ ಅವರಿಗೆ ಅವರದ್ದೇ ಹಕ್ಕು, ಕರ್ತವ್ಯಗಳಿರುತ್ತವೆ. ಅದನ್ನು ಅರ್ಥಮಾಡಿಕೊಳ್ಳದೆ ಜೆಡಿಎಸ್ ಚೇಲಾ ಡಿವೈಎಸ್‌ಪಿ ಚೆಲುವರಾಜ ಹೇಳಿದ್ದಕ್ಕೆಲ್ಲಾ ಕೋಲೆಬಸವನಂತೆ ತಲೆ ಆಡಿಸುತ್ತಾ ಇಲ್ಲದ ಅನಾಹುತ ಸೃಷ್ಟಿಸಿ ಬಿಟ್ಟರು ಮುರುಗನ್. ಸಿದ್ದರಾಮಯ್ಯರನ್ನು ಅರೆಸ್ಟ್ ಮಾಡಿ ಮೈಸೂರಿನ ಡಿಎಆರ್‌ಗೆ ಕರೆತಂದಾಗಲೇ ಕುದಿಯುತ್ತಿದ್ದ ಸಿದ್ದರಾಮಯ್ಯ ಎಸ್ಪಿ ಮುರುಗನ್ ಮುಖ ಕಂಡೇಟಿಗೆ ಬಾಯಿಗೆ ಬಂದಂತೆ ಬಯ್ದರು. ತನ್ವೀರ್ ಸೇಠ್ ಮತ್ತಿತರರು ತಡೆದಿರದಿದ್ದರೆ ಮುರುಗನ್‌ಗೆ ಏಟುಗಳೂ ಬಿದ್ದಿರುತ್ತಿದ್ದವು. ಇದನ್ನರಿತ ಮುರುಗನ್ ಸ್ಥಳ ಬಿಟ್ಟು ಓಡಿಹೋದ.

ನ್ಯಾಯಾನ್ಯಾಯಗಳ ವಿವೇಚನೆ ಬಿಟ್ಟು ರಾಜಕೀಯ ನಾಯಕರ ಗುಲಾಮನಂತಾಡಿದರೆ ಕುಂಡೆ ಮೇಲೆ ಒದೆ ಬೀಳುತ್ತವೆಂಬುದು ಮುರುಗನ್‌ಗೆ ಈಗಲಾದರೂ ಅರ್ಥವಾಗಿರಬಹುದು. ಅವರು ಬಹಳವಾಗಿ ನಂಬಿಕೊಂಡಿರುವ ಡಿವೈಎಸ್‌ಪಿ ಚೆಲುವರಾಜನು ಜೆಡಿಎಸ್ ವರ್ಕರ್ ರೀತಿ ಆಗಿಹೋಗಿದ್ದಾನೆ. ಅಂತವರನ್ನು ಮುರುಗನ್ ದೂರವಿಟ್ಟರೆ ಕ್ಷೇಮ.

ಅಜ್ಜಂಪುರದ ಅವಿವೇಕಿ ಪ್ರಿನ್ಸಿಪಾಲ್

ಅಜ್ಜಂಪುರದ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಜಿ.ಆರ್. ಈಶ್ವರಪ್ಪ ಬಸ್ ಏಜೆಂಟನೊ ಅಥವಾ ಪ್ರಿನ್ಸಿಪಾಲನೊ ಎಂಬುದನ್ನು ಯಾರಾದರೂ ಪತ್ತೆಹಚ್ಚಿ ಹೇಳಬೇಕಾಗಿದೆ. ಏಕೆಂದರೆ ಈತ ಬೆಳಿಗ್ಗೆ ಹೊಸದುರ್ಗದ ಕಡೆಯಿಂದ ಅಜ್ಜಂಪುರದ ಕಡೆಗೆ ಬರುವ ಯಾವುದಾದರೂ ಬಸ್ಸಿನಲ್ಲಿ ಕುಳಿತು ಹರಟುತ್ತಿರುತ್ತಾನೆ. ಮತ್ತೆ ಒಂದು ಗಂಟೆ ಅವಧಿಯ ನಂತರ ಅಜ್ಜಂಪುರದ ಕಡೆಯಿಂದ ಶಿವಮೊಗ್ಗದ ಕಡೆಗೆ ಬರುವ ಯಾವುದಾದರೂ ಬಸ್ಸಲ್ಲಿ ಕುಳಿತು ಹೊಲ, ಗದ್ದೆ, ತೋಟ, ತುಡಿಕೆ ವಿಷಯವನ್ನು ಯಾರಿಗಾದರೂ ಕೊರೆಯುತ್ತಲೇ ಸಾಗುತ್ತಿರುತ್ತಾನೆ.


ಪ್ರಿನ್ಸಿಪಾಲ್ ಜಿ.ಆರ್. ಈಶ್ವರಪ್ಪ

ಒಂದೇ ದಿನದಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ಹೊರಟ ಈತನ ಪ್ರಯಾಣ, ಚಿಕ್ಕಮಗಳೂರು ಜಿಲ್ಲೆ ತಡಾಯ್ತು ಶಿವಮೊಗ್ಗ ಜಿಲ್ಲೆಯಲ್ಲಿ ಕೊನೆಯಾಗುತ್ತದೆ. ಈ ನಡುವೆ ಈತ ತುಸು ಹೊತ್ತು ಅಜ್ಜಂಪುರದ ಬಸ್ಸ್ಟಾಂಡಿನಲ್ಲಿ ಇಳಿದು ಸಮೀಪದಲ್ಲೇ ಇರುವ ಕಾಲೇಜಿಗೆ ಭೇಟಿಯಿತ್ತು ಓಡಿಬಂದು ಪುನಃ ಬಸ್ಸೇರುತ್ತಾನೆ. ಏಕೆಂದರೆ ಈ ಅಲೆಮಾರಿ ಪ್ರಿನ್ಸಿಪಾಲನ ಊರು ಚಿತ್ರದುರ್ಗ ಜಿಲ್ಲೆಯಲ್ಲಿದೆ. ಕೆಲಸ ಮಾಡುವುದು ಚಿಕ್ಕಮಗಳೂರು ಜಿಲ್ಲೆಯಲ್ಲಿ, ವಾಸ ಮಾಡುವುದು ಶಿವಮೊಗ್ಗ ಜಿಲ್ಲೆಯಲ್ಲಿ, ಆದ್ದರಿಂದ ಒಂದೇ ದಿನದಲ್ಲಿ ಮೂರು ಜಿಲ್ಲೆಗಳಿಗೆ ಭೇಟಿ ಕೊಡುವ ಕರ್ಮಕ್ಕೆ ತುತ್ತಾಗಿರುವ ಈತ ತಾನು ಕರ್ತವ್ಯ ನಿರ್ವಹಿಸುವ ಕಾಲೇಜಿಗೆ ಭೇಟಿ ಕೊಡುವುದು ಕೇವಲ ಒಂದು ಗಂಟೆ ಮಾತ್ರ. ಇದಕ್ಕಾಗಿ ಸರ್ಕಾರ ಈತನಿಗೆ ಕೊಡುತ್ತಿರುವ ಸಂಬಳ ದಿನಕ್ಕೆ 1150 ರೂ.ಗಳು.

ಗಂಟೆಗೆ ಇಷ್ಟು ಸಂಬಳ ಪಡೆವ ಈತ ನಮ್ಮ ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನು ಅಣಕಿಸುವಂತಿದ್ದಾನೆ. ಈತನ ಕಾರ್ಯವೈಖರಿ ನೋಡಿದರೆ ನಮ್ಮ ಶಿಕ್ಷಣ ಇಲಾಖೆಯಲ್ಲಿ ಈತನ ಮೇಲಿನವರು ಯಾರೂ ಇಲ್ಲವೇನೊ ಎಂಬ ಅನುಮಾನ ಮೂಡುತ್ತದೆ. ಯಾರೂ ಇಲ್ಲದಿದ್ದರೂ ಪರವಾಗಿಲ್ಲ, ಜನರಿಂದ ಆರಿಸಿಹೋದ ಮಂತ್ರಿಯಂತೂ ಇರುತ್ತಾನೆ. ಆತನಾದರೂ ಇತ್ತ ಗಮನ ಹರಿಸದಿದ್ದರೆ ಜನತೆ ಮತ್ತು ವಿದ್ಯಾರ್ಥಿಗಳ ಒತ್ತಡದಿಂದ ಪ್ರಾರಂಭವಾದ ಅಜ್ಜಂಪುರದ ಕಾಲೇಜು ಎಕ್ಕುಟ್ಟಿ ಹೋಗುವುದರಲ್ಲಿ ಯಾವ ಸಂಶಯವೂ ಇಲ್ಲ.

ತನ್ನ ಪ್ರಯಾಣದ ಮಧ್ಯೆ ಒಂದಿಷ್ಟು ಬಿಡುವು ಮಾಡಿಕೊಂಡು ಇಂದಿನಿಂದ ಹಿಂದಿನವರೆಗೆ ಹಾಜರಾತಿ ಗುಜರಾಯಿಸಿ ಹೊರಡಲನುವಾಗುವ ಈತನನ್ನು ಯಾರಾದರೂ ಪ್ರಶ್ನಿಸಿದರೆ, "ನಾನು ಪ್ರಿನ್ಸಿಪಾಲ್. ನಾನು ಏನಾದರೂ ಮಾಡಬಲ್ಲೆ, ಮನಸ್ಸು ಮಾಡಿದರೆ ನಿಮಗೂ ಬುದ್ಧಿ ಕಲಿಸಬಲ್ಲೆ" ಎಂದು ಹೆದರಿಸುತ್ತಾನೆ. ಉಪನ್ಯಾಸಕರಲ್ಲೇ ಈತ ಎರಡು ಗುಂಪುಗಳನ್ನು ಮಾಡಿ ಎಲ್ಲರನ್ನು ಭಯದಲ್ಲಿಟ್ಟಿದ್ದಾನೆ.

ಈತ ಪ್ರಾಮಾಣಿಕನಾಗಿದ್ದರೆ ಅದು ಬೇರೆ ಮಾತು. ಆದರೆ ಬ್ಯಾಂಕ್‌ನಿಂದ ಬಿಡುಗಡೆಗೊಂಡ ಹಣವನ್ನು ಖರ್ಚು ಮಾಡಿ ಇದುವರೆಗೂ ಅದರ ಲೆಕ್ಕವನ್ನೇ ಕೊಟ್ಟಿಲ್ಲ, ಕಳೆದ ಜನವರಿ 25 ರಂದು ಖಾಸಗಿ ಬಸ್‌ಗಳ ಮುಷ್ಕರದಿಂದ ಬಸ್ ಸಂಚಾರವಿರಲಿಲ್ಲ, ಬಸ್‌ಗಳೇ ಇಲ್ಲವೆಂದ ಮೇಲೆ ಅವುಗಳ ಏಜೆಂಟನಂತಿರುವ ಈತನೂ ಗೈರು ತಾನೆ? ಆದರೆ ಮೂರು ದಿನದ ಹಾಜರಾತಿಯನ್ನು ಮುಲಾಜಿಲ್ಲದೆ ಜಡಿದಿದ್ದಾನೆ. ಸಾಮಾನ್ಯವಾಗಿ ಕಾಲೇಜಿನ ಜವಾಬ್ದಾರಿಗಳಿಂದ ತಪ್ಪಿಸಿಕೊಂಡು ತಿರುಗುವ ಈತ, ಹೊಸ ಕಾಲೇಜು ಕಟ್ಟಡದ ಉದ್ಘಾಟನೆಗೆ ಸ್ಥಳೀಯ ಜನಪ್ರತಿನಿಧಿಯನ್ನು ಆಹ್ವಾನಿಸದೆ ತನ್ನ ಗೃಹಪ್ರವೇಶದಂತೆ ಮಾಡಿ ಮುಗಿಸಿದ್ದಾನೆ.

ಅಜ್ಜಂಪುರದಲ್ಲಿ ರೇಣುಕ ಎಂಟರ್‌ಪ್ರೈಸಸ್ ಎಂಬ ಅಂಗಡಿಯಲ್ಲಿ ಕೊಟೇಷನ್ ಸೃಷ್ಟಿಸಿ ನೀಲ್‌ಕಮಲ್ ಛೇರ್ ಖರೀದಿ ಮಾಡಿರುವ ಈತ, ಕಡೂರು ಸಿದ್ಧೇಶ್ವರ ಇಂಜಿನಿಯರ್ ವರ್ಕ್ಸ್‌ನಲ್ಲಿ 3 ಕೊಟೇಶನ್ ಸೃಷ್ಟಿಸಿ ಹಣ ಹೊಡೆಯುವ ಉದ್ದೇಶದಿಂದಲೇ ಬಿಲ್ ತಯಾರಿಸಿದ್ದಾನೆ.

ಕಾಲೇಜ್ ಪ್ರಿನ್ಸಿಪಾಲ್ ಎಂದರೆ ಅದೊಂದು ಗೌರವಯುತ ಸ್ಥಾನ. ಈ ಸಮಾಜಕ್ಕೆ ಸತ್ಪ್ರಜೆಗಳನ್ನು ಸೃಷ್ಟಿ ಮಾಡಿ ಬಿಡುಗಡೆಗೊಳಿಸುವಂತಹ ಜವಾಬ್ದಾರಿಯುತ ಸ್ಥಾನ. ಇಂತಹ ಹುದ್ದೆಯನ್ನು ಈತನೇಕೆ ಇಷ್ಟೊಂದು ಕೀಳಾಗಿ ಪರಿಗಣಿಸಿದ್ದಾನೆ ಎಂದು ನೋಡಿದರೆ, ಈತನಿಗೆ ಅಜ್ಜಂಪುರದಲ್ಲಿ ಕೆಲಸ ಮಾಡುವುದು ಇಷ್ಟವಿಲ್ಲ, ಮರಳಿ ಹೊಸದುರ್ಗಕ್ಕೆ ಹೋಗಬೇಕೆಂಬ ಹಠದಿಂದ ಹೊಸದುರ್ಗ ಶಾಸಕ ಬಿ.ಜಿ. ಗೋವಿಂದಪ್ಪನ ಹತ್ತಿರ ಹೋಗಿ ಮರಳಿ ತನ್ನನ್ನ ಕರೆಸಿಕೊಳ್ಳುವ ಬಗ್ಗೆ ಗೋಗರೆದಿದ್ದಾನೆ. ಈತನ ನರಿಬುದ್ಧಿ ಗೊತ್ತಿರುವ ಶಾಸಕ "ಏನು ಬೇಡ, ನೀನು ಅಲ್ಲೇ ಇರು" ಎಂದು ಸಾಗಹಾಕಿದ್ದಾನೆ. ಇದರಿಂದ ವ್ಯಗ್ರಗೊಂಡಿರುವ ಈತ ಸರ್ಕಾರವೇ ತನ್ನನ್ನು ಎತ್ತಿ ಹಾಕಲಿ ಎಂಬಂತೆ ಗಟ್ಟಿದ್ದು ಹೋಗಿದ್ದಾನೆ. ಮಾತೆತ್ತಿದರೆ "ನಾನು ಈಗಾಗಲೇ ಅಜ್ಜಂಪುರದಿಂದ ಒಂದು ಕಾಲನ್ನು ಹೊರಗಿಟ್ಟಿದ್ದೇನೆ" ಎಂದು ಹೇಳಿಕೊಂಡು ಓಡಾಡುವ ಈತನನ್ನು ಅಜ್ಜಂಪುರದ ಜನ ಒದ್ದೋಡಿಸಿ ತಮ್ಮೂರ ಕಾಲೇಜನ್ನು ಉಳಿಸಿಕೊಳ್ಳಬೇಕಿದೆ.

ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವ ಶಂಕರಮೂರ್ತಿ, ಸದಾ ಮನೆ, ಮಠ, ತೋಟ, ಸಂಸಾರ ಎಂದು ತನ್ನ ಸುತ್ತಲ ಪರಿಸರವನ್ನೇ ಹಾಳು ಮಾಡಿರುವ ಈಶ್ವರಪ್ಪನೆಂಬ ಈ ಮನೆಹಾಳನ ಬಗ್ಗೆ ತನಿಖೆ ಮಾಡಿಸಿ ಮನೆಗೆ ಕಳಿಸುವುದೊಳ್ಳೆಯದು. ಏಕೆಂದರೆ ಈತ ಹೋದ ಜಾಗದಲ್ಲೂ ಸುಮ್ಮನಿರುವ ಪೈಕಿಯಲ್ಲ, ಹೊಸದುರ್ಗ ಕಾಲೇಜಿನಲ್ಲಿ ಇನ್‌ಚಾರ್ಜ್ ಇದ್ದಾಗ ಸುಮಾರು ಹಗರಣ ಸೃಷ್ಟಿಸಿಕೊಂಡಿದ್ದ. ಅಜ್ಜಂಪುರದಲ್ಲೂ ಈತನ ತಿಕ್ಕಲುತನಕ್ಕೆ ಬೇಸತ್ತ ಉಪನ್ಯಾಸಕರೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದರು. ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರನ್ನು ಕೂಡ "ಅವರೆಲ್ಲಾ ಕಾಫಿ, ಬಿಸ್ಕತ್‌ಗೆ ಬರುವವರು" ಎಂದು ಹೇಳಿ ಅವಮಾನ ಮಾಡಿದ್ದ, ಈ ಕಾರಣಕ್ಕೆ ಅವರೂ ಕಾಲೇಜಿನ ಕಡೆ ಸುಳಿಯುತ್ತಿಲ್ಲ. ಈ ಪ್ರಾಂತ್ಯದಲ್ಲಿರುವ ಒಂದೇ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಸುಗಮವಾಗಿ ನಡೆಯಬೇಕಾದರೆ ಜನರೇ ತೀರ್ಮಾನ ತೆಗೆದುಕೊಳ್ಳಬೇಕಿದೆ.



ಅಜ್ಜಂಪುರ ಪ್ರಥಮ ದರ್ಜೆ ಕಾಲೇಜು

-ವರದಿಗಾರ

ಮಹಾಕಾಳಿಗೊಂದು ಗುಡಿ ಚೆಡ್ಡಿಗಳಿಗೆ ನಿಶೆ ಮುಸ್ಲಿಮರಿಗೆ ಜೈಲು

ಹುಬ್ಬಳ್ಳಿ

ಚೆಡ್ಡಿಗಳು ಶಾಂತಿಯಿಂದ ಬದುಕುವ ಜಾಯಮಾನದವರಲ್ಲ. ಸಮಾಜ ಶಾಂತಿಯಿಂದ ಸಹಬಾಳ್ವೆ ನಡೆಸುತ್ತಿದ್ದರೆ ಇವರ ಮೈಮೇಲೆ ಕಜ್ಜಿ ಬಂದು ತುರಿಕೆ, ಕೆರೆತ ಶುರುವಾಗಿಬಿಡುತ್ತೆ. ಆದ್ದರಿಂದಲೇ ಏನಾದರೊಂದು ಕಿತಾಪತಿ ಮಾಡಿ, ಕಲಹವೆಬ್ಬಿಸಿ, ಬೆಂಕಿ ಹಚ್ಚಿ ರಕ್ತಕಾರಿದಾಗಲೇ ಅವರ ಕೆರೆತ ನಿಲ್ಲುತ್ತದೆ. ಅವರಿಗೆ ಒಂದಿಷ್ಟು ನೆಮ್ಮದಿ ಸಿಗುತ್ತೆ. ಆ ನೆಮ್ಮದಿಯೂ ಬಹಳ ದಿನ ಇರುವುದಿಲ್ಲ. ಸಮಾಜ ಮತ್ತೆ ಶಾಂತಿ- ಸಹಬಾಳ್ವೆಯತ್ತ ಮರಳುತ್ತಿದ್ದಂತೆಯೇ ಮತ್ತೆ ಇವರಿಗೆ ಕಜ್ಜಿ ಕೆರೆತ ಶುರುವಾಗಿಬಿಡುತ್ತೆ. ಅದಕ್ಕೆ ಹುಬ್ಬಳ್ಳಿಯ ಈ ಘಟನೆಯೇ ಸಾಕ್ಷಿ.



ಹುಬ್ಬಳ್ಳಿಯ ತೊರವಿ ಹಕ್ಕಲದ ಪಕ್ಕದಲ್ಲಿಯೇ ಒಡ್ಡರ ಓಣಿಯೊಂದಿದೆ. ಅಲ್ಲಿ ಇತ್ತೀಚೆಗೆ ಬನ್ನಿ ಮಹಾಕಾಳಿಗೆ ದೇವಸ್ಥಾನವೊಂದನ್ನು ನಿರ್ಮಿಸಲಾಗಿದೆ. ಮೊನ್ನೆ ಮಾರ್ಚ್ 25ರ ಭಾನುವಾರ ಅದರ ಉದ್ಘಾಟನೆಯಾಯಿತು, ಬಂದವರು ಉಂಡು, ಕುಡಿದು ಕುಣಿದಾಡಿದ್ದೂ ಆಯಿತು. ಇನ್ನು ದೇವಸ್ಥಾನ ನಿರ್ಮಾಣಕ್ಕೆ ಸಹಾಯ ಮಾಡಿದವರಿಗೆ ರಾತ್ರಿ ವಿಶೇಷ ಪಾರ್ಟಿಯನ್ನು ಹಮ್ಮಿಕೊಳ್ಳಲಾಗಿತ್ತು. ಭಾರಿ ಬಾಟಲಿಗಳನ್ನು ತರಿಸಿ, ದೊಡ್ಡದಾಗಿ ರಸಮಂಜರಿ ಕಾರ್ಯಕ್ರಮ ಏರ್ಪಡಿಸಿ ನಿಶೆ-ಸಂಗೀತ ಸಮ್ಮಿಲನದ ಆನಂದ ಪರಾಕಾಷ್ಠೆಯನ್ನು ಮಹಾಕಾಳಿಯ ಹೆಸರಿನಲ್ಲಿ ಆಯೋಜನೆ ಮಾಡಲಾಗಿತ್ತು. ದೇವರ ಹೆಸರಿನಲ್ಲಿ ಪಾನ-ಸಂಗೀತ ಗೋಷ್ಠಿಗಳನ್ನು ಏರ್ಪಡಿಸಿದ ಮಹಾನುಭಾವರು ಮತ್ಯಾರೂ ಅಲ್ಲ, ಭಾರತದ ಸಂಸ್ಕೃತಿ, ನಡೆ-ನುಡಿಗಳನ್ನು ಗುತ್ತಿಗೆ ಹಿಡಿದು ಸಂರಕ್ಷಿಸುತ್ತಿರುವವರಂತೆ ಪೋಸು ಕೊಡುವ ಸಂಘ ಪರಿವಾರದ ಚೆಡ್ಡಿ ಪಟಾಲಂ! ಇಂತಹ ಪಾರ್ಟಿ ಬೇರೆಯವರಿಗೆ ಬೇಕಿತ್ತೋ ಬೇಡವೋ ಗೊತ್ತಿಲ್ಲ, ಆದರೆ ಈ ಚೆಡ್ಡಿಗಳಿಗಂತೂ ಬೇಕಿತ್ತು. ಏಕೆಂದರೆ ಅದು ಬೆಳಗ್ಗೆಯಿಂದಲೂ ಅವರು ದೇವಿಯ ದೇವಸ್ಥಾನ ಉದ್ಘಾಟನೆಗಾಗಿ ಪಾಪ ಬಹಳ ಕಷ್ಟಪಟ್ಟು ಓಡಾಡಿ ಕೆಲಸ ಮಾಡಿದ್ದರು. ದಣಿದ ದೇಹಕ್ಕೆ ದಮ್ ಇಳಿಸಲು ನಿಶೆ ಇಲ್ಲದಿದ್ದರೆ ಹೇಗೆ ಹೇಳಿ?



ಗಲಭೆಯಲ್ಲಿ ಜಖಂಗೊಂಡಿರುವ ವಾಹನಗಳು

ಈ ಒಡ್ಡರ ಓಣಿಯ ಆಸುಪಾಸಿನ ಕೌಲಪೇಟೆ, ಕಮರಿಪೇಟೆ, ತೊರವಿ ಹಕ್ಕಲು ಮುಂತಾದ ಪ್ರದೇಶಗಳೆಲ್ಲವನ್ನೂ ಸೂಕ್ಷ್ಮ ಪ್ರದೇಶಗಳೆಂದು ಪೊಲೀಸ್ ಇಲಾಖೆಯೇ ಗುರುತಿಸಿದೆ. ಹಿಂದೂ-ಮುಸ್ಲಿಂ ಮತೀಯ ದಳ್ಳುರಿ ಯಾವಾಗಲೂ ಇಲ್ಲಿ ಹೊಗೆಯಾಡುತ್ತಿರುವುದೇ ಇದಕ್ಕೆ ಕಾರಣ. ಇಂತಹ ಸೂಕ್ಷ್ಮ ಪ್ರದೇಶದಲ್ಲಿ ಬಹಿರಂಗ ಪಾನ-ಸಂಗೀತಗೋಷ್ಠಿಗಳಿಗೆ ಅವಕಾಶ ಕೊಟ್ಟರೆ ಅನಾಹುತ ಗ್ಯಾರಂಟಿ ಎಂದು ಗೊತ್ತಿದ್ದರೂ ಪೊಲೀಸರು ಪರ್ಮಿಶನ್ನು ಯಾಕೆ ಕೊಟ್ಟರು? ಅದಕ್ಕೆ ಅವರೇ ಉತ್ತರಿಸಬೇಕು. ಆದರೆ ನಿರೀಕ್ಷಿಸಿದಂತೆ ಅನಾಹುತಗಳು ಸಂಭವಿಸಿಯೇ ಬಿಟ್ಟವು. ಅದಕ್ಕಾಗಿ ಕಾಯುತ್ತಿದ್ದ ಪೊಲೀಸರೂ ಕರ್ತವ್ಯಪ್ರಜ್ಞೆ ಜಾಗೃತಗೊಂಡವರಂತೆ ಚೆಡ್ಡಿಗಳ ಪರ ನಿಂತು ಪರಿಸ್ಥಿತಿಯನ್ನು ನಿಭಾಯಿಸಿದರು!


ಆಗ ಸಮಯ ರಾತ್ರಿ 8 ಗಂಟೆ. ಚೆಡ್ಡಿಗಳೆಲ್ಲರೂ ಕುಡಿದು ಉನ್ಮತ್ತರಾಗಿದ್ದರು. ಪೂರ್ವ ತಯಾರಿಯಂತೆ ಸಂಗೀತಗೋಷ್ಠಿಯ ರಸಮಂಜರಿ ಕಾರ್ಯಕ್ರಮದಲ್ಲಿ ಮುಸ್ಲಿಂ ವಿರೋಧಿ ಹಾಡುಗಳನ್ನೇ ಹಾಡಿಸಲಾರಂಭಿಸಿದರು. ಇದಕ್ಕೆ ಸಹಜವಾಗಿಯೇ ವಿರೋಧ ವ್ಯಕ್ತವಾಯಿತು. ಇದನ್ನೇ ಕಾಯುತ್ತಿದ್ದ ಚೆಡ್ಡಿ ಪಟಾಲಂ 'ಮುಸ್ಲಿಂ ಹುಡುಗರು ಹಿಂದೂ ಹುಡುಗಿಯರನ್ನು ಚುಡಾಯಿಸುತ್ತಿದ್ದಾರೆ' ಎಂಬ ಹಸಿ ಸುಳ್ಳನ್ನು ಹರಿಬಿಟ್ಟು, ಚೆಡ್ಡಿ ಟೈಟ್ ಮಾಡಿಕೊಂಡು ಧರ್ಮ ಯುದ್ಧಕ್ಕಾಗಿ ಲಾಟಿ ಹಿಡಿದು ನಿಂತೇಬಿಟ್ಟರು. ತಕ್ಷಣ ಇದೊಂದು full fledged ದೊಂಬಿಯಾಗಿ ಪರಿವರ್ತನೆಗೊಳ್ಳಲು ಬಹಳ ಸಮಯ ಬೇಕಾಗಲಿಲ್ಲ, ನೋಡು ನೋಡುತ್ತಿದ್ದಂತೆಯೇ ನಾಲ್ಕಾರು ಅಮಾಯಕರು ಪೆಟ್ಟುತಿಂದು ನರಳುತ್ತಿದ್ದರು, ದ್ವಿಚಕ್ರವಾಹನಗಳು ಜಖಂಗೊಂಡವು, ಎರಡು ಮನೆಗಳು ಹಾನಿಯಾದವು. ಎರಡೂ ಕೋಮಿನ ಕಡೆಯಿಂದಲೂ ಕಲ್ಲು ತೂರಾಟ ನಡೆದೇ ಇತ್ತು.

ಇಷ್ಟೆಲ್ಲಾ ಆಗುತ್ತಿದ್ದರೂ ಸ್ಥಳದಲ್ಲೇ ಇದ್ದ ಪೊಲೀಸರು ಮಾತ್ರ ಕುಡಿಯುವ ತಮ್ಮ ಕೆಲಸ ಬಿಟ್ಟು ಮೇಲೇಳಲಿಲ್ಲ. ಪ್ರಾಯಶಃ ತಮಗೂ ಪಾನ-ಸಂಗೀತ ಗೋಷ್ಠಿಯ ಮಜಾ ಸಿಗುತ್ತೆ ಅಂತ ಈ ಕಾರ್ಯಕ್ರಮಕ್ಕೆ ಅನುಮತಿ ಕೊಟ್ಟಿದ್ದರೋ ಏನೋ. ಅಂತ ಅನುಮತಿ ಜಬರ್ದಸ್ತಾಗಿ ಕುಡಿದು ಮೇಲೇಳುವ ಹೊತ್ತಿಗೆ ಅತ್ತ ದೊಂಬಿ ಬಹಳ ಹಾನಿ ಮಾಡಿಯಾಗಿತ್ತು. ಇನ್ನೇನು ಪರಿಸ್ಥಿತಿ ಕೈ ಮೀರುತ್ತೆ ಎಂದುಕೊಂಡು ಲಾಠಿಚಾರ್ಜ್ ಮಾಡಿ ಜನರನ್ನು ಚದುರಿಸಿದರು. ಆಗ ಆಗಮಿಸಿದ ಪೊಲೀಸ್ ಕಮೀಷನರ್ ನಾರಾಯಣ ನಡುವಿನಮನಿ ದೊಂಬಿಯಲ್ಲಿ ಭಾಗವಹಿಸಿದವರನ್ನು ಗೂಂಡಾ ಕಾಯ್ದೆಯಡಿ ಬಂಧಿಸುವುದಾಗಿ ಹೇಳಿ ಹೊರಟು ಹೋದ. ಅಷ್ಟೇ ಬೇಕಾಗಿತ್ತು ನೋಡಿ ನಮ್ಮ ಕಮರಿಪೇಟೆ ಪೊಲೀಸ್ ಠಾಣೆಯ ಸಿಪಿಐ ಕಾರಬಳೆಗೆ. ತಕ್ಷಣ ಕಾರ್ಯ ಪ್ರವೃತ್ತನಾಗಿ 40 ಜನರನ್ನು ಬಂಧಿಸಿ, ದಲಿತರ ಮೇಲಿನ ಅಟ್ರಾಸಿಟಿ ಕೇಸು ಜಡಿದು ಜೈಲಿಗಟ್ಟಿ ದೊಡ್ಡದಾಗಿ ಪೋಸು ಕೊಟ್ಟು ನಿಂತ. ಅಸಲಿಗೆ ಈತ ಬಂಧಿಸಿ ಜೈಲಿಗಟ್ಟಿದ್ದು ಯಾರನ್ನು ಗೊತ್ತೆ? ಗಲಭೆಗೆ ಪ್ರಚೋದನೆ ಮಾಡಿ, ಗಲಭೆ ಎಬ್ಬಿಸಿದ ಚೆಡ್ಡಿಗಳನ್ನು ಅಂತ ತಪ್ಪಾಗಿ ಭಾವಿಸಬೇಡಿ. ಗಲಭೆಯಲ್ಲಿ ಪೆಟ್ಟು ತಿಂದು ನರಳಾಡಿದ ಅಮಾಯಕ ಮುಸ್ಲಿಂ ಯುವಕರನ್ನು! ಈಗ ಈ ಅಮಾಯಕರು ಭೂಲೋಕದ ನರಕವೆಂದೇ ಕುಖ್ಯಾತಿಗೆ ಹೆಸರಾದ ಬೆಳಗಾಂನ ಹಿಂಡಲಗಾ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾರೆ.

ಪೊಲೀಸರ ಈ ಪಕ್ಷಪಾತಿ ನೀತಿಯನ್ನು, ಅಮಾಯಕರ ಮೇಲಿನ ಅವರ ದೌರ್ಜನ್ಯವನ್ನು ಪ್ರತಿಭಟಿಸಿ ಮುಸ್ಲಿಂ ಮಹಿಳೆಯರು ಸ್ವಯಂಪ್ರೇರಿತರಾಗಿ ಕಮರಿಪೇಟೆ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದಾರೆ. ಗಲಭೆ ನಡೆಸಿ ರಕ್ತಕಾರುವ, ಬೆಂಕಿ ಇಡುವ ಗೂಂಡಾ ಚೆಡ್ಡಿಗಳನ್ನು ಬಿಟ್ಟು ಅದಕ್ಕೆ ಬಲಿಪಶುಗಳಾದವರನ್ನೇ ಯಾಕೆ ಬಂಧಿಸಿದಿರಿ ಎಂದು ಆ ಮಹಿಳೆಯರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಈಗ ಪೊಲೀಸರಿಗೆ ತಮ್ಮ ಮಾನ ಮರ್ಯಾದೆ ಉಳಿಸಿಕೊಳ್ಳುವ ಅನಿವಾರ್ಯತೆ. ಎಂಟು ಜನ ಹಿಂದೂಗಳನ್ನು ಬಂಧಿಸಿದಂತೆ ನಾಟಕವಾಡಿ, ಯಾವುದೋ ಸಣ್ಣದೊಂದು ಕೇಸು ಹಾಕಿ ಕಣ್ಣೊರೆಸುವ ತಂತ್ರ ಮಾಡಿದ್ದಾರೆ.

ವಾಸ್ತವದಲ್ಲಿ ತೊರವಿ ಹಕ್ಕಲದ ಒಡ್ಡರ ಓಣಿಯ ಈ ಘಟನೆ ಕೋಮುವಾದಿ ಚೆಡ್ಡಿಗಳ ವ್ಯವಸ್ಥಿತ ಕಾರ್ಯಾಚರಣೆಯ ಭಾಗವೇನೋ ಹೌದು. ಆದರೆ ಅದು ಅಷ್ಟಕ್ಕೇ ಸೀಮಿತವಾಗಿಲ್ಲ, ಅದರ ಹಿಂದೆ ರಾಜಕೀಯವೂ ಬಹಳವಾಗಿ ಕೆಲಸ ಮಾಡಿದೆ.

ರಾಜ್ಯದಲ್ಲಿ ಕೋ-ಜಾ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದ ನಂತರ ಬಿಜೆಪಿಯ ಜಗದೀಶ್ ಶೆಟ್ಟರ್‌ಗೂ ಜೇವ ಬಂದ ಹಾಗಾಗಿತ್ತು, ಧಾರವಾಡದ ಉಸ್ತುವಾರಿ ಸಚಿವ ಸ್ಥಾನವೂ ಅವನ ಹೆಗಲೇರಿತ್ತು, ಅಲ್ಲಿಯ ತನಕ ಬಾಲ ಮುದುಡಿಕೊಂಡಿದ್ದ ಸಂಘಪರಿವಾರದ ಚೆಡ್ಡಿ ವಲಯದಲ್ಲೂ ತುರಿಕೆ ಜಾಸ್ತಿಯಾಗಿ ಒದ್ದಾಡುತ್ತಿದ್ದರು. ಬರುವ ಮೇ ತಿಂಗಳಲ್ಲಿ ಮಹಾನಗರ ಪಾಲಿಕೆಯ ಚುನಾವಣೆ ನಡೆಯಲಿರುವ ಸತ್ಯವೂ ಅವರನ್ನು ಕಾಡುತ್ತಿತ್ತು, ಹೀಗಾಗಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲ ರಾಜಕೀಯ ಪಕ್ಷಗಳಲ್ಲೂ ಬಿರುಸಿನ ಚಟುವಟಿಕೆ ಪ್ರಾರಂಭವಾಗಿಬಿಟ್ಟಿದೆ. ಇನ್ನು ಬಿಜೆಪಿ-ಚೆಡ್ಡಿ ಕಂಬೈನ್ ಸುಮ್ಮನಿರುತ್ತಾರೆಯೇ? ತಮಗೆ ಬೇಕಾದಂತೆ ವಾರ್ಡುಗಳ ಮೀಸಲಾತಿ ಹಂಚಿಕೆ ಮಾಡಿಕೊಂಡುಬಿಟ್ಟಿದ್ದಾರೆ. ಅದಲ್ಲದೇ ಒಟ್ಟಾರೆ ಸಮಾಜವನ್ನು ಧರ್ಮದ ಆಧಾರದಲ್ಲಿ ದೊಂಬಿ-ದಳ್ಳುರಿಗಳನ್ನು ಹಚ್ಚಿ, ಓಟು ಪಡೆಯುವ ಅವರ ಟ್ರೆಡಿಷನಲ್ ಸ್ಟೈಲನ್ನು ಶುರುವಿಟ್ಟುಕೊಂಡಿದ್ದಾರೆ. ಪರಿಣಾಮವಾಗಿ, ವಿವಿಧ ಮಂದಿರಗಳ ನಿರ್ಮಾಣ, ಹೋಮ-ಹವನ, ದೀಕ್ಷೆ, ಭಾಷಣ-ಹೀಗೆ ಹತ್ತು ಹಲವು ಶೋಗಳನ್ನು ನಡೆಸುತ್ತಿದ್ದಾರೆ. ಅಂತಹದ್ದರಲ್ಲಿ ಒಂದು ಒಡ್ಡರ ಓಣಿಯ ಬನ್ನಿ ಮಹಾಕಾಳಿ ಪಾನ-ಸಂಗೀತಗೋಷ್ಠಿ ಎಪಿಸೋಡ್.



ಠಾಣೆಯ ಮುಂದೆ ಪ್ರತಿಭಟಿಸುತ್ತಿರುವ ಮಹಿಳೆಯರು

ಬನ್ನಿ ಮಹಾಕಾಳಿ ಪಾನ-ಸಂಗೀತ ಗೋಷ್ಠಿಯನ್ನು ಸಂಘಟಿಸುವುದರ ಹಿಂದೆ ಚೆಡ್ಡಿ ಪಟಾಲಂಗೆ ಇನ್ನೊಂದು ದುರುದ್ದೇಶವೂ ಇತ್ತು. ಇತ್ತೀಚೆಗೆ ಹುಬ್ಬಳ್ಳಿಯ ದಲಿತರು ಹಿಂದೂ ಸಮಾಜೋತ್ಸವದಂತಹ ಕೋಮುವಾದಿ ಚೆಡ್ಡಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿಲ್ಲ. ಅಂತಹ ಕಾರ್ಯಕ್ರಮಗಳನ್ನು ವಿರೋಧಿಸುತ್ತಿದ್ದಾರೆ. ಬದಲಾಗಿ ಕೋಮು ಸಾಮರಸ್ಯ, ಸಹಬಾಳ್ವೆಯಂತಹ ಆಶಯವಿರುವ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ದಲಿತರನ್ನು ಹೇಗಾದರೂ ಮಾಡಿ ದಾರಿ ತಪ್ಪಿಸಿ, ಭಾಯಿ ಭಾಯಿ ಎಂದು ಮತ್ತೆ ತಮ್ಮ ಮುಷ್ಠಿಯೊಳಗ್ಗೆ ಕರೆತರುವ ಖುನ್ನಾರ ಚೆಡ್ಡಿ ವಲಯದೊಳಗೆ ನಡೆದೇ ಇತ್ತು. ಆದ್ದರಿಂದಲೇ ತೊರವಿ ಹಕ್ಕಲಲ್ಲಿ ದಲಿತರು ವಾಸಿಸುವ ಪ್ರದೇಶದಲ್ಲಿಯೇ ದಲಿತರ ದೇವತೆಯಾದ ಬನ್ನಿ ಮಹಾಕಾಳಿಗೆ ಒಂದು ದೇವಸ್ಥಾನ ಕಟ್ಟಿಸಿ, ಭರ್ಜರಿ ಉದ್ಘಾಟನೆ ಮಾಡಿ ತಾವೂ ದಲಿತಪರ ಎಂದೂ, ದಲಿತರೂ ಹಿಂದೂಗಳೇ ಎಂದೂ ಬಿಂಬಿಸಲು ಪ್ರಯತ್ನ ಮಾಡಿದ್ದಾರೆ. ಉದ್ಘಾಟನೆಯ ನಂತರ ನಿರೀಕ್ಷೆಯಂತೆ, ದೇವಾಲಯ ಉದ್ಘಾಟನೆಗೆ ಮುಸ್ಲಿಮರು ಅಡ್ಡಿಪಡಿಸಿದರು, ಹಿಂದೂ ಹುಡುಗಿಯರನ್ನು ಮುಸ್ಲಿಮ್ ಹುಡುಗರು ಚುಡಾಯಿಸಿದರು ಎಂದು ಹಸಿ ಸುಳ್ಳು ಹಬ್ಬಿಸಿ ಗಲಭೆ ಎಬ್ಬಿಸಿದ್ದಾರೆ. ನಿಜಾರ್ಥದಲ್ಲಿ ದಲಿತರು ಮತ್ತು ಮುಸ್ಲಿಮರು ಹೊಡೆದಾಡುಕೊಳ್ಳುವಂತೆ ಮಾಡಿ ದೂರದಲ್ಲಿ ನಿಂತು ಇಷ್ಟಾರ್ಥ ಸಾಧನೆಯ ಮಜಾ ಅನುಭವಿಸಿದ್ದಾರೆ. ಬಿಜೆಪಿಗೆ ದಲಿತರ ಓಟುಗಳೂ ಖಾಯಂ ಆದವು. ದಲಿತರು ಪರ್ಮನೆಂಟ್ ಮುಸ್ಲಿಂ ವಿರೋಧಿಗಳೂ ಆದರು. ಹೇಗಿದೆ ಚೆಡ್ಡಿಗಳ ಬ್ರಾಹ್ಮಣವಾದಿ ಬ್ರೇನ್?


ಈ ಎಲ್ಲಾ ಚಟುವಟಿಕೆಗಳನ್ನು ಖುದ್ದಾಗಿ ಮಾನಿಟರ್ ಮಾಡಿ ಮಾರ್ಗದರ್ಶನ ನೀಡುತ್ತಿರುವವರು ಜಗದೀಶ್ ಶೆಟ್ಟರ್, ಅವನ ತಮ್ಮ ಪ್ರದೀಪ್ ಶೆಟ್ಟರ್, ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹಾಲಿ ಅಧ್ಯಕ್ಷ ಅಶೋಕ ಕಾಟವೇ, ಚೆಡ್ಡಿ ಸಂಸದ ಪ್ರಹ್ಲಾದ್ ಜೋಶಿ ಹಾಗೂ ಮಾಜಿ ಕಾರ್ಪೊರೇಟರ್ ರಂಗಾಬದ್ದಿ.

ಇವರೆಲ್ಲರೂ ಪರದೆಯ ಹಿಂದಿರುವ ಶಕ್ತಿಗಳು. ಪರದೆಯ ಮುಂದೆ ಯಾರನ್ನು ಬಿಟ್ಟಿದ್ದಾರೆ ಗೊತ್ತೆ? ತೊರವಿ ಹಕ್ಕಲದಿಂದ ಈ ಹಿಂದೆ ಆರಿಸಿ ಬಂದಿದ್ದ ಬಿಜೆಪಿಯ ಕಾರ್ಪೊರೇಟರ್ ವೆಂಕಟೇಶ್ ಮೇಸ್ತ್ರಿ ಎಂಬ ದಲಿತನನ್ನು! ಈ ವೆಂಕಟೇಶನೇ ಬನ್ನಿ ಮಹಾಕಾಳಿ ಗುಡಿ ಕಟ್ಟಲು ಉದಾರವಾಗಿ ಸಹಾಯ ಮಾಡಿದ್ದಾನೆ. ಇವನು ಕೊಟ್ಟಿರುವ ಹಣ ತನ್ನ ಜೇಬಿನದೋ ಅಥವಾ ಸಂಘ ಪರಿವಾರದ್ದೋ ಗೊತ್ತಿಲ್ಲ, ಆದರೆ ಒಬ್ಬ ದಲಿತನಾಗಿ ಇಡೀ ದಲಿತ ಸಮುದಾಯವನ್ನು ಸಂಘ ಪರಿವಾರದ ಬ್ರಾಹ್ಮಣಶಾಹಿ ರಾಜಕಾರಣಕ್ಕೆ ಬಲಿಕೊಡುತ್ತಿರುವುದು ಮಾತ್ರ ದುರಂತ. ಸಂಘ ಪರಿವಾರದ ಬ್ರಾಹ್ಮಣವಾದಿ ರಾಜಕೀಯ ದಲಿತ, ಮುಸ್ಲಿಂ ಮತ್ತು ಮಹಿಳೆಯರ ಶತ್ರು ಎಂಬ ಸತ್ಯ ಇಂದಲ್ಲ ನಾಳೆ ದಲಿತರಿಗೂ ಅರ್ಥವಾಗುತ್ತೆ. ಆಗ ತಮ್ಮವನೇ ಆದ ಆದರೆ ಸಂಘ ಪರಿವಾರಕ್ಕೆ ಮಾರಿಕೊಂಡ ಈ ವೆಂಕಟೇಶ್ ಶಾಸ್ತ್ರಿಯಾದಿಯಾಗಿ ಇಡೀ ಸಂಘ ಪರಿವಾರದ ಎಲ್ಲಾ ಮಂಗಗಳ ಚೆಡ್ಡಿ ಬಿಚ್ಚಿ ಬೀದಿಯಲ್ಲಿ ಮೆರವಣಿಗೆ ಮಾಡುತ್ತಾರೆ ಈ ದಲಿತರು. ಹಾಗಿರುತ್ತೆ ದಲಿತ ಶಕ್ತಿ.


-ವರದಿಗಾರ

ಗಲಭೆಯಾದಾಗ ಹೊನ್ನಳ್ಳಿ, ಹಿಂಡಸಗೇರಿ ಎಲ್ಲಿದ್ದರು?

ಒಂದು ಕಡೆ ಮುಸ್ಲಿಂ ಸಮುದಾಯದ ಮೇಲೆ ಸಂಘಪರಿವಾರದ ಚೆಡ್ಡಿಗಳು ಆಕ್ರಮಣ ಮಾಡಿ ದೊಂಬಿ ನಡೆಸುತ್ತಿದ್ದಾರೆ. ಇನ್ನೊಂದೆಡೆ, ರಕ್ಷಣೆ ನೀಡಬೇಕಿದ್ದ ಪೊಲೀಸರು ಚೆಡ್ಡಿಗಳೊಂದಿಗೆ ಸೇರಿ ಹೊಡೆತ ತಿಂದ ಮುಸ್ಲಿಂ ಹುಡುಗರನ್ನೇ ಅಟ್ರಾಸಿಟಿ ಕೇಸು ಜಡಿದು ಜೈಲಿಗಟ್ಟುತ್ತಿದ್ದಾರೆ. ಮತ್ತೊಂದೆಡೆ ಜಗದೀಶ್ ಶೆಟ್ಟರ್ ಆದಿಯಾಗಿ ಇಡೀ ಬಿಜೆಪಿ ಪುಢಾರಿಗಳೆಲ್ಲ ಮುಸ್ಲಿಮರ ಮೇಲೆ ಮುಗಿಬಿದ್ದಿದ್ದಾರೆ. ಇಂಥ ಸನ್ನಿವೇಶದಲ್ಲಿ ಮುಸ್ಲಿಮ್ ನಾಯಕರೂ, ಮುಸ್ಲಿಮ್ ಸಮಾಜದ ಪ್ರತಿನಿಧಿಗಳೂ, ಶಾಸಕರೂ, ಮಾಜಿ ಸಚಿವರೂ ಆದ ಶ್ರೀಮಾನ್ ಜಬ್ಬಾರ್ ಖಾನ್ ಹೊನ್ನಳ್ಳಿ ಮತ್ತು ಎ.ಎಂ. ಹಿಂಡಸಗೇರಿ ಎಲ್ಲಿದ್ದರು? ಈಗಂತೂ ಅವರು ಪತ್ತೆ ಇಲ್ಲ. ಪತ್ತೆಯಾದಾಗ ಜ್ಞಾಪಕವಿಟ್ಟುಕೊಂಡು ಕೇಳೋಣ ಅಂತ ಮುಸ್ಲಿಂ ಸಮಾಜದ ಜನ ಅವರಿಗಾಗಿ ಹುಡುಕಾಟ ನಡೆಸಿದ್ದಾರೆ. ಎಲ್ಲಾ ಮುಗಿದ ಮೇಲೆ ಅಲ್ಲಿಗೆ ಹೋದರೆ ಮುಸ್ಲಿಂ ಜನ ಚಪ್ಪಲಿಯಿಂದ ಹೊಡೆಯುತ್ತಾರೆ ಅಂದುಕೊಂಡೋ ಏನೋ ಅಂತೂ ಅವರು ಈವರೆಗೆ ನಾಪತ್ತೆಯಾಗಿದ್ದಾರೆ. ಭಾನುವಾರದಂದು ಹುಬ್ಬಳ್ಳಿಯ ಮುಸ್ಲಿಮರು ಈದ್ ಮಿಲಾದ್ ಆಚರಣೆಗಾಗಿ ಮೆರವಣಿಗೆ ತೆಗೆಯುತ್ತಾರೆ. ಆವತ್ತು ಏನಾದರೂ ಪೋಜು ಕೊಡೋಕೆ ಬರ್ತಾರೋ ಅಥವಾ ಜನರ ಚಪ್ಪಲಿಗಳಿಗೆ ಹೆದರಿ ತಮ್ಮ ಅಜ್ಞಾತವಾಸ ಮುಂದುವರೆಸುತ್ತಾರೋ ಕಾದುನೋಡಬೇಕು.




KPSC: ಗೌಡ ಸಂತಾನಕ್ಕೇ ಚೇರ್ಮನ್‌ಗಿರಿ



ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರ ಕುರ್ಚಿ ಖಾಲಿಯಾಗಿ ಇನ್ನೇನು ಮೂರು ತಿಂಗಳಾಗುತ್ತಾ ಬಂದಿದೆ. ಜೊತೆಗೆ ಎಂಟು ಸದಸ್ಯರಿರಬೇಕಿದ್ದಲ್ಲಿ ಈಗ ಕೇವಲ ಐವರಿದ್ದಾರೆ. ಇಷ್ಟು ಸಾಲದೆಂಬಂತೆ KPSC ಗೆ ಈಗ ಕಾರ್ಯದರ್ಶಿಯೂ ಇಲ್ಲ. ಒಟ್ಟಾರೆ ಹೇಳುವವರು ಕೇಳುವವರು ಯಾರೂ ಇಲ್ಲದಂತಹ, ಒಂದು ರೀತಿಯ ದಿಕ್ಕೆಟ್ಟ ಸ್ಥಿತಿಯಲ್ಲಿದೆ ಕೆಪಿಎಸ್‌ಸಿ. ಅಯೋಗ್ಯರೂ, ಅವಿವೇಕಿಗಳೂ ಸರ್ಕಾರ ನಡೆಸಲು ಬಂದರೆ ಏನೆಲ್ಲಾ ಅರಾಜಕತೆ ಸೃಷ್ಟಿಯಾಗುತ್ತದೋ ಅವೆಲ್ಲವೂ ಈಗ ಲೋಕಸೇವಾ ಆಯೋಗದಲ್ಲಿ ಎದ್ದು ಕಾಣುತ್ತಿದೆ.


ಈಗ ಖಾಲಿ ಬಿದ್ದಿರುವ ಚೇರ್ಮನ್ ಹಾಗೂ ಸದಸ್ಯ ಹುದ್ದೆಗಳಿಗೆ ಭಾರೀ ಲಾಬಿಗಳು ನಡೆಯುತ್ತಿದೆ. ದೇವೇಗೌಡರ ಸುಪುತ್ರ ಬಾಲಕೃಷ್ಣೇಗೌಡ ಹಾಗು ಹಾಲಿ ಬೆಸ್ಕಾಂನ ಮ್ಯಾನೇಜಿಂಗ್ ಡೈರೆಕ್ಟರ್ ಗೋನಾಳ್ ಭೀಮಪ್ಪ ಚೇರ್ಮನ್‌ಗಿರಿಗಾಗಿ ಜಿದ್ದಾಜಿದ್ದಿ ನಡೆಸುತ್ತಿರುವುದಂತೂ ನೋಡಲು ಸುಜವಾಗಿದೆ.



ಕೆಎಎಸ್ ಅಧಿಕಾರಿಯಾಗಿದ್ದ ಬಾಲಕೃಷ್ಣೇಗೌಡ ಕಳೆದ ವರ್ಷ ಸ್ವಯಂ ನಿವೃತ್ತಿ ಪಡೆದಿದ್ದರು. ಗೌಡರ ಕುಟುಂಬ ಗಳಿಸುತ್ತಿರುವ ಹಣ ಹಾಗೂ ಸಂಪಾದಿಸುತ್ತಿರುವ ಅಪಾರ ಆಸ್ತಿಪಾಸ್ತಿ, ಶುರು ಮಾಡಿರುವ ಬ್ಯುಸಿನೆಸ್‌ಗಳನ್ನು ನಿರ್ವಹಿಸಲು ಬಾಲಕೃಷ್ಣೇಗೌಡ ನಿಂತುಬಿಟ್ಟಿದ್ದರು. ಜೊತೆಗೆ ಮುಖ್ಯಮಂತ್ರಿಗಳು ನೋಡಬೇಕಾದ ಫೈಲ್‌ಗಳನ್ನೆಲ್ಲಾ ತರಿಸಿಕೊಂಡು ಕ್ಲಿಯರ್ ಮಾಡಿಸುವುದು, ಹಲವಾರು ಇಲಾಖೆಗಳ ಹಿರಿಯ ಅಧಿಕಾರಿಗಳನ್ನು ಮನೆಗೇ ಕರೆಸಿಕೊಂಡು ಏನು ಮಾಡಬೇಕು, ಏನನ್ನು ಮಾಡಬಾರದೆಂಬ ಆದೇಶಗಳನ್ನು ಕೊಡುವ ಚಟವೂ ಬಾಲಕೃಷ್ಣೇಗೌಡರಿಗಿದೆ. ಈತನಿಗೆ ಈಗ ಕೆಪಿಎಸ್‌ಸಿ ಚೇರ್ಮನ್ ಆಗಿಬಿಡಬೇಕೆಂಬ ಆಸೆ ಹುಟ್ಟಿಕೊಂಡಿದೆ. ಆದರೆ ಅವರ ಆಸೆಗೆ ಸ್ವತಃ ದೇವೇಗೌಡ ಹಾಗೂ ರೇವಣ್ಣನಿಂದಲೇ ಅಡೆತಡೆಗಳು ಬರತೊಡಗಿವೆ. ಗೌಡರ ಲೆಕ್ಕಾಚಾರ ಏನೆಂದರೆ ಈಗಾಗಲೇ ಒಬ್ಬ ಮಗ ಸಿಎಂ, ಇನ್ನೊಬ್ಬ ಕ್ಯಾಬಿನೆಟ್ ಮಂತ್ರಿ ಹಾಗೂ ಮುಂದಿನ ಸಿಎಂ ಆಗುತ್ತಾನಾದ್ದರಿಂದ ಮತ್ತೊಬ್ಬ ಮಗನಿಗೆ ಕೆಪಿಎಸ್‌ಸಿ ಚೇರ್ಮನ್‌ಗಿರಿಯಂತಾ ಮಹತ್ವದ ಹುದ್ದೆ ಕೊಡಿಸಿ ಬಿಟ್ಟರೆ ಜನ ಉಗಿಯುತ್ತಾರೆಂಬ ಹಿಂಜರಿಕೆಯಿದೆ. ಅಷ್ಟೇ ಅಲ್ಲ, ಗೌಡರ ಕುಟುಂಬ ಸಾವಿರಾರು ಕೋಟಿ ರೂ.ಗಳ ದಂಧೆಯ ಎದುರು ಕೆಪಿಎಸ್‌ಸಿ ಕೆಲಸ ಚಪ್ರಾಸಿ ಲೆವೆಲ್‌ದು ಎಂಬ ಅಹಂ ಸಹ ಇದೆ. ಇದಕ್ಕೆ ತಕ್ಕಹಾಗೆ ಗೋನಾಳ್ ಭೀಮಪ್ಪ ಸಚಿವ ರೇವಣ್ಣನ ಕಾಲಿಡಿದು ತನಗೆ ಚೇರ್ಮನ್‌ಗಿರಿ ಕೊಡಿಸುವಂತೆ ದಿನವೂ ಗೋಗರೆಯುತ್ತಿದ್ದಾನೆ. ವಿದ್ಯುತ್ ಇಲಾಖೆಯ ಬೆಸ್ಕಾಂನ ಎಂಡಿಯಾಗಿರುವ ಗೋನಾಳ್ ಏವನ್ ನುಂಗಣ್ಣನ. ದಕ್ಷತೆ ಮಾತ್ರ ಸೊನ್ನೆ.

ಗೌಡರ ಕುಟುಂಬಕ್ಕೆ ಬೇಕಾಗಿರುವುದೂ ಗೋನಾಳ್ ತರಹ ಪೆದ್ದಂಭಟ್ಟರೆ ತಾನೆ? ಜೊತೆಗೆ ರೇವಣ್ಣನಿಗೆ ತನ್ನ ಕಡೆಯ ಕ್ಯಾಂಡಿಡೇಟೊಬ್ಬ ಕೆಪಿಎಸ್‌ಸಿ ಅಧ್ಯಕ್ಷನಾದರೆ ಒಳ್ಳೆಯದೆಂಬ ನಿರೀಕ್ಷೆಯೂ ಇದೆ. ಹಾಗಾಗಿ ಗೋನಾಳ್ ಭೀಮಪ್ಪನೆ ಮುಂದಿನ ಕೆಪಿಎಸ್‌ಸಿ ಚೇರ್ಮನ್ ಎಂಬ ಸುದ್ದಿಗಳಂತೂ ದಟ್ಟವಾಗುತ್ತಿವೆ.


ಈತ ದಲಿತರಲ್ಲಿ ಎಡಗೈ ಪಂಗಡಕ್ಕೆ ಸೇರಿರುವುದರಿಂದ ಗೌಡರು ರಾಜಕೀಯ ಲಾಭದ ಲೆಕ್ಕಾಚಾರವನ್ನು ಹಾಕುತ್ತಿದ್ದಾರೆ. ಆದರೆ ಯಾರ್‍ಯಾರೊ ಮಂತ್ರಿಗಳ ಆಪ್ತ ಸಹಾಯಕನಾಗಿ ಸರ್ವಿಸ್ ಕಳೆದಿರುವ ಭೀಮಪ್ಪನ ಬಗ್ಗೆ ಸ್ವತಃ ಮಾದಿಗ ಜನಾಂಗದವರಲ್ಲೇ ವಿಶ್ವಾಸವಿಲ್ಲ. ಬಿಜಾಪುರದ ಮಾದಿಗ ಸಂಘಟನೆಯ ಮುಖಂಡ ದೊಡ್ಡಮನಿ ಇನ್ನು ಮುಂತಾದವರು ಈಗಾಗಲೇ ಗೋನಾಳ್ ನೇಮಕದ ವಿರುದ್ಧ ಗಲಾಟೆ ಶುರು ಮಾಡಿಬಿಟ್ಟಿದ್ದಾರೆ. ಮೊದಮೊದಲು ಬಿಜೆಪಿ ಸಚಿವರಾದ ಗೋವಿಂದ ಕಾರಜೋಳ ಹಾಗೂ ಆಲ್ಕೋಡ್ ಹನುಮಂತಪ್ಪನು 'ಗೋನಾಳ್ ಬೇಡ' ಎನ್ನುತ್ತಿದ್ದವರು ಈಗ ಆಗಲಿ ಎಂದು ತಲೆ ಆಡಿಸಿಬಿಟ್ಟಿದ್ದಾರೆ. ಇದಕ್ಕೆ ತಕ್ಕಷ್ಟು ಗೌರವಧನ ನೀಡಲಾಗಿದೆಯಂತೆ. ಗೋನಾಳ್ ಲಾಬಿಯಿಂದಾಗಿ ಅದೇ ಜನಾಂಗದ ಅರ್ಹ ವ್ಯಕ್ತಿ ಟೇಗನೂರ್ ಈಗ ಬದಿಗೆ ಸರಿಯಬೇಕಾಗಿ ಬಂದಿದೆ. ಸದ್ಯಕ್ಕೆ ಯಾರ ಹೆಸರೂ ಫೈನಲ್ ಆಗಿಲ್ಲವಾದ್ದರಿಂದ ಹಾಸನದ ಮಾಜಿ ಸಂಸದ ಜವರೇಗೌಡ ಮತ್ತು ಹಾಲಿ ಮೆಂಬರ್ ದಾಸಪ್ಪನವರೂ ಒಂದು ಕೈ ನೋಡೇಬಿಡೋಣವೆಂಬ ಉಮೇದಿನಲ್ಲಿದ್ದಾರೆ. ಈ ನಡುವೆ ಕೆಪಿಎಸ್‌ಸಿ ಮೆಂಬರ್ ಆಗಲು ಬಿಡಿಎ ಸದಸ್ಯ ವೀರಭದ್ರಯ್ಯ, ಮಂಗಳೂರಿನ ನರ್ರೋನ ಮುಂತಾದವರೂ ಓಡಾಡುತ್ತಿದ್ದಾರೆ.



ಕೋ-ಜಾಗಳಿಗೆ ಯಾರು ಎಷ್ಟು ಲದ್ದಿ ತಿನ್ನಿಸುತ್ತಾರೆ ಎಂಬುದರ ಮೇಲೆ ಅಂತಿಮ ಆಯ್ಕೆ ನಡೆಯಲಿವೆ. ಇದೆಲ್ಲಾ ಇರಲಿ, ಹಾಲಿ ಇನ್‌ಚಾರ್ಜ್ ಚೇರ್ಮನ್ ವೆಂಕಟಸ್ವಾಮಿಯಾದರೂ ಈಗಾಗಲೇ ನಡೆಯಬೇಕಿದ್ದ ಕೆಇಎಸ್ ಪ್ರಿಲಿಮಿನರಿ ಪರೀಕ್ಷೆ ಮುಗಿಸಿ ಕೆಎಎಸ್ 2007 ಗೆ ತಯಾರಿ ಮಾಡಿಕೊಳ್ಳಬಾರದಾ?

ಕನಿಷ್ಠ ಒಂದು ಲಕ್ಷ ಅಭ್ಯರ್ಥಿಗಳು ಈ ಪರೀಕ್ಷೆ ಬರೆಯಲು ಕಾಯುತ್ತಿರುವ ವಿಚಾರ ಕೆಪಿಎಸ್‌ಸಿಗೆ ಗೊತ್ತಿಲ್ಲವಾ ಅಥವಾ ಎಲ್ಲರೂ ಕತ್ತೆ ಮೇಯಿಸುತ್ತಿದ್ದಾರಾ?

ಡಾ. ಕೃಷ್ಣಾಗೆ ಇನ್ನೂ ಕುರ್ಚಿ ಮೋಹ



ಕೆಪಿಎಸ್‌ಸಿಯ ಮಾಜಿ ಚೇರ್ಮನ್ ಡಾ. ಕೃಷ್ಣಾ ಅಧಿಕಾರ ಮುಗಿಸಿ ಇನ್ನೂ ಮೂರು ತಿಂಗಳಾಗಿಲ್ಲ, ಆಗಲೇ ಅವರಿಗೆ ಕುಂಡಿಕೆರೆತ ಶುರುವಾಗಿಬಿಟ್ಟಿದೆ. ಅವರಿಗೀಗ ಅರ್ಜೆಂಟಾಗಿ ಅಧಿಕಾರ, ಕಾರು, ಬಂಗಲೇ ಬೇಕೆನಿಸಿಬಿಟ್ಟಿದೆ.

ಅದಕ್ಕಾಗಿ ಕೃಷ್ಣಾ ಈಗ ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತರಾಗಲು ಲಾಬಿ ನಡೆಸಿದ್ದಾರೆ. ಈ ಸಂಬಂಧ ಒಂದು ಫೈಲೂ ಈಗ ರಾಜ್ಯಪಾಲರ ಹತ್ತಿರ ಹೋಗಿದೆ ಎನ್ನಲಾಗಿದೆ. ಆದರೆ ಸಂವಿಧಾನ ಹಾಗೂ ಮಾಹಿತಿ ಆಯೋಗದ ನಿಯಮಗಳ ಪ್ರಕಾರ ಡಾ. ಕೃಷ್ಣಾಗೆ ಆಯುಕ್ತರ ಹುದ್ದೆಗೆ ನೇಮಕಗೊಳ್ಳುವ ಅರ್ಹತೆಯಿಲ್ಲ ಎಂಬ ಪುಕಾರುಗಳಿವೆ.

ಮುಂದೇನಾಗುತ್ತದೋ ಕಾದು ನೋಡಬೇಕು.

ಥೂತ್ತೇರಿ

ಯಾಹೂ

ನಮ್ಮ ಚುಂಚನಗಿರಿ ಸ್ವಾಮಿಗಳು ಕಾಡಿನ ಇಲಾಖೆಯ ಜಮೀನನ್ನು ಒತ್ತುವರಿ ಮಾಡಿಕೊಂಡು ಬೇಲಿ ಕಟ್ಟಿ ಮುಳ್ಳು ಬೆಳೆಸಿರುವುದರಿಂದ ಆ ಮುಳ್ಳು ಬೇಲಿಯನ್ನು ದಾಟಲಾಗಲಿ, ನೆಗೆಯಲಾಗಲಿ ಯಾರಿಗೂ ಸಾಧ್ಯವಿಲ್ಲವಂತಲ್ಲಾ. ಎಸ್ಸೆಂ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಅವರ ಆಸ್ಥಾನ ಗುರುಗಳಂತೆ ವರ್ತಿಸಿದ ಕಾರಣಕ್ಕೆ ದೇವೇಗೌಡರ ಉರಿಗಣ್ಣಿಗೆ ಗುರಿಯಾಗಿ, ಪರ್ಯಾಯ ಮಠವೂ ರಚನೆಯಾಗುವಂತಹ ಸ್ಥಿತಿ ನಿರ್ಮಾಣಗೊಂಡಿತ್ತಂತಲ್ಲಾ. ಆದರೆ ಮುದಿ ಎತ್ತಿನಂತಹ ಕೆಂಗೇರಿ ಸ್ವಾಮಿಗಳು ಏನೇ ಮಾಡಿದರೂ ದೇವೇಗೌಡರ ತಾಳಕ್ಕೆ ಹೆಜ್ಜೆ ಹಾಕದೆ ಕುಳಿತಲ್ಲೇ ಮುಲುಕಲಾಗಿ ಅನಿವಾರ್ಯವಾಗಿ ಗೌಡರ ಮಕ್ಕಳು ಆದಿಚುಂಚನಗಿರಿ ಪ್ರಭುಗಳ ಕಡೆಗೆ ಮತ್ತೆ ನೋಡುವಂತಾಯ್ತಂತಲ್ಲಾ. ಸಾಮಾನ್ಯವಾಗಿ ಆಳುವ ಸರ್ಕಾರದ ಕಡೆಯೇ ವಾಲುತ್ತ ವಿರೋಧ ಪಕ್ಷದವರು ಪದತಲದಲ್ಲಿರುವಂತೆ ನೋಡಿಕೊಳ್ಳುವ ಒಕ್ಕಲಿಗ ಜಗತ್ತಿನ ಗುರುವರ್ಯರು ಅನಿವಾರ್ಯವಾಗಿ ಡಿಕೆಶಿಯ ಕೆಂಗಣ್ಣಿಗೆ ಗುರಿಯಾಗಿ ಜಮೀನು ಒತ್ತುವರಿಯಂತಹ ಮಾಮೂಲಿ ಆರೋಪವನ್ನು ಎದುರಿಸುವಂತಾಗಿದೆಯಂತಲ್ಲಾ. ಆದರೆ ಚುಂಚನಗಿರಿ ಸ್ವಾಮಿಗಳ ಪೂರ್ವೇತಿಹಾಸವನ್ನು ಬಲ್ಲವರಿಗೆ, ಡಿಕೆಶಿ ಆಪಾದನೆಯಲ್ಲಿ ಕೇಸು ಮಾಡುವಷ್ಟು ಸತ್ಯಗೋಚರವಾದ ಕೂಡಲೇ ಮುಖ್ಯಮಂತ್ರಿಯೇ ಸ್ವಾಮಿಗಳ ಬಳಿಗೋಗಿ "ನೀವೇನೂ ಹೆದರಬೇಡಿ ಸ್ವಾಮಿ, ನೀವು ಹಾಕಿದ ಬೇಲಿ ಕಾಡೆಲ್ಲಾ ನಿಮ್ಮದೆ" ಎಂದು ಬಂದರಂತಲ್ಲಾ, ಥೂತ್ತೇರಿ!

ಚುಂಚನಗಿರಿಗೂ ಮುಳ್ಳುಬೇಲಿಗೂ ಭಾಳಾ ನಂಟು


* * * * * * * *

ಚುಂಚನಗಿರಿ ಜಗದ್ಗುರು ಹಾಕಿದ್ದ ಬೇಲಿ ಜಾಗ ಮುಖ್ಯಮಂತ್ರಿ ಆಶ್ವಾಸನೆಯಿಂದ ಸಕ್ರಮಗೊಂಡ ಕೂಡಲೇ ಇನ್ನು ಕಂಡಕಂಡ ಕಡೆ ಬೇಲಿ ಜಡಿಯಲು ಯಾವ ಆತಂಕವೂ ಇಲ್ಲ ಎಂದು ಸುಪ್ರೀತರಾದ ಟೈಲ್ ಗಂಗಾಧರ್, ಬುಟ್ಟಿ ತುಂಬ ಹಣ್ಣು ತುಂಬಿ ಕುಮಾರಣ್ಣನ ಕೈಗಿತ್ತು ಶಾಲು ಹೊದಿಸುತ್ತಿರುವಾಗ, ಕುಮಾರಣ್ಣ "ನೀವೇನೂ ಆ ಡಿಕೆಶಿ ಮಾತಿಗೆ ಹೆದರಬೇಡಿ ಸ್ವಾಮಿ. ನಾನು ಎಲ್ಲವನ್ನು ವಿಚಾರಿಸಿಕೊಳ್ಳುತ್ತೇನೆ" ಎಂದು ಹೇಳಿದರಂತಲ್ಲಾ. ಆದರೆ "ಅದರ ಅಗತ್ಯವಿಲ್ಲ, ನಾನೇ ಎಲ್ಲವನ್ನು ನಿಭಾಯಿಸುವ ಶಕ್ತಿಯಿದೆ" ಎಂದ ಗುರುಗಳು, ಆದಿಚುಂಚನಗಿರಿ ಮೆಡಿಕಲ್ ಕಾಲೇಜ್‌ಗೆಂದು ಜವರನಹಳ್ಳಿ ಜನ ಬಿಟ್ಟುಕೊಟ್ಟ ಜಾಗವನ್ನು ಲಪಟಾಯಿಸಿದ ಅನುಭವವನ್ನು ಮಾತ್ರ ಬಾಯಿಬಿಡಲಿಲ್ಲವಂತಲ್ಲಾ. ಜವರನಹಳ್ಳಿ ಬಡ ಒಕ್ಕಲಿಗರನ್ನು ಪುಸಲಾಯಿಸಿ, ತಮ್ಮ ಮಕ್ಕಳಿಗೆ ಉದ್ಯೋಗ ಕೊಡುವೆನೆಂದು ಹೇಳಿ, ಬೆಳೆ ಹೊಲದಲ್ಲಿ ಕಾಲೇಜ್ ಕಟ್ಟಿದ ಗುರುಗಳು ಜಮೀನು ಕಳಕೊಂಡವರಿಂದ ಜೀತ ಮಾಡಿಸಿಕೊಂಡು, ಕಡೆಗೆ ಅವರೆಲ್ಲಾ ಪ್ರತಿಭಟಿಸಿ, ಉಪವಾಸ ಮಾಡಿ, ಕಾಲವಾಗಿ ಹೋದರಂತಲ್ಲಾ. ಹೀಗೆ ಜನಾಂಗದವರ ಆಸ್ತಿಯನ್ನು ಹಗಲು ಹೊತ್ತೇ ನುಂಗಿ ನೀರು ಕುಡಿದ ಜಗದ್ಗುರುವಿಗೆ, ಚಿನ್ನಿಗಪ್ಪನೆಂಬ ಕಾಡು ಪ್ರಾಣಿ ನಿರ್ವಹಿಸುತ್ತಿರುವ ಕಾಡಿನ ಇಲಾಖೆಗೆ ಬೇಲಿ ಹಾಕಿ ಬಂದೋಬಸ್ತು ಮಾಡಿಕೊಳ್ಳುವುದ್ಯಾವ ಲೆಕ್ಕ ಎಂದು ಜವರನಹಳ್ಳಿ ಜನ ಜಮೀನು ಕಳಕೊಂಡ ಮುಖಭಾವದಲ್ಲಿ ಮಾತನಾಡಿದರಂತಲ್ಲಾ, ಥೂತ್ತೇರಿ!!

* * * * * * * *

ಚುಂಚನಗಿರಿ ಜಗದ್ಗುರು ಅರಣ್ಯ ಭೂಮಿಗೆ ಬೇಲಿ ಜಡಿಯುತ್ತಿರುವಾಗಲೇ, ಅತ್ತ ಮತ್ತೊಬ್ಬ ಜೆಡಿಎಸ್ ಜಗದ್ಗುರು ದೇವು, ಕಾಂಗ್ರೆ ಬಗರ್‌ಹುಕುಂ ಭೂಮಿಗೆಲ್ಲಾ ಬೇಲಿ ಹಾಕುತ್ತ ಹೊರಟಿದ್ದಾರಂತಲ್ಲಾ. ದೇವೇಗೌಡರ ಬೇಲಿಗೆ ತುತ್ತಾದ ಕಾಂಗ್ರೆಗಳು ಹಲ್ಲು ಗಿಲಿದು "ನಮಗೇನು ಕೊಡುತ್ತೀರಿ, ನನಗೇನು ಕೊಡುತ್ತೀರಿ" ಎಂದು ಕೇಳಿದರೆ, "ನಿನಗೆ ಟಿಕೆಟ್ ಗ್ಯಾರಂಟಿ, ನಿನಗೆ ತಕ್ಕ ನಿಗಮ ದೊರೆಯುತ್ತದೆ, ನಿನಗಂತೂ ಒಳ್ಳೆ ಮಂಡಲಿ ಕಾದುಕೊಂಡು ಕುಳಿತಿದೆ" ಎಂದರಂತಲ್ಲಾ. ಹೀಗೆ ಗೌಡರು ಆಶ್ವಾಸನೆ ಆಶೀರ್ವಾದ ಎಲ್ಲವನ್ನು ಮಿಕ್ಸ್ ಮಾಡಿ ಹೇಳುತ್ತಿರಬೇಕಾದರೆ, ಕಾಂಗ್ರೆಗಳು ಲಾಟೀನಿಗೆ ಬೀಳುವ ಪತಂಗದಂತೆ ಬಿದ್ದು ಹೋಗುತ್ತಿವೆಯಂತಲ್ಲಾ. ಇದನ್ನು ನೋಡಿದ ಕಾಂಗ್ರೆ ಲೀಡರುಗಳು "ಅಯ್ಯಯ್ಯೋ, ಹೋದರಲ್ರೀ ನಮ್ಮ ಹುಡುಗರು" ಎಂದು ಬೊಬ್ಬೆ ಹೊಡೆಯುತ್ತ ವಿಚಾರಿಸಲಾಗಿ, "ದಳಕ್ಕೆ ಹೋದವರೆಲ್ಲಾ ದನ ಮಾರಿದಂತೆ ತಮ್ಮನ್ನೇ ಮಾರಿಕೊಂಡು ಹೋಗಿರುವಾಗ, ಅವರ ಮರುಕ್ರಯಕ್ಕೆ ಹಣವನ್ನೆಲ್ಲಿಂದ ತರುವುದು? ಹೋದವರು ಹೋಗಲಿ, ಇದ್ದವರು ಇರಲಿ, ಆಮೇಲೆ ನೋಡಿಕೊಳ್ಳೋಣ" ಎಂದು ಗಾಢ ನಿದ್ರೆಗೆ ತುತ್ತಾದವಂತಲ್ಲಾ, ಥೂತ್ತೇರಿ!!

******



ಮುಖ್ಯಮಂತ್ರಿ ಅವಧಿಯನ್ನು ಪರಿಪೂರ್ಣವಾಗಿ ಅನುಭವಿಸದೆ, ಶೇಷ ಉಳಿಸಿಕೊಂಡಿದ್ದ ದೇವೇಗೌಡ, ತನ್ನ ಮಗನನ್ನು ಮುಖ್ಯಮಂತ್ರಿಯನ್ನಾಗಿಸಿ ತನ್ನ ತೆವಲು ತೀರಿಸಿಕೊಂಡಿದ್ದನ್ನು ಗಾಢವಾಗಿ ಗಮನಿಸಿದ 'ಬಂ' ಎಂಬ ಪಂಚರಂಗಿ ಪಾರ್ಟಿ ಲೀಡರ್, ತಾನೂ ಮತ್ತೊಮ್ಮೆ ವಿಧಾನಸೌಧಕ್ಕೆ ಎಡತಾಕುವ ತಯಾರಿಯಲ್ಲಿದ್ದಾರಂತಲ್ಲಾ. 'ಬಂ' ಪುನಃ ವಿಧಾನಸೌಧಕ್ಕೆ ಬರಬೇಕಾದರೆ, ವಿಧಾನಸಭಾ ಕ್ಷೇತ್ರ ಆರಿಸಿಕೊಳ್ಳಬೇಕು. ಈಗ ಹಾಲಿ ತಮ್ಮ ಕ್ಷೇತ್ರದಲ್ಲಿ ಪರಮವೈರಿಯಾಗಿ ಮಾರ್ಪಟ್ಟಿರುವ ಕುಮಾರ್ ಬಂಗಾರಪ್ಪನಿದ್ದಾನೆ. ಅವನನ್ನು ಮಣಿಸಲು ಮದುವನ್ನು ತಯಾರಿಸಲಾಗಿದೆ. ಇನ್ನುಳಿದದ್ದು ಸಾಗರ ಕ್ಷೇತ್ರ. ಸೊರಬಕ್ಕೆ ಮದುವಾದರೆ ಸಾಗರಕ್ಕೆ ಹುಳಿ ಹೆಂಡ ಎನ್ನುವಂತೆ ಸಾಗರದಲ್ಲಿರುವ ತಿಮ್ಮಪ್ಪನನ್ನು ಕೆಡವಲು ಸರಿಯಾದ ಹುಳಿ ಹೆಂಡವೇ ಆಗಬೇಕೆಂದು ಭಾವಿಸಿರುವ 'ಬಂ' ತಾವೇ ಒಂದು ಕೈ ನೋಡಿಬಿಡುವ ಆತ್ಮಹತ್ಯಾತ್ಮಕ ತೀರ್ಮಾನ ತೆಗೆದುಕೊಂಡುಬಿಟ್ಟಿದ್ದಾರಂತಲ್ಲಾ, ಥೂತ್ತೇರಿ!!

ರಿವೇಂಜ್ ಕಿಲ್ಲಿಂಗ್ಸ್ 23

ರಾ. ಸೋಮನಾಥ್

ಮಚ್ಚನ ಕೊಲೆಯಾಗುವ ತನಕ ಅದರಲ್ಲಿ ಈ ಪಾಯ್ಸನ್ ರಾಮ ಎಂಬಾತ ಇದ್ದಾನೆಂದೂ, ಆತನ ಪೂರ್ತಿ ಹೆಸರೇ ಕಡಬಗೆರೆಯ ಪಾಯ್ಸನ್ ರಾಮ ಎಂದೂ ಅನೇಕರಿಗೆ ಗೊತ್ತಿರಲಿಲ್ಲ. ಮಚ್ಚನ ಹತ್ಯೆಯಿಂದಾಗಿ ರಾತ್ರೋರಾತ್ರಿಗೆ ಕಡಬಗೆರೆ ಎಂಬ ಊರು ಮತ್ತು ಪಾಯ್ಸನ್ ರಾಮನ ಹೆಸರೂ ಪ್ರಖ್ಯಾತಿ ಬಂದುಬಿಟ್ಟವು.

ಕಡಬಗೆರೆಯ ಪಾಯ್ಸನ್ ರಾಮ

ಪಾಯ್ಸನ್ ಎಂದರೆ ವಿಷ!

ಆತನ ಹೆಸರು ಕಡಬಗೆರೆ ರಾಮ.


ಐದಡಿ ಉದ್ದದ ಕಟ್ಟುಮಸ್ತಾದ ಚಿರತೆಯಂಥ ಮೊನಚು ಕಂಗಳ ಆಸಾಮಿ. ಏಕೆ, ಹೇಗೆ ಆ ಹೆಸರು ಬಂತೋ ಗೊತ್ತಿಲ್ಲ, ಕಡಬಗೆರೆಯ ಪಾಯ್ಸನ್ ರಾಮ ಎಂದರಷ್ಟೇ ಜನ ಆತನನ್ನು ಗುರುತಿಸುವಂತಾಗಿ ಹೋಯಿತು.

ಮಚ್ಚನ ಕೊಲೆಯಾಗುವ ತನಕ ಆದರಲ್ಲಿ ಈ ಪಾಯ್ಸನ್ ರಾಮ ಎಂಬಾತ ಇದ್ದಾನೆಂದೂ, ಆತನ ಪೂರ್ತಿ ಹೆಸರೇ ಕಡಬಗೆರೆಯ ಪಾಯ್ಸನ್ ರಾಮ ಎಂದೂ ಅನೇಕರಿಗೆ ಗೊತ್ತಿರಲಿಲ್ಲ, ಮಚ್ಚನ ಹತ್ಯೆಯಿಂದಾಗಿ ರಾತ್ರೋರಾತ್ರಿಗೆ ಕಡಬಗೆರೆ ಎಂಬ ಊರು ಮತ್ತು ಪಾಯ್ಸನ್ ರಾಮನ ಹೆಸರೂ ಪ್ರಖ್ಯಾತಿ ಬಂದುಬಿಟ್ಟವು.



ಸುಂಕದಕಟ್ಟೆ ದಾಟಿ ಮಾಗಡಿ ರಸ್ತೆಯಲ್ಲಿ ಅಂಜನಾನಗರ, ಬ್ಯಾಡರಹಳ್ಳಿ, ಚಿಕ್ಕಗೊಲ್ಲರಹಟ್ಟಿ ಮತ್ತು ಗೊಲ್ಲರಹಟ್ಟಿ ದಾಟುತ್ತಿದ್ದಂತೆ ಕಡಬಗೆರೆ ಕ್ರಾಸ್ ಸಿಗುತ್ತದೆ. ಅಲ್ಲಿ ಬಲಕ್ಕೆ ಹೊರಳಿ ಮಾಚೋಹಳ್ಳಿ ದಾಟುತ್ತಿದ್ದಂತೆ ಜನಪ್ರಿಯ ಅಪಾರ್ಟ್‌ಮೆಂಟ್‌ಗೆ ಹೋಗುವ ದಾರಿಯಲ್ಲಿ ಎಡಕ್ಕೆ ಹೊರಳಿದರೆ ಸಿಗುವುದೇ ಕಡಬಗೆರೆ. ಸುಮಾರು ಇನ್ನೂರು ಮನೆಗಳ ಊರದು. ಬೆಂಗಳೂರಿಗೆ ಕೂಗಳತೆಯಲ್ಲಿದ್ದರೂ ಇಲ್ಲಿನ ಗೌಡರ ಮಕ್ಕಳಿಗೆ ಮೈಮುರಿದು ದುಡಿಯುವ ಬುದ್ಧಿ ಬರಲಿಲ್ಲ, ಇಸವಿ 2000 ದ ಹೊತ್ತಿಗೆ ಇದ್ದಕ್ಕಿದ್ದಂತೆ ಈ ಸುತ್ತಮುತ್ತಲ ಹಳ್ಳಿಗಳ ರೈತರ ಭೂಮಿಯ ಬೆಲೆ ಗಗನಕ್ಕೇರಿತು. ಇಲ್ಲಿ ಪಂಚಾಯ್ತಿ ಮೆಂಬರ್ ಆಗುವುದೆಂದರೇನೇ ಅಳಿದುಳಿದ ಗೋಮಾಳ ಇತ್ಯಾದಿ ಸರ್ಕಾರಿ ಭೂಮಿಯನ್ನು ಮಾರಿಕೊಳ್ಳುವ ಬ್ರೋಕರ್ ಎನ್ನುವಷ್ಟಾಯಿತು.

ಈ ಹಂತದಲ್ಲಿ ಬಂದದ್ದೇ ಮಾಚೋಹಳ್ಳಿ ಪಂಚಾಯ್ತಿ ಎಲೆಕ್ಷನ್!



ಅಲ್ಲಿಯತನಕ ಕಡಬಗೆರೆ ರಾಮನೇ ಇಲ್ಲಿನ ಪಂಚಾಯ್ತಿ ಮೆಂಬರ್ ಆಗಿದ್ದ. ಆತನನ್ನು ಗೆಲ್ಲಿಸುವಲ್ಲಿ ಮಚ್ಚನ ಪಾಲೇ ದೊಡ್ಡದಿತ್ತು, ಹಾಗೇ ಕಾಮಾಕ್ಷಿಪಾಳ್ಯದ ಮಚ್ಚನನ್ನು ಕಡಬಗೆರೆಗೆ ಕರೆತಂದು ಆತನನ್ನು ರಾಮನಿಗೆ ಪರಿಚಯಿಸಿಕೊಟ್ಟವನು ಬೈಚಕುಪ್ಪೆಯ ಜಾನಿ. ಆತನ ಅಣ್ಣ ಗಿರೀಶ ಸುಖಕ್ಕೆ ಬಿದ್ದೇ ಕುಡಿತಕ್ಕೆ ದಾಸನಾದ. ಈ ಜಾನಿಯ ಅಕ್ಕನ ಗಂಡ ಕೇಕೆ ಉರ್ಫ್ ಕೃಷ್ಣಮೂರ್ತಿಯೇ ಪಾಯ್ಸನ್ ರಾಮನ ಒಡಹುಟ್ಟಿದ ಅಣ್ಣ, ರಾಮನ ಮತ್ತೊಬ್ಬ ಅಣ್ಣನ ಹೆಸರು ಡಾಬಾ ಸೀನ. ಮಾಗಡಿ ರಸ್ತೆಯಲ್ಲಿ ಗೊಲ್ಲರಹಟ್ಟಿ ಹೊರವಲಯದಲ್ಲಿರುವ ಜೇಕೆ ಡಾಬಾಕ್ಕೆ ಈತನೇ ಧಣಿ. ಕಡಬಗೆರೆಯ ಜಮೀನ್ದಾರ್ ಕಾಳಪ್ಪನ ಮಕ್ಕಳಾದ ಕೇಕೆ, ಡಾಬಾ ಸೀನ ಮತ್ತು ಪಾಯ್ಸನ್ ರಾಮ ಇತ್ಯಾದಿ ಐವರೂ ಅಣ್ಣತಮ್ಮಂದಿರಿಗೆ ದುಡ್ಡು ಕಾಸಿನಲ್ಲಾಗಲಿ, ಪ್ರಭಾವದಲ್ಲಾಗಲಿ ಯಾವುದೇ ಕೊರತೆಯಿರಲಿಲ್ಲ, ಇದ್ದದ್ದು ವಿವೇಕದಲ್ಲಿ ಮಾತ್ರ.

ಮಚ್ಚ ಆ ಹೊತ್ತಿಗಾಗಲೇ ಕಾಮಾಕ್ಷಿಪಾಳ್ಯವನ್ನು ತೊರೆದು ಭೂಗತನಾಗಿಬಿಟ್ಟಿದ್ದ. ಬೈಲುರವಿಯ ಕೊಲೆಯ ನಂತರ ಪೊಲೀಸರು ಯಾವ ಪರಿ ಆತನ ಬೆನ್ನುಹತ್ತಿದ್ದರೆಂದರೆ ಮಚ್ಚ ಊರನ್ನೇ ತೊರೆದು ತನ್ನ ಪತ್ನಿಯ ಊರಾದ ಬಂಗಾರಪೇಟೆಯನ್ನು ಸೇರಿಕೊಂಡಿದ್ದ. ಹಾಗಂತ ಜಾನಿ ಬಿಡಲಿಲ್ಲ, ಮಚ್ಚನನ್ನು ಕರೆತಂದಿದ್ದೇ ಆತನನ್ನು ರಾಮನ ಜೊತೆ ಮಾಡಿಕೊಟ್ಟ. ರಾಮನಿಗೂ ಮಚ್ಚನಂಥ ಪಂಟರ್‌ಗಳು ಅನಿವಾರ್ಯವಾಗಿತ್ತು. ಏಕೆಂದರೆ ರಾಮ ಪಂಚಾಯ್ತಿ ಮೆಂಬರ್. ಲ್ಯಾಂಡ್ ಡೀಲಿಗಿಳಿದಿದ್ದ. ಕಾಮಾಕ್ಷಿಪಾಳ್ಯದ ಕೌನ್ಸಿಲರ್ ಗೋಪಾಲಯ್ಯನ ವಿರುದ್ಧ ಪದೇಪದೇ ತೊಡೆತಟ್ಟುತ್ತಿದ್ದ. ಅಂಥವನಿಗೆ ಗೋಪಾಲಯ್ಯನ ಕಡುವೈರಿ ಮಚ್ಚ ಫೀಲ್ಡಿನ ಉಸಾಬರಿಯೇ ಬೇಡ ಎಂದು ಭೂಗತನಾಗಿದ್ದು ತನಗಾದ ಲುಕ್ಸಾನು ಎನಿಸಿದ್ದು ಸುಮ್ಮನೇನಲ್ಲಾ!

ಹೀಗೆ ಮಚ್ಚನನ್ನು ಮತ್ತೆ ಕರೆತಂದು ಫೀಲ್ಡಿಗೆ ಅಣಿಗೊಳಿಸಿದ ತಪ್ಪಿಗೆ ತಾನು ಇಂದಲ್ಲ ನಾಳೆ ನೀರು ಕುಡಿಯಲೇಬೇಕಾದೀತೆಂಬ ಸತ್ಯ ಆತನಿಗೆಲ್ಲಿ ಅರಿವಾಗಬೇಕು. ಕನಿಷ್ಠ ಗೋಪಾಲಯ್ಯನಿಗಾದ ಗತಿಯಿಂದಾದರೂ ಆತ ಪಾಠ ಕಲಿಯಬೇಕಿತ್ತು, ಬದಲಾಗಿ ಮಚ್ಚನಿಗೊಂದು ಕಾರು ಕೊಡಿಸಿದ. ಖರ್ಚಿಗೂ ವ್ಯವಸ್ಥೆ ಮಾಡಿದ. ತಾನು ಕೈಹಾಕಿದ ಪ್ರತಿ ಲ್ಯಾಂಡ್ ಡೀಲಿಗೂ ಮಚ್ಚನನ್ನು ಬಳಸಿಕೊಂಡ. ಬದಲಾಗಿ ಮಚ್ಚನೂ ಬೇಕಾಬಿಟ್ಟಿ ದುಡ್ಡು ನೋಡಿದ.


ಹಾಗಂತ ಬೈಚಕುಪ್ಪೆಯ ಜಾನಿಗಾದರೂ ಏನು ಕಮ್ಮಿಯಾಗಿತ್ತು? ಬೆಂಗಳೂರು ಕಂಡ ಅತ್ಯಂತ ಜನಪ್ರಿಯ ಪೊಲೀಸ್ ಅಧಿಕಾರಿಗಳಲ್ಲೊಬ್ಬರಾದ ಎಸಿಪಿ ಬೆಂಕಿ ಮುನಿಯಪ್ಪನವರಿಗೆ ಜಾನಿ ಹತ್ತಿರದ ಸಂಬಂಧಿ. ಗೊಲ್ಲರಹಟ್ಟಿಯ ಪೆರಿಫೆರಲ್ ರಸ್ತೆಯ ಬಳಿ ದೊಡ್ಡದೊಂದು ಬಿಲ್ಡಿಂಗ್ ಕಟ್ಟಿಸಿ ಅದಕ್ಕೆ ಅನಿಬೆಸೆಂಟ್ ಕಾನ್ವೆಂಟ್ ಎಂಬ ಹೆಸರಿಟ್ಟಿದ್ದ, ಸ್ಕೂಲ್ ಚೆನ್ನಾಗಿ ನಡೆಯುತ್ತಿತ್ತು, ದುಡ್ಡೂ ಬರುತ್ತಿತ್ತು, ಕಡಬಗೆರೆ ರಾಮನ ಅಣ್ಣ ಕೇಕೆಯೇ ಜಾನಿಯ ಅಕ್ಕನ ಗಂಡನಾದ್ದರಿಂದ ಕಡಬಗೆರೆಯ ಜಮೀನ್ದಾರ್ ಕಾಳಪ್ಪನವರ ಕುಟುಂಬದೊಂದಿಗೆ ಜಾನಿಗೆ ರಕ್ತಸಂಬಂಧವೇರ್ಪಟ್ಟಿತ್ತು.

ಆದರೆ 2003 ರ ಹೊತ್ತಿಗೆ ಈ ರಕ್ತ ಸಂಬಂಧಕ್ಕೇ ಹುಳಿ ಹಿಂಡಿದಂತಾಗಿತ್ತು, ಕಡಬಗೆರೆಯ ಪಾಯ್ಸನ್ ರಾಮನಿಗೂ ಬೈಚಕುಪ್ಪೆಯ ಜಾನಿಗೂ ಒಬ್ಬರನ್ನೊಬ್ಬರು ಕೊಂದುಬಿಡುವಂಥಾ ಜಿದ್ದಾಜಿದ್ದಿ ಶುರುವಾಗಿಬಿಟ್ಟಿತ್ತು. ಪರಸ್ಪರ ರಕ್ತಸಂಬಂಧಿಗಳಾಗಿದ್ದವರೇ ಎರಡು ಗುಂಪಾಗಿ ಒಬ್ಬರನ್ನೊಬ್ಬರು ಮುಗಿಸಲು ಕತ್ತಿ ಮಸೆಯುತ್ತಿದ್ದರು. ಅದಕ್ಕೆ ಕಾರಣನಾದವನೇ ಕಾಮಾಕ್ಷಿಪಾಳ್ಯದ ಮಚ್ಚ.

Of course ಇಂಥಾ ಜಿದ್ದಿಗೆ ಕಾರಣವಾಗಿದ್ದು ಮತ್ತದೇ ಲ್ಯಾಂಡ್ ಡೀಲು. ಪ್ರಾರಂಭದಲ್ಲಿ ಒಡಹುಟ್ಟಿದವರಂತಿದ್ದ ಕಡಬಗೆರೆ ರಾಮ ಮತ್ತು ಜಾನಿ ಎಂಥಾ ದೋಸ್ತಿಗಳೆಂದರೆ ಜಾನಿ ಯುವತಿಯೊಬ್ಬಳನ್ನು ಪ್ರೀತಿಸಿ ಕರೆದೊಯ್ದಾಗ ಅದನ್ನು ರಾಮನೇ ನಿಂತು ಬೆಂಬಲಿಸಿದ್ದ. ತನ್ನ ಮುಂದಾಳತ್ವದಲ್ಲೇ ಆಕೆಯೊಡನೆ ಜಾನಿಗೆ ಮದುವೆಯನ್ನೂ ಮಾಡಿಸಿದ್ದ. ಇಬ್ಬರನ್ನೂ ಮಚ್ಚನೇ ನಿಂತು ಪೊರೆಯುತ್ತಿದ್ದ.

ಈ ಮಧ್ಯೆಯೇ ಕುಖ್ಯಾತ ಲ್ಯಾಂಡ್ ಡೀಲರ್ ಭೈರೇಗೌಡ ಕಡಬಗೆರೆಗೆ ಕಾಲಿಟ್ಟ. ಭೈರೇಗೌಡ ಕಮ್ಮಿ ಕುಳವಲ್ಲ, ಮಾಗಡಿ ರಸ್ತೆ, ಸುಂಕದಕಟ್ಟೆ ಸುತ್ತಮುತ್ತ ಲ್ಯಾಂಡು ಹೊಡೆದೇ ಖ್ಯಾತ ಸಿನಿಮಾ ಡೈರೆಕ್ಟರ್ ಓಂಪ್ರಕಾಶ್ ನಿರ್ದೇಶನದಲ್ಲಿ ದರ್ಶನ್ ಮತ್ತು ರಕ್ಷಿತಾ ಹಾಕಿಕೊಂಡು 'ಅಯ್ಯ' ಎಂಬ ಚಿತ್ರ ನಿರ್ಮಿಸಿದ್ದ. ಅಯ್ಯ ಭರ್ಜರಿ ಯಶಸ್ಸು ಕಂಡಿತ್ತು. ಭೈರೇಗೌಡರಿಗೆ ಸಾಕಷ್ಟು ದುಡ್ಡೂ ಬಂದಿತ್ತು. ಹೇಗೂ ಮಚ್ಚನೇ ಆತನ ಸಕಲ ಲ್ಯಾಂಡ್ ಡೀಲುಗಳಿಗೆ ಬೆಂಗಾವಲಾಗಿದ್ದನಲ್ಲ; ಕಡಬಗೆರೆ ರಾಮನಾಗಲಿ, ಜಾನಿಯಾಗಲಿ ಮಚ್ಚನ ಮಾತು ತೆಗೆದು ಹಾಕೋಲ್ಲ ಎಂದೇ ಭಾವಿಸಿ ಅಪಾಯಕಾರಿ ಲ್ಯಾಂಡ್ ಡೀಲೊಂದಕ್ಕೆ ಕೈಯಿಟ್ಟ.

ಅದು ಕಡಬಗೆರೆಯ ಗೋಕಟ್ಟೆ. ಊರಿಗೆ ಹೊಂದಿಕೊಂಡಂತೆ ವಿಶಾಲ ಅರಳಿಮರವೊಂದರ ಸುತ್ತ ಕಟ್ಟಿದ್ದ ಕಟ್ಟೆ, ಊರಿನ ಜನರೆಲ್ಲ ಅಲ್ಲೇ ಕಲೆತು ಹರಟೆ ಕೊಚ್ಚುತ್ತಿದ್ದರು. ಅದಕ್ಕೆ ಹೊಂದಿಕೊಂಡಂತೆ ಐದಾರು ಎಕರೆ ಪಂಚಾಯ್ತಿಗೆ ಸೇರಿದ ಜಮೀನಿತ್ತು. ಎಷ್ಟೆಂದರೂ ಅದು ಜನರ ಆಸ್ತಿ. ಅದನ್ನು ಸೈಟು ಮಾಡಿ ಮಾರಿಬಿಟ್ಟರೆ ಕಮ್ಮಿಯೆಂದರೂ ಅದು ಆರು ಕೋಟಿಯ ಸೊತ್ತಾಗುತ್ತದೆ. ಹಾಗೆಂದೇ ಲೆಕ್ಕ ಹಾಕಿದ ಭೈರೇಗೌಡ ತನ್ನ ನಟೋರಿಯಸ್ ತಮ್ಮ ರಾಜಣ್ಣನನ್ನು ಛೂಬಿಟ್ಟು ಕಡಬಗೆರೆಯ ಗೋಕಟ್ಟೆಯನ್ನು ನುಂಗಿಹಾಕಲು ಸನ್ನದ್ಧನಾದ.



ಜಾನಿ

ಎಷ್ಟೇ ದೋಸ್ತಿಯಿದ್ದರೂ ಅದು ಊರಿನ ಗೋಕಟ್ಟೆಯ ಕಿಮ್ಮತ್ತಿದೆ ಸರಿಯಾಗುತ್ತಾ? ದೋಸ್ತಿಯಿಗೆ ನಿಜ; ಹಾಗಂತ ಆರುಕೋಟಿ ಬೆಲೆಬಾಳುವ ಊರಿನ ಗೋಕಟ್ಟೆ ಕಳಕೊಳ್ಳಬೇಕೆ?

ಇದು ರಾಮನ ಲೆಕ್ಕಾಚಾರ. ಭೈರೇಗೌಡನ ಪರ ವಹಿಸಿ ಮಚ್ಚ ಅದೆಷ್ಟೇ ವ್ಯವಹಾರ ಕುದುರಿಸಿದರೂ ರಾಮ ಜಗ್ಗದೇ ಹೋದ. ತಾನಿದ್ದೂ ಊರಕಟ್ಟೆ ಹರಾಜಾದರೆ ಮುಂದೊಮ್ಮೆ ಊರಿನ ಜನ ತನಗೆ ನಯಾಪೈಸೆಯ ಬೆಲೆ ಕೊಡಲಿಕ್ಕಿಲ್ಲ ಎಂಬುದು ರಾಮನ ಲೆಕ್ಕಾಚಾರ. ಭೈರೇಗೌಡನ ಹುನ್ನಾರಕ್ಕೆ ರಾಮ ತಿರುಗಿಬಿದ್ದ. ಅದನ್ನು ಮಚ್ಚ ಸಹಿಸದೇ ಹೋದ. ಹಾಗಂಥ ಅದನ್ನು ತಕ್ಷಣಕ್ಕೆ ತೋರ್ಪಡಿಸಿಕೊಳ್ಳಲಿಲ್ಲ, ಹೇಗೂ ಪಂಚಾಯ್ತಿ ಚುನಾವಣೆ ಬಂತಲ್ಲ, ತಮ್ಮವರನ್ನೇ ಒಬ್ಬರನ್ನು ನಿಲ್ಲಿಸಿ ಗೆಲ್ಲಿಸಿಬಿಟ್ಟರಾಯ್ತು.

ಹಾಗೆಂದೇ ಲೆಕ್ಕ ಹಾಕಿದ ಮಚ್ಚ ರಾಮನ ವಿರುದ್ಧ ಆತನ ಒಡಹುಟ್ಟಿದ ಅಣ್ಣ ಕೇಕೆ ಉರ್ಫ್ ಕೃಷ್ಣಮೂರ್ತಿಯನ್ನು ಪಂಚಾಯ್ತಿ ಚುನಾವಣೆಗೆ ರೆಡಿ ಮಾಡಿದ. ಆತನಕ ಜೆಡಿಎಸ್‌ನಲ್ಲಿದ್ದ ಜಾನಿ ತನ್ನ ಅಕ್ಕನ ಗಂಡ ಕೃಷ್ಣಮೂರ್ತಿಯನ್ನು ಮಾಚೋಹಳ್ಳಿ ಪಂಚಾಯ್ತಿ ಚುನಾವಣೆಗೆ ನಿಲ್ಲಿಸಲು ಎಲ್ಲಾ ತಯಾರಿ ನಡೆಸುತ್ತಿದ್ದಂತೆ, ತನ್ನ ತಮ್ಮನ ವಿರುದ್ಧವೇ ಸೆಣಸಲು ಕೇಕೆ ಅಣಿಯಾಗಿಬಿಟ್ಟ. ಎಷ್ಟೆಂದರೂ ಕಡಬಗೆರೆಯ ಗೋಕಟ್ಟೆಯ ಭೂಮಿ ಆರು ಕೋಟಿ ಬೆಲೆ ಬಾಳುತ್ತದೆ. ಅದರ ಮುಂದೆ ರಕ್ತ ಸಂಬಂಧ ಯಾವ ಲೆಕ್ಕ?

ಮಾಚೋಹಳ್ಳಿ ಪಂಚಾಯ್ತಿ ಚುನಾವಣೆ ಯಾಪಾಟಿ ರಂಪವಾಯಿತೆಂದರೆ; ಜೆಡಿಎಸ್ ಬೆಂಬಲ ಪಡೆದು ರಾಮ ಚುನಾವಣೆಗೆ ನಿಂತರೆ, ಆತನ ವಿರುದ್ಧ ಆತನ ಒಡಹುಟ್ಟಿದ ಅಣ್ಣ ಕೇಕೆಯೇ ಕಣಕ್ಕಿಳಿದ. ಮಚ್ಚನ ಬೆಂಬಲ, ಲ್ಯಾಂಡ್‌ಗ್ರ್ಯಾಬರ್ ಭೈರೇಗೌಡನ ದುಡ್ಡು ಹೀಗೆ ಎಲ್ಲಾ ಬೆಂಬಲವಿದ್ದ ಅಣ್ಣ ಕೇಕೆ ಸಹಜವಾಗೇ ಚುನಾವಣೆಯಲ್ಲಿ ಗೆದ್ದುಬಿಟ್ಟ. ಹಾಗಂತ ಪಾಯ್ಸನ್ ರಾಮ ಕೈಕಟ್ಟಿ ಕೂರಲಿಲ್ಲ, ಯಾವತ್ತು ತಾನೇ ಕರೆತಂದು ಸಲುಹಿದ್ದ ಮಚ್ಚನೇ ತನ್ನ ವಿರುದ್ಧ ನಿಂತನೋ, ಒಡಹುಟ್ಟಿದ ಅಣ್ಣನೇ ತಿರುಗಿಬಿದ್ದನೋ ನೇರವಾಗಿ ಕಾಮಾಕ್ಷಿಪಾಳ್ಯಕ್ಕೆ ಬಂದವನೇ ಗೋಪಾಲಯ್ಯನ ತಮ್ಮ ಧರಣಿಯ ಕಾಲಿಗೆ ಬಿದ್ದ. ಎಷ್ಟೆಂದರೂ ಶತ್ರುವಿನ ಶತ್ರು ಮಿತ್ರ ತಾನೆ? ಆತನಕ ಯಾವ ಗೋಪಾಲಯ್ಯನ ವಿರುದ್ಧ ಮಚ್ಚನನ್ನು ಬೆನ್ನಿಗಿಟ್ಟುಕೊಂಡು ಜಿದ್ದು ಸಾಧಿಸುತ್ತಿದ್ದನೋ, ಈಗ ಗೋಪಾಲಯ್ಯನ ಬೆಂಬಲವೇ ಆತನಿಗೆ ಅನಿವಾರ್ಯವಾಗಿ ಹೋಯಿತು.

ಕಾಮಾಕ್ಷಿಪಾಳ್ಯದ ಬಸವನಿಗೂ ಅದೇ ಬೇಕಿತ್ತು, ಯಾರು ಭೂಗತನಾಗಿದ್ದ ಮಚ್ಚನನ್ನು ಮತ್ತೆ ಬೆಂಗಳೂರಿಗೆ ಕರೆತಂದಿದ್ದನೋ ಆತನೇ ಮಚ್ಚನ ವಿರುದ್ಧ ತಿರುಗಿಬಿದ್ದಿರುವಾಗ ಇದಕ್ಕಿಂತ ಇನ್ನೇನು ಬೇಕು?

ಮಾಚೋಹಳ್ಳಿ ಪಂಚಾಯ್ತಿ ಚುನಾವಣೆ ಎಂಥಾ ಏಕೋಪಕ್ಕೀಡಾಯಿತೆಂದರೆ ಕಡಬಗೆರೆ ರಾಮ ಒಂದೆಡೆ ಸುಂಕದಕಟ್ಟೆಯ ರಾಮಲಕ್ಷ್ಮಣರನ್ನು ಗುಡ್ಡೆ ಹಾಕಿಕೊಂಡ. ಮತ್ತೊಂದೆಡೆ ಮಚ್ಚನ ಕಡುವೈರಿ ತಿಮ್ಮೇನಹಳ್ಳಿ ಸೂರಿಯ ಶಿಷ್ಯರನ್ನು ಕರೆಸಿಕೊಂಡ. ಇನ್ನೊಂದೆಡೆ ಯಶವಂತಪುರದ ವೆಂಕಿಯ ಗ್ಯಾಂಗ್ ಬಂದಿಳಿಯಿತು. ಅರ್ಧ ಬೆಂಗಳೂರಿನ ಪುಡಿ ರೌಡಿಗಳೆಲ್ಲ ಮಾಚೋಹಳ್ಳಿ ಪಂಚಾಯ್ತಿ ಚುನಾವಣೆಗೆ ಕೈಹಾಕಿದ್ದರು. ಬೆಂಗಳೂರು ನಗರದ ಯಾವುದೇ ಕಾರ್ಪೊರೇಷನ್ ಚುನಾವಣೆಯನ್ನು ಮೀರಿಸುವಂತಿತ್ತು ಆ ಚುನಾವಣೆ.

ಅದಕ್ಕೆ ಪ್ರತಿಯಾಗಿ ಮಚ್ಚ ತನ್ನ ಅಪ್ಪೂ ಸೈನ್ಯವನ್ನು ಕರೆಸಿದ್ದೇ ಕಡಬಗೆರೆಯಲ್ಲಿಟ್ಟಿದ್ದ. ಪೆದ್ದಗುಂಡ, ಕೋತಿರಾಮ, ಕಲಗಚ್ಚು ಸೀನ, ಹಂಡೆ ಕುಮಾರ, ಕೋಳಿ ಶಿವಾ- ಹೀಗೆ ಹಿಂಡುಗಟ್ಟಲೇ ಮಚ್ಚನ ಶಿಷ್ಯರು ಕೇಕೆ ಬೆನ್ನಿಗೆ ನಿಂತರು. ಎರಡೂ ತಂಡಗಳ ಮಧ್ಯೆ ಪದೇಪದೇ ಹೊಡೆದಾಟಗಳಾದವು. ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಎರಡೂ ತಂಡಗಳ ವಿರುದ್ಧ ದೂರು ಪ್ರತಿದೂರು ದಾಖಲಾದವು. ಜನ ಥರಗುಟ್ಟಿ ಹೋದರು. ಒಡಹುಟ್ಟಿದ ಅಣ್ಣ ತಮ್ಮಂದಿರೇ ಒಬ್ಬರನ್ನೊಬ್ಬರು ಮುಗಿಸಲು ನಿಂತಿರುವಾಗ ಅಲ್ಲಿ ವಿವೇಕವೆಂಬುದು ಎಲ್ಲುಳಿದೀತು?

ಅಲ್ಲಿದ್ದದ್ದು ಭೂಮಾಫಿಯಾದ ಆಜ್ಞೆ ಮಾತ್ರ. ಕಡಬಗೆರೆಯ ಸುತ್ತಮುತ್ತಲ ಹಳ್ಳಿಗಳ ಭವಿಷ್ಯ, ಅಲ್ಲಿನ ಚುನಾವಣೆ, ಆ ಊರುಗಳ ಪರಿಸರ, ಅಲ್ಲಿನ ಮಕ್ಕಳ ಸ್ವಭಾವ ಎಲ್ಲವನ್ನೂ ಭೂ ಮಾಫಿಯಾಗಳೇ ನಿಯಂತ್ರಿಸುತ್ತಿರುವಾಗ ಅಲ್ಲಿ ಮನುಷ್ಯತ್ವ ಹೇಗೆ ಸಾಧ್ಯ?

(ಮುಂದುವರೆಯುತ್ತದೆ)



ಮಲೆ ಮಹದೇಶ್ವರನಿಗೆ ಭ್ರಷ್ಟರ ಕಾಟ!

ಕೊಳ್ಳೆಗಾಲ ತಾಲ್ಲೂಕು ಮಹದೇಶ್ವರ ಬೆಟ್ಟದಲ್ಲಿರುವ ಮಲೆ ಮಹದೇಶ್ವರ ಸ್ವಾಮಿ ದೇವಾಲಯ ಈಗ ಹಲವು ರಾಜ್ಯಗಳ ಭಕ್ತ ಸಮೂಹದ ಭಕ್ತಿ ಕೇಂದ್ರವಾಗಿಯಷ್ಟೇ ಉಳಿದಿಲ್ಲ, ಇಲ್ಲಿನ ಆಡಳಿತ ಮಂಡಳಿಯ ಜನರಿಗೆ ಬೇಕಾದಷ್ಟು ಹಣ ತಿಂದು ಮೈಕೈ ದಪ್ಪ ಮಾಡಿಕೊಳ್ಳುವ ತಾಣವಾಗಿಯೂ ಹೆಸರು ಮಾಡುತ್ತಿದೆ.

ವರ್ಷಕ್ಕೆ ಕನಿಷ್ಠ 10 ರಿಂದ 12 ಕೋಟಿ ಆದಾಯ ಈ ಭಕ್ತ ಸಮುದಾಯದಿಂದ ಮಹದೇಶ್ವರನ ಹುಂಡಿ ಸೇರುತ್ತದೆ. ಅಂದರೆ ತಿಂಗಳಿಗೆ ಸರಾಸರಿ ಓಂದು ಕೋಟಿ. ಹಾಗಾಗಿಯೇ ಇಲ್ಲಿನ ಆಡಳಿತ ಮಂಡಳಿಗೆ ವರ್ಷದ ಎಲ್ಲಾ ಸೀಜನ್ನುಗಳಲ್ಲಿಯೂ ಭರ್ಜರಿ ಬಿಜಿನೆಸ್ಸು.

ಆದರೆ ಬಂದ ಈ ಹಣವೆಲ್ಲ ಎಲ್ಲಿ ಹೋಗುತ್ತದೆ ಎಂದೇ ತಿಳಿಯುವುದಿಲ್ಲ. ಹಾಗಂತ ಏನಾದರೂ ನೀವು ಆಡಳಿತ ಮಂಡಳಿಯವರನ್ನು ಕೇಳಿ. ತಕ್ಷಣ ಅಚ್ಚುಕಟ್ಟಾದ ಲೆಕ್ಕಪತ್ರಗಳನ್ನು ನಿಮ್ಮ ಮುಂದಿಡುತ್ತಾರೆ: ದೇವಸ್ಥಾನದ 300 ನೌಕರರ ಸಂಬಳಕ್ಕಾಗಿ 2 ಕೋಟಿ, ಕಟ್ಟಡಗಳ ಮತ್ತು ಬೀದಿ ದೀಪಗಳ ವಿದ್ಯುತ್ ಬಳಕೆಯ ಖರ್ಚಿಗಾಗಿ 50 ಲಕ್ಷ, ನಿತ್ಯಪೂಜೆಗಾಗಿ ವರ್ಷಕ್ಕೆ 25 ಲಕ್ಷ, ನಿತ್ಯ ದಾಸೋಹಕ್ಕಾಗಿ 75 ಲಕ್ಷ, ಲಾಡು ಪ್ರಸಾದ ತಯಾರಿಕೆ ಗಾಗಿ 50 ಲಕ್ಷ, ಸೇವೆ-ಉತ್ಸವಗಳಲ್ಲಿ ಪ್ರಸಾದ ತಯಾರಿಸಲು, ವಿತರಿಸಲು 25 ಲಕ್ಷ, ಜಾತ್ರೆ ನೈರ್ಮಲೀಕರಣ ನಿರ್ವಹಣೆಗೆ 4 ಲಕ್ಷ- ಹೀಗೆ ಪುಸ್ತಕಗಳಲ್ಲಿ ಬರೆದಿಟ್ಟಿರುವ ಲೆಕ್ಕಗಳನ್ನು ನಿಮಗೆ ತೋರಿಸುತ್ತಾರೆ. ವಾಸ್ತವದಲ್ಲಿ ನುಂಗಿ ನೀರು ಕುಡಿದದ್ದು ಮಾತ್ರ ಬೆಳಕಿಗೆ ಬರುವುದೇ ಇಲ್ಲ. ಅಲ್ಲಿಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ಬೆಂಗಳೂರಿನ ಜನತಾ ಬಜಾರ್‌ನಿಂದಲೇ ಕಡಿಮೆ ಬೆಲೆಗೆ ತರಿಸುವ ಇವರು ಲೆಕ್ಕಪುಸ್ತಕದಲ್ಲಿ ಮಾತ್ರ ದುಪ್ಪಟ್ಟು ಖರ್ಚು ತೋರಿಸುತ್ತಾರೆ.



ಪರಿಮಳಾ ನಾಗಪ್ಪ

ಮಲೆ ಮಹದೇಶ್ವರ ದೇವ ಸ್ಥಾನಕ್ಕೆ ಮಹಾಶಿವರಾತ್ರಿ, ಯುಗಾದಿ, ಮಹಾಲಯ ಅಮಾವಾಸ್ಯೆ, ದಸರಾ, ದೀಪಾವಳಿ ಮತ್ತು ಕಾರ್ತಿಕ ಸೋಮವಾರಗಳಂದು ಹೆಚ್ಚು ಭಕ್ತಾದಿಗಳು ಆಗಮಿಸುತ್ತಾರೆ. ಹೀಗೆ ಬಂದವರೆಲ್ಲ ದೇವಸ್ಥಾನದ ಪಕ್ಕದಲ್ಲಿರುವ 'ಅಂತರ ಗಂಗೆ'ಯಲ್ಲಿ ಸ್ನಾನ ಮಾಡುವುದು ಸಂಪ್ರದಾಯ. ಆದರೆ ಆ 'ಅಂತರ ಗಂಗೆ' ಎಷ್ಟೊಂದು ಗಬ್ಬೆದ್ದು ಹೋಗಿದೆ ಎಂದರೆ ಅಲ್ಲಿ ಸ್ನಾನ ಮಾಡಿದ ಭಕ್ತರಿಗೆ ಪಾಪ ಹೊರಟುಹೋಗುತ್ತೋ ಇಲ್ಲವೋ ಗೊತ್ತಿಲ್ಲ, ಆದರೆ ಕಜ್ಜಿಯಂತೂ ಗ್ಯಾರಂಟಿ ಅಂಟುತ್ತದೆ. ಕೇವಲ ಮೇಯುವುದರಲ್ಲಿಯೇ ತಲ್ಲೀನರಾಗಿರುವ ಆಡಳಿತ ಮಂಡಳಿಯ ಜನರಿಗೆ ಇದನ್ನು ಶುಚಿಗೊಳಿಸುವುದಕ್ಕೆ ಪಾಪ ಟೈಮು ಎಲ್ಲಿದೆ?

ಇಲ್ಲಿಗೆ ಬರುವ ಲಕ್ಷಾಂತರ ಭಕ್ತಾದಿಗಳಿಗೆ ಇರುವುದು ಕೇವಲ ಮೂರು ಶೌಚಾಲಯಗಳು! ಇವುಗಳ ಹತ್ತಿರ ಕೂಡ ಹೋಗದಷ್ಟು ಅವು ಗಬ್ಬು ನಾರುತ್ತಿವೆ. ಆಡಳಿತ ಮಂಡಳಿಯಂತೂ "ಜನರೆಲ್ಲಾ ಹೊರಗಡೆಯೇ ಹೋಗ್ತಾರೆ, ಹಾಗಾಗಿ ಶೌಚಾಲಯಗಳ ಅಗತ್ಯವಿಲ್ಲ" ಅಂತ ಹೇಳ್ತಾರೆ. ಶೌಚಾಲಯಗಳೇ ಇಲ್ಲದಿರುವಾಗ, ಇದ್ದ ಶೌಚಾಲಯಗಳೂ ಗಬ್ಬು ನಾರುತ್ತಿರುವಾಗ, ಭಕ್ತರು ಮತ್ತೆ ಇನ್ನೇನು ಮಾಡುತ್ತಾರೆ ಎಂಬ ಸಣ್ಣ ಅರಿವೂ ಅವರಿಗಿಲ್ಲದಿರುವುದು ದುರಂತ.

ಇನ್ನು ಹರಕೆ ಹೊತ್ತು ತಲೆ ಬೋಳಿಸಲು ಬರುವ ಜನರ ಗೋಳು ಇನ್ನೊಂದು ರೀತಿ. ಮೊದಲು 15 ರೂಪಾಯಿ ಕೊಟ್ಟು ಟಿಕೆಟ್ ಖರೀದಿಸಬೇಕು. ಇದು ಅಧಿಕೃತ. ತಾವೇ ಒಂದು ಹೊಸ ಬ್ಲೇಡು ತೆಗೆದುಕೊಂಡು ಒಳಗೆ ಹೋಗಿ ಮತ್ತೆ 20 ರೂ. ನಗದು ಕೊಡಬೇಕು. ಇದು ಅನಧಿಕೃತ. ಹೇಗಿದೆ ಬ್ಲೇಡು ತೆಗೆದುಕೊಂಡು ಹೋಗಿ ಕೆರೆಸಿಕೊಳ್ಳುವುದು?

ಬಂದ ಭಕ್ತರಿಗೆ ಉಳಿಯಲು ಅನುಕೂಲವಾಗಲಿ ಅಂತ ಅನೇಕ ಜನರು ದಾನ ಮಾಡಿ, ವಂತಿಗೆ ನೀಡಿ 152 ರೂಂಗಳನ್ನು ಕಟ್ಟಿಸಿದ್ದಾರೆ. ಇವು ಯಾವುದಕ್ಕೂ ಸಾಕಾಗುವುದಿಲ್ಲವಾದರೂ ಇದ್ದ ಈ ರೂಮುಗಳನ್ನು ಉಚಿತವಾಗಿ ಜನರಿಗೆ ಅಗತ್ಯಕ್ಕೆ ತಕ್ಕಂತೆ ನೀಡಬೇಕು. ಆದರೆ ಒಂದೊಂದು ರೂಮಿಗೆ 100-200 ರೂಪಾಯಿಗಳನ್ನು ಭಕ್ತರಿಂದ ಕಸಿಯುತ್ತಾರೆ. ಭಕ್ತರೇ ಕಟ್ಟಿಸಿಕೊಟ್ಟ ರೂಮುಗಳು ಆಡಳಿತ ಮಂಡಳಿಗೆ ವರಮಾನ ತರುವ ಬಿಜಿನೆಸ್ ಆಗಿ ಪರಿವರ್ತನೆಗೊಂಡಿವೆ. ಏನಾದರೂ ಪ್ರಶ್ನಿಸಿದರೆ ರೂಮೇ ಇಲ್ಲ ಎಂದು ಸತಾಯಿಸಿಬಿಡುತ್ತಾರೆ. ಇನ್ನು ವಿಚಿತ್ರವೆಂದರೆ ರೂಮು ಬೇಕಾದರೆ ಎಂಎಲ್‌ಎ, ಎಂಪಿಗಳಿಂದ ಶಿಫಾರಸ್ಸು ಪತ್ರ ತನ್ನಿ ಅಂತಾರೆ. ಒಂದು ರಾತ್ರಿ ಉಳಿಯಲು ರೂಮು ಸಿಗುವುದಕ್ಕೂ ಎಂಪಿ, ಎಂಎಲ್‌ಎಗಳ ತನಕ ಹೋಗಬೇಕಾದ ಸ್ಥಿತಿ ಬಂದೊದಗಿತಲ್ಲ ಮಹದೇಶ್ವರ ಬೆಟ್ಟದಲ್ಲಿ!

ಅನುಭವವಿಲ್ಲದೇ, ಅನುಭವಿಗಳನ್ನು ದೂರ ಇರಿಸಿ ಕೇವಲ ಅನುಕಂಪದಿಂದಾಗಿ ಚುನಾವಣೆಯಲ್ಲಿ ಗೆದ್ದ ಶಾಸಕಿ ಪರಿಮಳಾ ನಾಗಪ್ಪ ಮಾತ್ರ ಇದನ್ನೆಲ್ಲಾ ಕಂಡೂ ಕಾಣದಂತೆ ಇದ್ದಾರೆ. ಏಕೆಂದರೆ ದೇವಸ್ಥಾನದ ಧರ್ಮದರ್ಶಿಗಳಲ್ಲಿ ಬಹುತೇಕರು ಇವರ ಚೇಲಾಗಳೇ. ಅವರಿಗೆ ಇವರು-ಇವರಿಗೆ ಅವರು ಪರಸ್ಪರ ಸಹಕಾರದಿಂದ ನಡೆದುಕೊಳ್ಳುತ್ತಿದ್ದಾರೆ!

ಕಮಲಮ್ಮನ ಸಾರಥ್ಯದಲ್ಲಿ ಅಧೋಗತಿಗಿಳಿದ ಮಹದೇಶ್ವರ ಬೆಟ್ಟ



ಕಮಲಮ್ಮ

ಈ ಕಮಲಮ್ಮ ಚಾಮರಾಜನಗರ ಜಿಲ್ಲೆಯ ಕಾರ್ಯನಿರ್ವಾಹಕ ಅಧಿಕಾರಿ (EO) ಆಗಿದ್ದಳು. ಇವಳ ವ್ಯಾಪ್ತಿಯಲ್ಲೇ ಮಹದೇಶ್ವರ ಬೆಟ್ಟ ಬರುತ್ತದೆ. ಇವಳು ಅಧಿಕಾರದಲ್ಲಿದ್ದಷ್ಟು ದಿನ ಅದೆಷ್ಟು ತಿಂದು ತೇಗಿದಳೋ ಗೊತ್ತಿಲ್ಲ. ಅಂತೂ ಮಹದೇಶ್ವರ ಬೆಟ್ಟವನ್ನು ಒಂದು ಹಂತಕ್ಕೆ ತಂದು ನಿಲ್ಲಿಸಿಬಿಟ್ಟಳು. ಇವತ್ತು ಮಲೆಮಹದೇಶ್ವರ ಬೆಟ್ಟ ಇಷ್ಟೊಂದು ದುರವಸ್ಥೆಗೆ ಬಂದು ನಿಂತಿದೆ ಎಂದರ ಅದಕ್ಕೆ ಇವಳು ಕೊಟ್ಟ ಕಾಣಿಕೆ ಬಹಳ.

ಕಳೆದ ವರ್ಷದ ಯುಗಾದಿ ಸಮಯದಲ್ಲಿ ಈ ಕಮಲಮ್ಮ ತಮಿಳುನಾಡಿಗೆ ಹೋಗಿ ಅಲ್ಲಿನ ಕೋ-ಆಪರೇಟಿವ್ ಸೊಸೈಟಿಯಿಂದ 1,34,000 ರೂಪಾಯಿಗಳ ಹಾಸಿಗೆ ಹೊದಿಕೆ ಖರೀದಿಸಿ ತಂದಳು. ಅಲ್ಲಿ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಖರೀದಿಸಿ ಇಲ್ಲಿ ಲೆಕ್ಕದಲ್ಲಿ ಮಾತ್ರ ಅದನ್ನು ತೋರಿಸದೇ ಅರ್ಧ ಹಣವನ್ನು ಗುಳುಂ ಮಾಡಿದಳು. ಅಷ್ಟೇ ಅಲ್ಲ, ಅಲ್ಲಿಂದ 2 ಲಕ್ಷ ರೂಪಾಯಿಗಳ ಖಾಲಿ ಬಿಲ್ಲು ತಂದು ಇಲ್ಲಿ ಲೆಕ್ಕದ ಬುಕ್ಕಿನಲ್ಲಿಟ್ಟಳು.

ದೇವಸ್ಥಾನದಿಂದ 2 ಲಕ್ಷ ರೂಪಾಯಿ ನೇರವಾಗಿ ಕಮಲಮ್ಮನ ಕಪಾಟು ಸೇರಿತೆ ವಿನಃ ಅದಕ್ಕೆ ಯಾವ ವಸ್ತುಗಳೂ ಬರಲಿಲ್ಲ.

ತಿನ್ನುವ ಕಾರ್ಯದಲ್ಲಿ ಅವಳೊಂದಿಗೆ ಅವಳ ಕಾರ್ ಡ್ರೈವರ್ ರಂಗಸ್ವಾಮಿ ಮತ್ತು ಎಲೆಕ್ಟ್ರಿಶಿಯನ್ ಮಲ್ಲೇಶ್ ಕೂಡ ಒಂದಿಷ್ಟು ಭಾಗಿಯಾಗಿದ್ದರೂ ಸಿಂಹಪಾಲೆಲ್ಲಾ ಕಮಲಮ್ಮನಿಗೇ ಹೋಯಿತು.

ಈ ಕಮಲಮ್ಮ ಹೀಗೆ ತನ್ನ ನುಂಗುವ ಕೆಲಸದಲ್ಲಿ ಯಾವ ಧರ್ಮದರ್ಶಿಗಳನ್ನೂ ಜೊತೆ ಸೇರಿಸಲಿಲ್ಲ, ಒಬ್ಬಳೇ ಕೂತು ತಿಂದಳು. ಹೀಗಾಗಿ ಕುಪಿತರಾದ ಧರ್ಮದರ್ಶಿಗಳು ಅವಳನ್ನು ಸಸ್ಪೆಂಡ್ ಮಾಡುವಂತೆ ಹಠ ಹಿಡಿದರು. ಶಾಸಕಿ ಪರಿಮಳಾ ನಾಗಪ್ಪನಿಗೂ ಇವಳ ಮೇಲೆ ಕೋಪ ಇತ್ತು. ಹೀಗಾಗಿ ಕಮಲಮ್ಮ ಸಸ್ಪೆಂಡಾಗಿ ಮನೆ ಸೇರಿದಳು. ಆದರೆ ಹುಲುಸಾದ ಬೆಳೆಯನ್ನು ಮೇಯ್ದು ಗುಂಡಗಾಗಿದ್ದ ಕಮಲಮ್ಮನಿಗೆ ರುಚಿ ಹತ್ತಿತ್ತು. ಮತ್ತೆ ವಾಪಸ್ಸು ಬರುವುದಕ್ಕೆ ಪ್ರಯತ್ನ ಮಾಡಿ ವಿಫಲವಾದಳು. ಕೊನೆಗೆ ಕೋರ್ಟಿನ ಮೆಟ್ಟಿಲು ಹತ್ತಿ ತನ್ನ ಸಸ್ಪೆಂಡ್ ಆದೇಶವನ್ನು ರದ್ದು ಮಾಡಿಸಿಯೇ ಬಿಟ್ಟಳು. ತನ್ನ ಮೇಯುವ ಕಾರ್ಯದಲ್ಲಿ ಮತ್ತಷ್ಟು ತಲ್ಲೀನಳಾಗಿ ಮೈಕೈ ಹೊಲಸು ಮಾಡಿಕೊಂಡು ಮತ್ತೊಮ್ಮೆ ಸಸ್ಪೆಂಡ್ ಆಗಿ ಮನೆಯಲ್ಲಿ ಈಗ ಕುಳಿತಿದ್ದಾಳೆ.

ಇವಳ ನಿರ್ಗಮನದಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಮುಕ್ತಿ ಸಿಗುತ್ತೆ ಅಂದುಕೊಂಡಿದ್ದ ಜನರಿಗೆ ಮಾತ್ರ ನಿರಾಶೆ ಕಾದಿತ್ತು. ಚಾಮರಾಜನಗರ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕ ಅಧಿಕಾರಿ ಬಿ. ರಾಮು ಅವರನ್ನು ದೇವಸ್ಥಾನದ ಕಾರ್ಯನಿರ್ವಾಹಕರನ್ನಾಗಿ ನೇಮಿಸಲಾಯಿತು. ಕಮಲಮ್ಮನ ಎಲ್ಲಾ ಹಲ್ಕಟ್ ದಂಧೆಗಳನ್ನು ಚಾಚೂತಪ್ಪದೇ ಮುಂದುವರೆಸಿಕೊಂಡು ಹೋಗುತ್ತಿರುವ ಕೀರ್ತಿ ಇವರಿಗೆ ಸಲ್ಲಬೇಕು. ಇಲ್ಲಿನ ಅಧೀಕ್ಷಕ ಸದಾಶಿವಪ್ಪ, ಪೆಟ್ರೋಲ್ ಬಂಕ್ ವ್ಯವಸ್ಥಾಪಕ ಚಂದ್ರು, ಬಸ್ ನಿರ್ವಹಣೆಯ ವ್ಯವಸ್ಥಾಪಕ ಮಾದರಾಜು, ದಾಸೋಹದ ಮ್ಯಾನೇಜರ್ ಗುರುಮಲ್ಲಪ್ಪ ಮತ್ತು ಚಂದ್ರಶೇಖರ್, ವಸತಿ ಗೃಹಗಳ ಬುಕ್ಕಿಂಗ್ ಗುರು ಚಿಕ್ಕ ಮಲೆಯಪ್ಪ, ದೇವಸ್ಥಾನದ ಮ್ಯಾನೇಜರ್ ಚನ್ನಬಸಪ್ಪ- ಹೀಗೆ ದೊಡ್ಡದೊಂದು ಹೆಗ್ಗಣಗಳ ದಂಡಿಗೆ ಸಾರಥ್ಯ ವಹಿಸಿ ಬಿ. ರಾಮು ಸದ್ದುಗದ್ದಲವಿಲ್ಲದೆ ಮೇಯುತ್ತಿದ್ದಾನೆ.

ಇವರ ಎಲ್ಲ ಹಗರಣಗಳು ಬಯಲಿಗೆ ಬಂದರೆ ದೂರ ದೂರದ ಊರುಗಳಿಂದ ಬರುವ ಭಕ್ತಾದಿಗಳು ಒಂದು ಜೊತೆ ಹಳೇ ಎಕ್ಕಡಗಳನ್ನು ತಮ್ಮ ಜೊತೆ ತರುವುದಂತೂ ಗ್ಯಾರಂಟಿ, ಈ ಎಲ್ಲ ಹೆಗ್ಗಣಗಳ ದೇಹ ಶುದ್ಧಿ ಮಾಡುವುದಕ್ಕೆ!


-ಕೊಳ್ಳೇಗಾಲ ಮಾಳಿಗೆ

ಮಾದೇಶ್ವರ ಬೆಟ್ಟದಲ್ಲೊಬ್ಬ ಖದೀಮ ITC ನಾಗ

ವೀರಪ್ಪನ್ ಮತ್ತು ಅವನ ಬೇಟೆಗೆ ಬಂದ STF ನ ದೌರ್ಜನ್ಯದಿಂದಾಗಿ ನುಜ್ಜುಗುಜ್ಜಾಗಿದ್ದ ಮಹದೇಶ್ವರ ಬೆಟ್ಟ, ವೀರಪ್ಪನ್ ಕೊಲೆಯ ನಂತರ ಒಂದಿಷ್ಟು ನಿರುಮ್ಮಳವಾಗಿ ನಿಟ್ಟುಸಿರು ಬಿಡಬಹುದು ಎಂದುಕೊಂಡಿದ್ದರು ಅಲ್ಲಿನ ಜನ ಆದರೆ ಅದೆಲ್ಲ ಸುಳ್ಳಾಗಿ ಹೋಯಿತು. ವೀರಪ್ಪನ್ ಮತ್ತು STF ನ ಜಾಗದಲ್ಲೀಗ ITC ನಾಗ ಎಂಬ ಪುಡಿ ಗೂಂಡಾ ವಕ್ಕರಿಸಿಕೊಂಡು ಅಲ್ಲಿನ ಜನರ ಜೀವ ಹಿಂಡತೊಡಗಿದ್ದಾನೆ.

ಕೊಳ್ಳೇಗಾಲ ತಾಲ್ಲೂಕಿನ ಕಜ್ಜಿಗುಂಡಿ ಗ್ರಾಮದವನಾದ ನಾಗ ಬೆಟ್ಟದ ಪಕ್ಕದ ಪಿ.ಜಿ. ಪಾಳ್ಯದ ಹುಡುಗಿಯನ್ನು ಮದುವೆಯಾಗಿ ಮಲೆಮಹದೇಶ್ವರ ಬೆಟ್ಟದಲ್ಲಿ ಲೈಸನ್ಸ್ ಪಡೆದು ಮಹದೇಶ್ವರ ನ್ಯಾಯಬೆಲೆ ಅಂಗಡಿ ತೆರೆಯುವ ಮೂಲಕ ಬೆಟ್ಟಕ್ಕೆ ವಕ್ಕರಿಸಿದ. ಸುತ್ತಮುತ್ತಲ ಗ್ರಾಮಗಳಿಗೆ ವನ್ಯಜೀವಿ-ಅರಣ್ಯ ಇಲಾಖೆಯವರು ಅನುಮತಿ ನೀಡದ ಕಾರಣ ಈವರೆಗೆ ಅಲ್ಲಿ ವಿದ್ಯುತ್ ಸಂಪರ್ಕವಿಲ್ಲ, ರಾತ್ರಿ ಮನೆ ಬೆಳಗುವುದು ಸೀಮೆಎಣ್ಣೆಯ ಬುಡ್ಡಿಗಳೇ. ಈ ಬುಡ್ಡಿಗಳನ್ನು ಉರಿಸುವುದಕ್ಕೆ ಸೀಮೆಎಣ್ಣೆಗಾಗಿ ಜನ ಈ ನಾಗನ ನ್ಯಾಯಬೆಲೆ ಅಂಗಡಿಯನ್ನೇ ಆಶ್ರಯಿಸಬೇಕು. ಆದರೆ ನಾಗ ಎಂಥ ನಿಸ್ಸೀಮ ಎಂದರೆ ಬಡಜನರಿಗಾಗಿ ಬಂದ ಸೀಮೆಎಣ್ಣೆಯನ್ನು ಹೋಟೆಲ್ಲುಗಳಿಗೆ ಬ್ಲಾಕ್‌ನಲ್ಲಿ ಮಾರಿಕೊಂಡು ಬಡಜನರು ಕತ್ತಲೆಯಲ್ಲಿ ಜೀವನ ಸಾಗಿಸುವಂತಹ ಸ್ಥಿತಿಗೆ ತಳ್ಳಿದ್ದಾನೆ. ಯಾರಾದರೂ ಪ್ರಶ್ನಿಸಿದರೆ ಕೈಯಿಂದ ಮಾತನಾಡಿಸುತ್ತಾನೆ. ಬಡವರು ವಿಧಿ ಇಲ್ಲದೆ ಸೀಮೆಎಣ್ಣೆಗಾಗಿ ಅಂಗಲಾಚಿ ಬೇಡಿಕೊಂಡರೆ 9 ರೂಪಾಯಿಗೆ ಒಂದು ಲೀಟರ್ ದರದಲ್ಲಿ ಕೊಡಬೇಕಿರುವ ಸೀಮೆಎಣ್ಣೆಯನ್ನು 20 ರೂಪಾಯಿ ದರದಲ್ಲಿ ಮಾರುತ್ತಾನೆ!

ಬೆಟ್ಟದ ಆಸುಪಾಸಿನ ಜನರಿಗೆ ನೀರಿನ ಅಭಾವ ಇರುವುದರಿಂದ ತಮಗಿರುವ ಅಲ್ಪಸ್ವಲ್ಪ ಜಮೀನಿನಲ್ಲಿ ಭತ್ತ ಬೆಳೆದ ಇತಿಹಾಸವೇ ಇಲ್ಲ, ಆದರೆಲ್ಲರೂ ಸರ್ಕಾರ ಪೂರೈಸುವ ನ್ಯಾಯಬೆಲೆ ಅಂಗಡಿಯ ಅಕ್ಕಿಯನ್ನೇ ಆಶ್ರಯಿಸಬೇಕು. ಆದರೆ ಸೊಸೈಟಿಗೆ ಪ್ರತಿ ತಿಂಗಳು ಬರುವ ಸುಮಾರು 500 ಕ್ವಿ. ಹೆಚ್ಚು ಅಕ್ಕಿ, ಮೂಟೆಗಳನ್ನು ಈ ITC ನಾಗ ಬಡವರಿಗೆ ಹಂಚದೇ ನೇರವಾಗಿ ಕೇರಳಕ್ಕೆ ಸಾಗಿಸುತ್ತಾನೆ. ಅಲ್ಲಿ ಬ್ಲಾಕ್‌ನಲ್ಲಿ ಮಾರಿ ಲಕ್ಷಾಂತರ ರೂಪಾಯಿ ಹಣ ಸಂಪಾದಿಸಿದ್ದಾನೆ.



ಈ ನಾಗನ ಗೂಂಡಾಗಿರಿ ಯಾವ ಮಟ್ಟಕ್ಕೆ ಹೋಗಿದೆಯೆಂದರೆ, ದೇವಸ್ಥಾನದ ಅಧಿಕಾರಿಗಳ ನಡುವೆ ಹಣ ಮೇಯುವ ವಿಚಾರದಲ್ಲಿ ಏನಾದರೂ ಜಗಳ ಉಂಟಾದರೆ ಅಧಿಕಾರಿಗಳು ಈ ಗೂಂಡಾನನ್ನು ಕರೆಸಿ ತಮ್ಮ ವಿರೋಧಿಗಳನ್ನು ಬೆದರಿಸಿ ಇವನಿಗೂ ತಿನ್ನಿಸುತ್ತಾರೆ ತಾವೂ ತಿನ್ನುತ್ತಾರೆ.

ಹೀಗೆ ಬೆಟ್ಟದ ನೌಕರರಿಗೆ, ಸುತ್ತಮುತ್ತಲ ಗ್ರಾಮದ ಜನರಿಗೆ ಕಂಠಕನಾಗಿರುವ ಈ ನಾಗನಿಗೆ ರಾಜಕೀಯ ಕವಚವೂ ಇದೆ. ಚುನಾವಣೆಗಳ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕರ್ತನಂತೆ ಭಾರಿ ಓಡಾಡುತ್ತಾನೆ. ಕಾಂಗ್ರೆಸ್‌ನ ಲೋಕಲ್ ನಾಯಕರು ಇವನನ್ನು ಸಾಕಿ ಬೆಳೆಸುತ್ತಾರೆ ಚುನಾವಣೆಯ ಸಮಯದಲ್ಲಿ ಕೆಲಸಕ್ಕೆ ಬರುತ್ತಾನೆಂದು. ಈ ಕಾರಣಕ್ಕಾಗಿಯೇ ಬೆಟ್ಟದ ಪೊಲೀಸ್ ಸ್ಟೇಷನ್‌ನಲ್ಲಿ ನಾಗನ ವಿರುದ್ಧ 8-10 ಕ್ರಿಮಿನಲ್ ಕೇಸುಗಳಿದ್ದರೂ ಸಬ್‌ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ಮಾತ್ರ ಇವನ ಹತ್ತಿರ ಸುಳಿಯುವುದಿಲ್ಲ. ಅವನ ಕೆಲಸ ಏನಿದ್ದರೂ ಚೆಕ್ ಪೋಸ್ಟ್‌ನಲ್ಲಿ ಪ್ರವಾಸಿ ವಾಹನಗಳನ್ನು ತಡೆದು ಹಣ ಸುಲಿಗೆ ಮಾಡುವುದು ಮಾತ್ರ.

ಸ್ವಾಮಿಯ ಸನ್ನಿಧಿಯಲ್ಲಿ ಸಾರಾಯಿ ದಂಧೆ

ಈ ಮಹದೇಶ್ವರ ಬೆಟ್ಟದಲ್ಲಿ ಸಾರಾಯಿ ನಿಷೇಧಕ್ಕೆ ಸರ್ಕಾರ ಆದೇಶಿಸಿ ವರ್ಷಗಳೇ ಉರುಳಿವೆ. ಈ ಆದೇಶ ನಾಗನಿಗೆ ಅನ್ವಯಿಸುವುದಿಲ್ಲ. ಬೆಟ್ಟದ ರಿಯಲ್ ಕಿಂಗ್‌ನಂತೆ ಅಬ್ಬರಿಸುವ ನಾಗ ಸಾರಾಯಿ ನಿಷೇಧದ ಆದೇಶವನ್ನು ಗಾಳಿಗೆ ತೂರಿ ಸಿದ್ಧರಾಜು ಮತ್ತು ಶಿವಣ್ಣ ಎಂಬ ಇಬ್ಬರು ಭಂಟರ ಮೂಲಕ ಇಡೀ ಮಲೆ ಮಹದೇಶ್ವರ ಬೆಟ್ಟವನ್ನು ಸಾರಾಯಿಮಯ ಮಾಡಿಬಿಟ್ಟಿದ್ದಾನೆ. ಸಾರಾಯಿ ಮಾರಾಟ ನಿಷೇಧದ ಕಾರಣದಿಂದಾಗಿ ಬೇರೆ ಎಲ್ಲರೂ ಸಾರಾಯಿ ಮಾರಾಟ ನಿಲ್ಲಿಸಿರುವುದರಿಂದ ನಾಗನಿಗೆ ಅಲ್ಲಿ ಪೈಪೋಟಿ ನಡೆಸುವವರೇ ಇಲ್ಲ. ಅವನು ಹೇಳಿದ್ದೇ ರೇಟು, ಕೊಟ್ಟಿದ್ದೇ ಪ್ರಮಾಣ ಎಂಬಂತಾಗಿದೆ. ತನ್ನ ತಂಟೆಗೆ ಬಾರದಂತೆ ಪೊಲೀಸರಿಗೆ ಒಂದಿಷ್ಟು ತಿನ್ನಿಸಿ ತನ್ನ ದಂಧೆ ಮುಂದುವರೆಸಿದ್ದಾನೆ.

ಈ ITC ನಾಗನ ಹಲ್ಕಟ್ ದಂಧೆಗಳ ಬಗ್ಗೆ ಎಲ್ಲಾ ಅಧಿಕಾರಿಗಳಿಗೂ, ಪೊಲೀಸರಿಗೂ ಗೊತ್ತು. ಆದರೆ ಯಾರೂ ಇವನ ತಂಟೆಗೆ ಬರುವುದಿಲ್ಲ. ಯಾಕೆಂದರೆ ಅವನು ಕೆಲವರಿಗೆ ದುಡ್ಡಿನ ಮೂಲಕ ಮಾತನಾಡಿಸುತ್ತಾನೆ, ಮತ್ತೆ ಕೆಲವರಿಗೆ ಆವಾಜ್ ಹಾಕಿ ಮಾತನಾಡಿಸುತ್ತಾನೆ, ಇನ್ನು ಕೆಲವರಿಗೆ ತೋಳ್ಬಲದ ಮೂಲಕ ಮಾತನಾಡಿಸುತ್ತಾನೆ. ನಾಗನ ಅಟ್ಟಹಾಸ ಎಲ್ಲೆ ಮೀರಿ ಬೆಳೆಯುತ್ತಿದೆ. ಮಲೆ ಮಹದೇಶ್ವರ ಬೆಟ್ಟದ ಆಸುಪಾಸಿನ ಜನ "ಈ ITC ನಾಗನಿಗಿಂತ ಆ ವೀರಪ್ಪನ್‌ನೇ ನೂರು ಪಾಲು ವಾಸಿ" ಎಂದು ಹೇಳುತ್ತಾರೆಂದರೆ ಇವನ ಅಟ್ಟಹಾಸವನ್ನು ನೀವೇ ಊಹಿಸಿ.

ದೌರ್ಜನ್ಯ ಹೆಚ್ಚಾದಷ್ಟು ಅದರ ವಿರುದ್ಧದ ಪ್ರತಿಭಟನೆ ಕೂಡ ಗಟ್ಟಿಗೊಳ್ಳುತ್ತದೆ ಅಂತಾರಲ್ಲ, ಹಾಗೆ ಈ ನಾಗನ ದೌರ್ಜನ್ಯ ಮಿತಿ ಮೀರುತ್ತಿದೆ, ಜನರ ತಾಳ್ಮೆಯ ಕಟ್ಟೆಯೂ ಒಡೆಯುತ್ತಿದೆ. ಮುಂದೊಂದು ದಿನ ಮಲೆ ಮಹದೇಶ್ವರ ಬೆಟ್ಟದ ತುಂಬೆಲ್ಲಾ ಜನ ಈ ITC ನಾಗನನ್ನು ಅಟ್ಟಾಡಿಸಿಕೊಂಡು ಹೊಡೆದರೆ ಆಶ್ಚರ್ಯವಿಲ್ಲ.



ತಿರುಚೆಂಡೂರಿನಲ್ಲಿ ವಾಮಾಚಾರ

ಶತ್ರು ಸಂಹಾರ ಹೋಮ!

ನಾವಿಲ್ಲಿ ಪ್ರಕಟಿಸಿರುವ ಫೋಟೋ ನೋಡಿ. ಸಾಕ್ಷಾತ್ ಭಕ್ತ ಕನಕದಾಸನಂತೆ 'ಬಾಗಿಲನು ತೆರೆದು... ಸೇವೆಯನು ಕೊಡು ಹರಿಯೇ' ಎಂದು ಬೇಡಿಕೊಳ್ಳುತ್ತಿರುವಂತೆ ದೇವೇಗೌಡ ತಲೆ ಹಾಕುತ್ತಿದ್ದಾರೆ.

ಜೊತೆಲಿರೋ ತಮಿಳು ಪುರೋಹಿತರು "ಡೋಂಟ್ ವರಿ, ನಾವಿದ್ದೇವೆ... ಬಾ ಗುರು" ಎನ್ನುವಂತೆ ಹರಕೆಯ ಕುರಿಯಂತೆ ಕಾಣುವ ಗೌಡರ ಸುತ್ತಾ ಕವರ್ ಆಗಿ ಯಾವುದೋ ಮಹತ್ಕಾರ್ಯಕ್ಕೆ ಎಳೆದೊಯ್ಯುತ್ತಿದ್ದಾರೆ.

ಇದನ್ನು ನೀವು ಅವಿವೇಕ ಎಂದು ಕೊಳ್ಳುತ್ತೀರೋ ಇಲ್ಲಾ ದುಷ್ಟತನ ಎನ್ನುತ್ತೀರೋ ನಿಮಗೇ ಬಿಟ್ಟಿದ್ದು.

ಆದರೆ ಇದು ಮಾತ್ರ ಸತ್ಯ.

ಭವ್ಯ ಭಾರತ ದೇಶದ ಪ್ರಧಾನಿಯಾಗಿದ್ದಾತ, ಚೆಲುವ ಕನ್ನಡನಾಡಿನ ಮುಖ್ಯಮಂತ್ರಿಯೂ ಆಗಿದ್ದ ದೇವೇಗೌಡ ಈಗ ಶತ್ರು ಸಂಹಾರಕ್ಕೆ ರೆಡಿಯಾಗಿ ನಿಂತಿದ್ದಾರೆ. ಅದಕ್ಕಾಗಿ ಬಿಟ್ಟೂ ಬಿಡದೆ ರಹಸ್ಯ ಪೂಜೆಗಳು, ಹೋಮ-ಹವನಗಳನ್ನು ನಡೆಸುತ್ತಿದ್ದಾರೆ. ಪದ್ಮನಾಭನಗರದ ಈ ವೃದ್ಧ ರಾಜಕಾರಣಿಯ ದುಷ್ಟತನ, ಕೀಳು ನಡವಳಿಕೆಗಳು ಭಯಾನಕವಾಗಿವೆ. ತಮಿಳುನಾಡಿನ ತಿರುಚೆಂಡೂರ್ ದೇವಸ್ಥಾನದೊಳಗೆ ತೆಗೆಯಲಾಗಿರುವ ಈ ಫೋಟೋ ಅನ್ನೇ ಗಮನಿಸಿ ನೋಡಿ. ಎಂತದ್ದೋ ಅಪಾರವಾದ ನೋವು ಸಂಕಷ್ಟದಲ್ಲಿ ಸಿಲುಕಿಕೊಂಡಿರುವ, ನೊಂದ ಬಡ ಕುಟುಂಬದ ಯಜಮಾನನಂತೆ ದೈನ್ಯತೆಯೇ ಮೂರ್ತಿವೆತ್ತಂತೆ ದೇವೇಗೌಡರು ಕಾಣುತ್ತಿದ್ದರಾದರೂ ಅದು ನಿಜವಲ್ಲ.

ಬಳಿದಾಳೆ ಈಶ

ಅವರ ಅಕ್ಕಪಕ್ಕದಲ್ಲಿರುವ ತಮಿಳುನಾಡಿನ ಪ್ರಖ್ಯಾತ ತಿರುಚೆಂಡೂರ್ ದೇವಸ್ಥಾನದ ಅರ್ಚಕರನ್ನೇ ನೋಡಿ. ಇವರಲ್ಲಿ ಯಾವನ ಮುಖದಲ್ಲಾದರೂ ದೈವಭಕ್ತಿ ಸಾತ್ವಿಕತೆ ಕಾಣಿಸುತ್ತಿದೆಯಾ ಎಂದು ಗಮನಿಸಿ ನೋಡಿ?

ಊಹೂಂ, ಒಳ್ಳೆಯ ಉದ್ದೇಶಕ್ಕೆಂದು ಇವರು ಹೊರಟದ್ದರೆ ತಾನೆ ಅವೆಲ್ಲಾ ಕಾಣಲು ಸಾಧ್ಯ. ಯಾವುದೋ ಡೀಲು ತೆಗೆದುಕೊಂಡು ಜಾರಿ ಮಾಡಲು ಹೊರಟಿರುವ ಗ್ಯಾಂಗ್‌ಸ್ಟರ್‌ಗಳಂತಿರುವ ಇವರೆಲ್ಲಾ ಕಳೆದ ಮಾರ್ಚಿ 10ರಿಂದ 26ರವರೆಗೂ ತಿರುಚೆಂಡೂರಿನಲ್ಲಿ ಒಂದು ರಹಸ್ಯ ಪೂಜೆ ನಡೆಸುತ್ತಿದ್ದರು.

ಶತ್ರು ಸಂಹಾರ ಹೋಮ ಅದು.

ಇದಕ್ಕಾಗಿ ಶ್ರೀಮಾನ್ ದೇವೇಗೌಡರ ಕುಟುಂಬ ಖರ್ಚು ಮಾಡಿರುವುದು ಕೇವಲ 50 ಲಕ್ಷ ರೂಪಾಯಿಗಳನ್ನು ಮಾತ್ರ.

ಅಂದಹಾಗೆ, ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿದನಂತೆ ಎನ್ನುವಂತೆ ಶತ್ರು ಸಂಹಾರಕ್ಕಾಗಿ ಗೌಡರ ಕುಟುಂಬ ಈ ರಹಸ್ಯ ಹೋಮ ನಡೆಸಿದೆ.

ದೇವೇಗೌಡ, ಕುಮಾರಸ್ವಾಮಿ, ರೇವಣ್ಣ ಹಾಗೂ ಗೌಡರ ಕುಟುಂಬದ ಮತ್ತಿತರರಿಗೆ ಶತ್ರುಗಳು ಅಂದರೆ ರಾಜಕೀಯ ವಿರೋಧಿಗಳಿರುವುದು ನಿಜ. ಆದರೆ ಯಾವನೇ ಒಬ್ಬ ರಾಜಕಾರಣಿ ತನ್ನ ವಿರೋಧಿಗಳನ್ನು ಸೋಲಿಸಬೇಕಾದ್ದು ಚುನಾವಣೆಗಳಲ್ಲಿ ತಾನೆ. ತನ್ನ ಪಕ್ಷ ಸಿದ್ಧಾಂತ ಹಾಗೂ ಜನಪರ ಕಾರ್ಯಕ್ರಮಗಳ ಮಾನದಂಡದಲ್ಲಿ ತಾನೆ?

ಆದರೀಗ ಗೌಡರ ಕುಟುಂಬ ವಾಮಾಚಾರದಂತಹ ಕೀಳು, ಅಪ್ರಜಾಸತ್ತಾತ್ಮಕ ಹಾದಿ ಹಿಡಿದು ತನ್ನ ವಿರೋಧಿಗಳ ನಿರ್ನಾಮ ಮಾಡುವುದಾಗಿ ಹೊರಟಿದೆ. ಅದನ್ನು ಮೂರ್ಖತನ ಎನ್ನಬೇಕೋ ಬೇಡವೋ ಹೇಳಿ?

ಮುರುಗನ್ ಭೂ ಬಿಟ್ಟಿದ್ದಾರೆ

ಶತ್ರು ಸಂಹಾರ ಹೋಮ ಎಂಬುದನ್ನು ಬಹುಶಃ ಹಿಂದೆ ರಾಜ-ಮಹಾರಾಜರುಗಳ ಕಾಲದಲ್ಲಿ ನಡೆಸುತ್ತಿದ್ದರೇನೋ, ಆದರೆ ಈಗಲೂ ಅದನ್ನು ನಂಬುವ, ಪ್ರಮೋಟ್ ಮಾಡುವ ಪುರೋಹಿತರುಗಳು ಕರ್ನಾಟಕ ಹಾಗೂ ತಮಿಳುನಾಡಿನಲ್ಲಿದ್ದಾರೆ. ಕರ್ನಾಟಕದಲ್ಲಿ ಈ ಪೂಜೆ ಮಾಡಿಸಿದರೆ ತಮ್ಮ ರಹಸ್ಯವೆಲ್ಲಿ ಬಯಲಾಗುವುದೋ ಎಂಬ ಭೀತಿಯಿಂದ ಗೌಡರ ಕುಟುಂಬ ತಮಿಳುನಾಡಿಗೆ ಹೋಗಿ ಈ ದುರುಳತನದ ಪೂಜೆ ಮಾಡಿಸಿಬಂದಿದೆ. ಅವರು ಈ ಬಾರಿ ಮೊರೆ ಹೊಕ್ಕಿದ್ದು ಮುರುಗನ್ ದೇವರಿಗೆ. ನೆರೆಯ ತಮಿಳುನಾಡಿನ ಆರು ಪ್ರಮುಖ ಸ್ಥಳಗಳಲ್ಲಿ ಮುರುಗನ್ ಅರ್ಥಾತ್ ಸುಬ್ರಮಣ್ಯ ದೇವಸ್ಥಾನಗಳಿವೆ. ಪಳನಿ, ತಿರುಪುರಂಗುನ್ರಂ, ಪಳಮುದರ್ ಜೋಳೈ, ತಿರುಚೆಂಡೂರ್, ತಿರುತ್ತಣಿ ಹಾಗೂ ಸ್ವಾಮಿ ಮಲೈ ಇವೇ ಆ ದೇವಸ್ಥಾನಗಳು. ಈ ಪೈಕಿ ಸಮುದ್ರ ತೀರದಲ್ಲಿರುವ ತಿರುಚೆಂಡೂರ್ ಅನ್ನು ತಮ್ಮ ಶತ್ರು ಸಂಹಾರ ಹೋರಾಟಕ್ಕೆ ಆರಿಸಿಕೊಂಡ ಗೌಡರ ಕುಟುಂಬ ಅಲ್ಲಿನ ಅವಧಾನಿಗಳಿಗೆ ಲಕ್ಷಾಂತರ ರೂಪಾಯಿ ದಕ್ಷಿಣೆಯ ಆಮಿಷ ಒಡ್ಡಿ ಈ ದುಷ್ಟ ಕಾರ್ಯಕ್ಕೆ ಇಂಬು ನೀಡಿದೆ.

ಸಾಮಾನ್ಯವಾಗಿ ಸಾತ್ವಿಕ ಸ್ವಭಾವದ ಪುರೋಹಿತರು ಶತ್ರು ಸಂಹಾರ ಹೋಮದಂತ ವಾಮಾಚಾರದ ಲೆವೆಲ್‌ನ ಕೆಲಸಗಳನ್ನು ಮಾಡಲು ಒಪ್ಪುವುದಿಲ್ಲ, ಆದರೆ ಗೌಡರ ಕುಟುಂಬದವರ ಕಾಸಿನ ಆಸೆಗೆ ಶರಣಾಗಿ ತಿರುಚೆಂಡೂರಿನ ಪುರೋಹಿತರ ಒಂದು ಗುಂಪು ಮುಂದೆ ಬಂದು ಈ ಕ್ರಿಮಿನಲ್ ಕೆಲಸ ಮುಗಿಸಿಕೊಟ್ಟಿದೆ.

ಮಾರ್ಚ್ 10ರಂದು ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಅವರ 'ಏಕೈಕ' ಪತ್ನಿ ಅನಿತಾರವರೇ ಖುದ್ದು ಹಾಜರಿದ್ದು ಈ ಹೋಮಕ್ಕೆ ಚಾಲನೆ ನೀಡಿದ್ದರು. ನಂತರ ಹದಿನಾರು ದಿನ ಅವ್ಯಾಹತವಾಗಿ ನಡೆದ ಈ ಹೋಮ ಮುಗಿದದ್ದು ಮಾರ್ಚ್ 25ರಂದು. ಅವತ್ತು ಮಹಾಮಾಂತ್ರಿಕ ಸಾಕ್ಷಾತ್ ದೇವೇಗೌಡ-ಚೆನ್ನಮ್ಮ ದಂಪತಿಗಳೇ ಹಾಜರಿದ್ದರು. ಈ ಪೂಜೆಗೆಂದೇ ಬೆಂಗಳೂರಿನಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಹೊರಟು ಸಾಗುಪುರಂನಲ್ಲಿ ಇಳಿದು ನಂತರ ತಿರುಚೆಂಡೂರಿಗೆ ಕಾರ್ ಮೂಲಕ ಹೋಗಿದ್ದಾರೆ. ಅವತ್ತಿನ ದಿನ ಮಾಜಿ ಪ್ರಧಾನಿಗಳ ಸ್ವಾಗತಕ್ಕೆ ಅಸಿಸ್ಟೆಂಟ್ ಕಮೀಷನರ್ ಮುರುದನಾಯಗಂ, ಎಸ್.ಪಿ. ಜಾನ್ ನಿಕಲಿಸನ್ ಹಾಗೂ ಲೋಕಲ್ ತಹಶೀಲ್ದಾರ್ ಹೋಗಿದ್ದಾರೆ. ತಾರಂಗಧರ ಇಂಡಸ್ಟ್ರೀಸ್‌ನ ಮಾಲೀಕ ಎನ್. ಎಸ್. ಮೋಹನ್ ಎಂಬ ನಿಗೂಢ ವ್ಯಕ್ತಿ ಗೌಡರು ಅಲ್ಲಿದ್ದ ಅಷ್ಟೂ ಹೊತ್ತು ಜೊತೆಗಿದ್ದಾನೆ.

ಹೀಗೆ ಸ್ವಾಗತ, ವಿಶ್ರಾಂತಿಗಳೆಲ್ಲಾ ಮುಗಿದ ನಂತರ ಗೌಡರ ಅಸಲಿ ಅನಾಚಾರಗಳು ಶುರುವಾಗಿವೆ. ತಿರುಚೆಂಡೂರ್ ದೇವಾಲಯದೊಳಗೆ 108 ಮಹಾದೇವ ಸನ್ನಿಧಿ ಎಂಬುದಿದೆ. ಅದನ್ನು ದರ್ಶಿಸಿದ ಗೌಡರನ್ನು ಷಣ್ಮುಗ ವಿಲಾಸ ಮಂಟಪಂನಲ್ಲಿ ಕೂರಿಸಿದ ಧನದಾಹಿ ಪುರೋಹಿತರು ಧಾರ್ಮಿಕ ವಿಧಾನಗಳ ಮೂಲಕ ಬೇರೊಂದು ಸ್ವಾಗತ ನೀಡಿದ್ದಾರೆ. ಅದೇ ಪ್ರಾಂಗಣದಲ್ಲಿ ಶತ್ರು ಸಂಹಾರ ದೇವತೆಯ ಮೂರ್ತಿಯೂ ಇದೆ. ಅದಕ್ಕೆ ನಾನಾ ರೀತಿಯ ಅಭಿಷೇಕ, ಕನ್ಯಾಸ್ತ್ರೀಯೊಬ್ಬಳ ಪೂಜೆ (ಲೋಕಲ್ ಹುಡುಗಿಯನ್ನು ಪುರೋಹಿತರೇ ಕರೆಸಿದ್ದರು) ನಂತರ ಮೂಲ ವಿಗ್ರಹ ಪೂಜೆ ನೆರವೇರಿಸಲಾಗಿದೆ. ಈ ವಾಮಾಚಾರಗಳು ನಡೆಯುವಾಗ ಪುರೋಹಿತರು ಏನನ್ನೂ ತಿನ್ನುವಂತಿಲ್ಲ, ಕುಡಿಯುವಂತಿಲ್ಲ. ಸ್ವತಃ ಶತ್ರು ಸಂಹಾರ ಹೋಮ ನಡೆಸುವವನೂ ಅಂದರೆ ದೇವೇಗೌಡರೂ ಅವತ್ತು ಬೆಳಗಿನಿಂದ ಸಂಜೆಯವರೆಗೂ ಏನೂ ತಿನ್ನಲಿಲ್ಲ, ನೀರೂ ಕುಡಿಯಲಿಲ್ಲ. 70ರ ಈ ಅಜ್ಜನಿಗೆ ಈಗಲೇ ನೂರೆಂಟು ಅನಾರೋಗ್ಯದ ಸಮಸ್ಯೆಗಳಿವೆ. ಹೀಗಿದ್ದಾಗಲೂ ಉಪವಾಸ-ವನವಾಸ ಅನುಭವಿಸುತ್ತಾ ಶತ್ರುಗಳನ್ನು ನಿರ್ಮೂಲಿಸುವ ಹಠ ಈತನಿಗೆ.

ಆದರೂ ನಾನಾ ಪರಿಪಾಟಲು ಪಟ್ಟು ಮುಗಿಸಿರುವ ಈ ಶತ್ರು ಸಂಹಾರ ಹೋಮ ಪೂರ್ಣಗೊಳಿಸಿ ತುಪ್ಪ, ರೇಷ್ಮೆಸೀರೆ, ತೆಂಗಿನಕಾಯಿ ಹಾಗೂ ಇನ್ನಿತರ ವಸ್ತುಗಳನ್ನು ಬೆಂಕಿಗೆ ಹಾಕಿ ಬಂದಿದ್ದಾರೆ. ಗೌಡರಿಂದ ಬರೋಬ್ಬರಿ 50 ಲಕ್ಷದ ಅಮೌಂಟ್ ಕಿತ್ತಿರುವ ತಿರುಚೆಂಡೂರ್‌ನ ಖಾಕಡಾ ಪೂಜಾರಿಗಳು ಏಪ್ರಿಲ್ ಮೊದಲ ವಾರದಲ್ಲಿ ಹೋಮಕುಂಡದಲ್ಲಿ ಉಳಿದಿರುವ ಬೂದಿ ಇತ್ಯಾದಿಗಳನ್ನು ಪಾರ್ಸಲ್ ಮಾಡಲಿದ್ದಾರೆ. ಈ ಬೂದಿ ಭಸ್ಮಗಳನ್ನು ಗೌಡರು ಮತ್ತವರ ಸುಪುತ್ರರೆಲ್ಲಾ ಹಣೆಗೆ ಹಚ್ಚಿಕೊಂಡು ಹೊರಗಡೆ ಓಡಾಡಲಿದ್ದಾರೆ.

ಈ ಭಸ್ಮ ತಮ್ಮ ಹಣೆ ಮೇಲಿದ್ದರೆ ಯಾವ ಶತ್ರುಗಳೂ ತಮಗೆ ಕೇಡು ಮಾಡಲಾಗದು. ಅಷ್ಟೇ ಅಲ್ಲ ಅಂತವರ್‍ಯಾರಾದರೂ ಎದುರು ಕಾಣಿಸಿಕೊಂಡರೆ ಭಸ್ಮದ ಪ್ರಭಾವಕ್ಕೆ ಸಿಕ್ಕು ನಾಶವಾಗಿ ಬಿಡುತ್ತಾರೆಂದು ಗೌಡ ನಂಬಿಕೊಂಡಿದ್ದಾರೆ.

ಈ ದೇವೇಗೌಡ ಅಂಥ ವಿದ್ಯಾವಂತನೇನಲ್ಲ, ಇನ್ನು ಅಧಿಕಾರದಲ್ಲಿರುವ ಕುಮಾರಸ್ವಾಮಿ ಹಾಗೂ ರೇವಣ್ಣ ಕೂಡ ಇಂತಾದ್ದನ್ನೆಲ್ಲಾ ಮಾಡುತ್ತಿರುವುದರಿಂದ ಅವಿವೇಕಿ ಅವಿದ್ಯಾವಂತರೆಂದೇ ಹೇಳಬೇಕಾಗುತ್ತದೆ.

ಅಲ್ಪನಿಗೆ ಅಧಿಕಾರ ಬಂದರೆ ಅರ್ಧರಾತ್ರೀಲಿ ಛತ್ರಿ ಹಿಡೀತಾನೆ, ಆದರೆ ಛತ್ರಿಗಳಿಗೇ ಅಧಿಕಾರ ಸಿಕ್ಕರೆ ಅಲ್ಪತನ ಬಿಟ್ಟು ಹೋಗುತ್ತದೆಯೇ? ಎನ್ನುವಂತಾಗಿದೆ.

ಈ ದೇವೇಗೌಡ ಮತ್ತವರ ಕುಟುಂಬದವರ ನೀಚತನ ಹೇಗಿದೆಯೆಂದರೆ ಅವರಿಗೆ ನಂಬಿಕೆ, ಶ್ರದ್ಧಾ ಭಕ್ತಿಗಳಿರುವುದೇ ನಿಜವಾದಲ್ಲಿ ಈ ರಾಜ್ಯದ ಜನರಿಗೆ ಒಳಿತಾಗಲಿ, ಮಳೆ-ಬೆಳೆ ಚೆನ್ನಾಗಿ ನಡೆಸಿಕೊಡಲಿ ಎಂದೆಲ್ಲಾ ಪೂಜೆ ಮಾಡಿಸಬೇಕಿತ್ತಲ್ಲವೆ? ಆದರೆ ಅದು ಬಿಟ್ಟು ತಮ್ಮನ್ನು ವಿರೋಧಿಸುವವರೆಲ್ಲಾ ಸಾಯಲಿ ಎಂದು ಹೊರಟರೆ ಏನು ಗತಿ.

ಗೌಡ ಮತ್ತವರ ಕುಟುಂಬದವರ ಭ್ರಷ್ಟಾಚಾರ, ದಬ್ಬಾಳಿಕೆ, ಅನಾಚಾರಗಳನ್ನೆಲ್ಲಾ ಮುಕ್ಕಾಲು ವಾಸಿ ಕರ್ನಾಟಕದ ಜನತೆ ವಿರೋಧಿಸುತ್ತಿದ್ದಾರೆ. ದ್ವೇಷಿಸಲು ಶುರು ಮಾಡಿದ್ದಾರೆ.


ಈಗ ಗೌಡರ ಶತ್ರು ಸಂಹಾರ ಹೋಮದ ಪ್ರಕಾರ ನಿಜವಾಗುವುದಾದರೆ ಕರ್ನಾಟಕದ ಆರು ಕೋಟಿ ಜನ ಸಾಯಬೇಕಾಗುತ್ತದೆ ಅಲ್ಲವೆ?

ಮೂರ್ಖ ಮುಖ್ಯಮಂತ್ರಿ

ಕರ್ನಾಟಕದಲ್ಲಿ ಆಗಿಹೋಗಿರುವ ಮುಖ್ಯಮಂತ್ರಿಗಳಲ್ಲೇ ಅತ್ಯಂತ ಬೇಜವಾಬ್ದಾರಿ ವ್ಯಕ್ತಿಯೆಂದರೆ ಬಹುಶಃ ಈಗಿನ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಇರಬೇಕು. ಮುಖ್ಯಮಂತ್ರಿ ಹುದ್ದೆಯೆಂದರೆ ಗ್ರಾಮ ಪಂಚಾಯಿತಿ ಮೆಂಬರ್ ಲೆವೆಲ್‌ದು ಎಂದು ಈತ ಭಾವಿಸಿರುವಂತಿದೆ. ವಿಧಾನಸಭಾ ಕಲಾಪಗಳಿಗೆ ಪದೇಪದೇ ಚಕ್ಕರ್ ಹಾಕುವುದು, ಸೆಷನ್ ನಡೆಯುತ್ತಿರುವಾಗಲೇ ಪೂಜೆ ಪುನಸ್ಕಾರವೆಂದು ಖಾಸಗಿ ಜೆಟ್ ವಿಮಾನದಲ್ಲಿ ಊರೂರು ಸುತ್ತುವ ಚಾಳಿ ಕುಮಾರ ಸ್ವಾಮಿಗಿದೆ.

ಈತ ಮುಖ್ಯಮಂತ್ರಿಯಾದ ಹೊಸತರಲ್ಲೇ ಅಧಿವೇಶನ ನಡೆಯುತ್ತಿದ್ದಾಗಲೇ ದಿಢೀರೆಂದು ದುಬೈಗೆ ಹೋಗಿದ್ದರು. ಅಲ್ಲಿ ಏನು ಕಡಿದು ಬಂದರೋ ಯಾವನಿಗೂ ಗೊತ್ತಾಗಲಿಲ್ಲ. ನಂತರ ಇನ್ನೊಮ್ಮೆ ಸೆಷನ್ ನಡೆಯುತ್ತಿದ್ದಾಗಲೇ ಸಿಂಗಪೂರ್‌ಗೆ ಹಾರಿದ್ದರು. ಅಲ್ಯಾವ ಘನಂಧಾರಿ ಕಾರ್ಯವಿತ್ತೋ ಯಾರಿಗೂ ವಿವರ ನೀಡಲಿಲ್ಲ, ಈಗ ಮತ್ತೆ ಬಜೆಟ್ ಅಧಿವೇಶನ ಶುರುವಾದಾಗಲೇ ಸದನಕ್ಕೆ ಚಕ್ಕರ್ ಹಾಕಿ ಮಂಗಳೂರಿಗೆ ಖಾಸಗಿ ಭೇಟಿಗೆಂದು ಹೋಗಿ ಬಂದಿದ್ದಾರೆ.

ಈಗ ಕೇಳಿಬರುತ್ತಿರುವ ರೂಮರ್ ಪ್ರಕಾರ ಕುಮಾರಸ್ವಾಮಿಯ ಖಾಸಗಿ ದರ್ಬಾರಿನ ಕಲಾವಿದೆ ನಟಿ ರಾಧಿಕಾಳ ಕ್ಷೇಮ ಸಮಾಚಾರ ವಿಚಾರಿಸಲು ಅವರು ಮಂಗಳೂರಿನ ಎ.ಜೆ. ಶೆಟ್ಟಿ ಆಸ್ಪತ್ರೆಗೆ ಹೋಗಿದ್ದರಂತೆ. ಅಷ್ಟೇ ಅಲ್ಲ, ಈ ಕಬಾಬು ನಟಿ ರಾಧಿಕಾ ಇತ್ತೀಚೆಗೆ ಬಂಟ್ವಾಳದ ಸಾಲೇತೂರ್ ಗ್ರಾಮದಲ್ಲಿ ಆರೆಕರೆ ತೋಟ ಖರೀದಿಸಿದ್ದಾಳೆ. ಕುಮಾರಸ್ವಾಮಿ ಮಂಗಳೂರಿಗೆ ರಹಸ್ಯ ಭೇಟಿ ಕೊಟ್ಟ ನಾಲ್ಕು ದಿನ ಮೊದಲೇ ರಾಧಿಕಾ ಸಾಲೇತೂರಿನ ತನ್ನ ತೋಟದ ಮನೆ ಸೇರಿಕೊಂಡಿದ್ದಳು. ಸಿಎಂ ಬರುವ ಹಿಂದಿನ ದಿನ ರಾಧಿಕಾ ನಾಗ ಪೂಜೆಯೊಂದನ್ನು ಮಾಡಿಸಿದ್ದಳು. ಹತ್ತಿರದ ಸದಾಶಿವ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿ ಅನಾಮತ್ತು ಮೂರುವರೆ ಲಕ್ಷ ರೂ.ಗಳನ್ನು ಕಾಣಿಕೆ ಕೊಟ್ಟು ಬಂದಿದ್ದಾಳೆ. ಸುದ್ದಿ ಗೊತ್ತಾಗಿ ಹತ್ತಿರದ ವಿಷ್ಣುಮೂರ್ತಿ ದೇವಸ್ಥಾನದ ಪುರೋಹಿತರಿಗೂ ಬಾಯಲ್ಲಿ ನೀರೂರಿದೆ. ಅವರು ಬಂದು ರಾಧಿಕಾಳನ್ನು ಕೇಳಿ ಒಂದು ಲಕ್ಷ ಕಾಣಿಕೆಯ ಆಶ್ವಾಸನೆ ಪಡೆದು ಹೋಗಿದ್ದಾರೆ. ಸಿಎಂ ಮಂಗಳೂರಿಗೆ ಬಂದ ದಿನ ರಾಧಿಕಾಳೂ KA 05 TR 5433 ನಂಬರಿನ ರೆಡ್ ಕಲರ್ ನಿಸಾನ್ ಕಾರಿನಲ್ಲಿ ಸಾಲೇತೂರ್ ಬಿಟ್ಟಿದ್ದಾಳೆ. ಅತ್ತ ಬಜ್ಪೆ ಏರ್‌ಪೋರ್ಟಿನಿಂದ ಹೊರಟ ಸಿಎಂ ಕಾರೂ ನಾಪತ್ತೆ, ಇತ್ತ ಸಾಲೇತೂರಿನಿಂದ ಹೊರಟ ರಾಧಿಕಾಳ ನಿಸಾನ್ ಕಾರು ಒಂದಿಡೀ ದಿನ ನಾಪತ್ತೆಯಾಗಿದ್ದವು.



ಮಾರನೇ ದಿನ ಬೆಂಗಳೂರಿನಲ್ಲಿ ಪ್ರತ್ಯಕ್ಷರಾದ ಕುಮಾರಸ್ವಾಮಿ ತಾವು ಖಾಸಗಿ ಪೂಜಾ ಕಾರ್ಯಕ್ರಮಕ್ಕೆಂದು ಮಂಗಳೂರಿಗೆ ಹೋಗಿದ್ದಾಗಿ ಸಮಜಾಯಿಷಿ ಕೊಟ್ಟರು.

ಅದೇ ವೇಳೆಗೆ ದೂರದ ತಮಿಳುನಾಡಿನ ತಿರುಚೆಂಡೂರಿನಲ್ಲೂ ದೇವೇಗೌಡ-ಚೆನ್ನಮ್ಮ ದಂಪತಿಗಳು ನಡೆಸುತ್ತಿದ್ದ ಹೋಮದ ಅಂತಿಮ ವಿಧಿಗಳು ಜರುಗುತ್ತಿದ್ದವು.

ಬಹುಶಃ ಕುಮಾರಸ್ವಾಮಿಯೂ ಅದೇ ಪೂಜೆಯ ಇನ್ನೊಂದು ಭಾಗವನ್ನು ದಕ್ಷಿಣ ಕನ್ನಡದ ನಿಗೂಢ ಸ್ಥಳವೊಂದರಲ್ಲಿ ಪೂರ್ತಿಗೊಳಿಸುತ್ತಿದ್ದರೆಂದು ಕಾಣುತ್ತಿದೆ. ಆದರೆ ಕೊನೆಗೂ ಉಳಿಯುವ ಪ್ರಶ್ನೆ ಏನೆಂದರೆ ಇಂತಾ ಪೂಜೆಗಳಲ್ಲಿ ದಂಪತಿ ಸಮೇತವಾಗಿ ಕೂರುತ್ತಾರೆ. ಅತ್ತ ತಿರುಚೆಂಡೂರಿನಲ್ಲಿ ದೇವೇಗೌಡರ ಪಕ್ಕ ಚೆನ್ನಮ್ಮನವರಿದ್ದರು. ಆದರೆ ಅವತ್ತು ಕುಮಾರಸ್ವಾಮಿಯ ಏಕೈಕ ಪತ್ನಿ ಅನಿತಾರವರು ಬೆಂಗಳೂರಿನಲ್ಲೇ ಇದ್ದರು!

ಹಾಗಿದ್ದರೆ ಕುಮಾರಸ್ವಾಮಿ ಪಕ್ಕ ಬೇರೆ ಯಾರಾದರೂ ಕೂತಿದ್ದರಾ ಅಂತಾ!?

ಅಂಜನಾ ಹಾಕಿ ಪತ್ತೆ ಮಾಡಬೇಕಾದ ಸಂಗತಿಯಲ್ಲವೆ ಇದು?

ತುರಳ್ಳಿ ಕಾಡು ಕಬಳಿಕೆ

ಕದ್ದ ಸ್ವಾಮಿ ಬಿದ್ದ 'ಸ್ವಾಮಿ'

'ಇಬ್ಬರು ಖದೀಮರು ಪೊಲೀಸರೆದುರು ಅಂವ
ಇಂವ ಕದ್ದ ಎಂದು ಕಚ್ಚಾಡಿದ ಕತೆಗೂ ಸ್ವಾಮೀಜಿ
ರಳ್ಳಿ ಕಾಡು ಕಬಳಿಸಿದ ಕತೆಗೂ ಏನು
ತ್ಯಾಸ?

'ಕದ್ದಿದ್ದೇ ನಿಜ ಅನ್ನೋದಾದ್ರೆ
ನ್ನು ಖಂಡಿತಾ ವಾಪಸ್ಸು
ಡಿಬಿಡ್ತೀನಿ' ಎನ್ನುವ
ಲಗಂಗಾಧರನಾಥರ ಮಾತೇ
ಗಿದ ಪಾಪಕ್ಕೆ ಪುರಾವೆ
ಡುತ್ತಿಲ್ಲವೆ? ಇನ್ನು
ುಖ್ಯಮಂತ್ರಿ ಕುಮಾರಸ್ವಾಮಿ
ಮಿಯ ವಿರುದ್ಧ ಕೇಸು ಹಾಕಿದ
ಕಾರಿಯನ್ನೇ ಶಿಕ್ಷಿಸುತ್ತೇನೆ'
ನ್ನುವುದಕ್ಕೂ ಮುನ್ನ ಆತ ತನ್ನದೇ
ರ್ಕಾರದ ಅಧಿಕಾರಿ ಮತ್ತು ಆದಕ್ಕೆ
ನೇ ಹೊಣೆಗಾರ ಎಂಬುದನ್ನು
ಮರೆಮಾಚುತ್ತಿದ್ದಾರೆ?

ಕದ್ದ ಸ್ವಾಮಿ ಮತ್ತು ಬಿದ್ದ
ುಮಾರಸ್ವಾಮಿ ಇಬ್ಬರಿಗೂ
ತ್ತಿರುವ ಏಕಸತ್ಯವೆಂದರೆ;
ಮ್ಮಿಬ್ಬರನ್ನು ಮೀರಿದ ಕೈಯೊಂದು
ಸಿದ ಬಲೆಯಿಂದ
ಸಿಕೊಳ್ಳಬೇಕೆಂದರೆ
ಬ್ಬರಿಗೊಬ್ಬರು ಹೆಗಲು
ಡಲೇಬೇಕಿದೆ!

ಅದಕ್ಕೇ ಸ್ವಾಮೀಜಿ ಪ್ರಕರಣ
ುಲಿಗೆಳೆದ ದೀಕೇಶಿಗೆ ಹಿಡಿಶಾಪ
ಕುತ್ತಿರುವುದು ಮತ್ತು ಕುಮಾರಸ್ವಾಮಿ
ಸು ಹಾಕಿದ ಅಧಿಕಾರಿಯನ್ನೇ ಬಲಿ
ಕ್ತೀನಿ ಎನ್ನುತ್ತಿರುವುದು. ತಮಾಷೆಯೆಂದರೆ ಸ್ವಾಮೀಜಿ
ಮಿ ಕದ್ದಿದ್ದು ಎಷ್ಟು ಸತ್ಯವೋ ಕೋ-ಜಾ ಸರ್ಕಾರ
ಸು ಹಾಕಿದ್ದೂ ಅಷ್ಟೇ ಸತ್ಯ. ಎಸ್.ಎಂ. ಕೃಷ್ಣರ

ರಾ. ಸೋಮನಾಥ್

ರ್ಕಾರದಲ್ಲಿ ಕಂದಾಯ ಮಂತ್ರಿಯಾಗಿದ್ದ ಶ್ರೀಕಂಠಯ್ಯ
ಳಿಕೇಳಿ ಆದಿಚುಂಚನಗಿರಿಯ ಪರಮನಿಷ್ಠ. ಅವರ
ರ್ಜಿಯ ಮೇರೆಗೇ ತುರಳ್ಳಿ ಕಾಡಿನ ಸರ್ವೆ ನಂಬರ್
ರ ಅರಣ್ಯ ಭೂಮಿಗೆ ಆದಿಚುಂಚನಗಿರಿ ಬಾಲ
ಗಾಧರನಾಥರು 2004 ರಲ್ಲಿ ಕೈಹಾಕಿದ್ದಾರೆ.
ೊಂದೇ ಅಲ್ಲ ನೆಲಮಂಗಲ ಕುಣಿಗಲ್ ರಸ್ತೆಯಲ್ಲಿ
ಭತ್ತು ಎಕರೆಯ ಗೋಮಾಳ, ಬಿಡದಿ ಸಮೀಪ
ೂವತ್ತೆಕರೆ, ಮೈಸೂರು ಹೊರವಲಯದಲ್ಲಿ
ತ್ತೆರಡೆಕರೆ; ಇತ್ಯಾದಿ ಸರ್ಕಾರಿ ಜಮೀನು ಶ್ರೀಕಂಠಯ್ಯನ
ಯಿಂದಲೇ ಆದಿಚುಂಚನಗಿರಿ ಪಾಲಾಯಿತು.

ಆದರೆ ಕೆಂಗೇರಿ ಸಮೀಪದ ಕಗ್ಗಲಿಪುರ ಹೋಬ
ು ತುರಳ್ಳಿ ಕಾಡು ಹೇಳಿಕೇಳಿ ಅರಣ್ಯಭೂಮಿ.
ದೆಡೆ ವನ ಸಂರಕ್ಷಣೆಯ ಮಾತಾಡುತ್ತಲೇ ಮತ್ತೊಂ
ವನಭಕ್ಷಣೆಯ ಹುನ್ನಾರವೊಂದಕ್ಕೆ ಸ್ವಾಮೀಜಿ
ುಟ್ಟರು. ಸಲ್ಲದ ಸರ್ಕಸ್ ಮಾಡಿಯಾದರೂ ತುರಳ್ಳಿ
ನ ಐವತ್ತೆಕರೆಯನ್ನು ಕಬಳಿಸುವ ಮಾಸ್ಟರ್ ಪ್ಲಾನ್
ದನ್ನು ರೂಪಿಸಿದ್ದು ಬಾಲಗಂಗಾಧರರ ಬಲಗೈ ಬಂಟ
ಲಕಲಾವಲ್ಲಭ ಶೇಖರ್ ಸ್ವಾಮೀಜಿ!

ಅದಕ್ಕೆಂದು ತಮ್ಮ ಕಂದಾಯ ಇಲಾಖೆಯನ್ನೇ ಅರಣ್ಯ ಇಲಾಖೆಯ ವಿರುದ್ಧ ಶ್ರೀಕಂಠಯ್ಯ ಛೂ ಬಿಟ್ಟರು. ಅರಣ್ಯ ಭೂಮಿಗೂ ಕಂದಾಯ ಇಲಾಖೆಗೂ ಯಾವುದೇ ಸಂಬಂಧವಿಲ್ಲದಿದ್ದರೂ ತುರಳ್ಳಿ ಕಾಡಿನ ಐವತ್ತೆಕರೆಯನ್ನು ಮಠಕ್ಕೆ ಗುತ್ತಿಗೆಗೆ ಕೊಡಲು ಹೇಗೆ ಸಾಧ್ಯ? ಹಾಗಂಥ ಅರಣ್ಯ ಇಲಾಖೆಯ ಕೆಲ ನಿಷ್ಠ ಅಧಿಕಾರಿಗಳು ಕೈಕಟ್ಟಿ ಕೂರಲಿಲ್ಲ. ಕಂದಾಯ ಇಲಾಖೆಯ ಗುತ್ತಿಗೆ ಪ್ರಸ್ತಾವಕ್ಕಾಗಲಿ ಅದರ ಸ್ಥಳ ಪರಿಶೀಲನೆಯ ನಾಟಕಕ್ಕಾಗಲಿ ಕಿಂಚಿತ್ತೂ ಬೆಲೆ ಕೊಡದೇ ಸಮಯ ಕಾದು ಪೆಟ್ಟು ಕೊಡಲು ನಿರ್ಧರಿಸಿದ್ದಾರೆ. ಯಾವತ್ತು ಧರ್ಮಸಿಂಗ್



ಪದಚ್ಯುತಿಗೊಂಡು ಕುಮಾರಸ್ವಾಮಿ ಮುಖ್ಯಮಂತ್ರಿ ಯಾದರೋ ದೇವೇಗೌಡರು ಇದ್ದಕ್ಕಿದ್ದಂತೆ ನೆಲಗಳ್ಳರನ್ನು ಜೈಲಿಗೆ ಹಾಕ್ತೇನಿ ಎಂದು ಡೈಲಾಗ್ ಶುರುಹಚ್ಚಿಕೊಂಡಿದ್ದಾರೆ. ಅದು ಕೇವಲ ದೀಕೇಶಿ ಮೇಲಿನ ವೈಷಮ್ಯವಷ್ಟೇ ಅಲ್ಲ ಎಂಬುದು ಆದಿಚುಂಚನಗಿರಿ ಬಾಲಗಂಗಾಧರ ನಾಥರಿಗೆ ಅರ್ಥವಾಗಲಿಲ್ಲ.

ಆದಕ್ಕೆ ತಕ್ಕಂತೆ ಕಗ್ಗಲಿಪುರ ರೇಂಜಿಗೆ ನಿಷ್ಠ ಅರಣ್ಯಾಧಿಕಾರಿ ಅಣ್ಣಯ್ಯನವರನ್ನು ತರಲಾಗಿದೆ. ಬಹುಶಃ ಇದು ಕೂಡ ದೇವೇಗೌಡರ ಮರ್ಜಿಯಾಗಿತ್ತೆ?

ಬಂದುಬಂದಿದ್ದೇ ಅಣ್ಣಯ್ಯ ಮಾಡಿದ ಮೊದಲ ಕೆಲಸವೆಂದರೆ ಕರ್ನಾಟಕ ಅರಣ್ಯ ಅಧಿನಿಯಮ 1963ರ ಪ್ರಕಾರ ಅರಣ್ಯ ಒತ್ತುವರಿ, ಅರಣ್ಯನಾಶ ಇತ್ಯಾದಿ ಸೆಕ್ಷನ್ನುಗಳ ಪ್ರಕಾರ ಆದಿಚುಂಚನಗಿರಿ ಬಾಲಗಂಗಾಧರನಾಥರನ್ನೇ ಮೂರನೇ ಆರೋಪಿಯನ್ನಾಗಿ ಮಾಡಿ ಕೇಸು ಹಾಕಿದ್ದು. ಆ ಹೊತ್ತಿಗಾಗಲೇ ತುರಳ್ಳಿ ಸರ್ವೆ ನಂಬರ್ 67 ಕ್ಕೆ ಆದಿಚುಂಚನಗಿರಿ ಬೇಲಿ ಹಾಕಿತ್ತು. ಅಲ್ಲಿ ಜಗದ್ಗುರು ಬಾಲಗಂಗಾಧರನಾಥ ಸ್ವಾಮಿ ವಿದ್ಯಾಭ್ಯಾಸಕ್ಕೆ ಮತ್ತು ಶ್ರೀ ಬಾಲಗಂಗಾಧರ ಸ್ವಾಮಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆಂದು ಪಾಯವನ್ನೂ ಹಾಕಲಾಗಿತ್ತು. ಅದಕ್ಕೂ ಮುನ್ನ ಶೇಖರ್‌ಸ್ವಾಮಿಯ ಪಟಾಲಾಂ ಅಲ್ಲಿ ಅನಾದಿಕಾಲದಿಂದ ಬೆಳೆದಿದ್ದ ಸೀಮೆತಂಗಡಿ ಮತ್ತು ನೀಲಗಿರಿ ಮರಗಳನ್ನು ಕಡಿದು ಹಾಕಿತ್ತು. ಅಲ್ಲೊಂದು ಪಂಪ್‌ಹೌಸ್, ನೀರಿನ ಟ್ಯಾಂಕ್, ಸೋಲಾರ್, ಪವರ್ ಸ್ಟೇಷನ್ ಇತ್ಯಾದಿಗಳನ್ನು ನಿರ್ಮಿಸಿತ್ತು. ಆದರೆ ಮಠದ ದಾರ್ಷ್ಟ್ಯ ಹೇಗಿತ್ತೆಂದರೆ, 2006 ರ ಅಕ್ಟೋಬರ್ 10 ರಂದೇ ಅರಣ್ಯಾಧಿಕಾರಿ ಅಣ್ಣಯ್ಯನವರು ಮಠದ ಪ್ರಮುಖರ ವಿರುದ್ಧ ಕೇಸು ದಾಖಲಿಸಿದರೂ ಅದನ್ನು ಲೆಕ್ಕಿಸದೇ ಬಾಲಗಂಗಾಧರರೇ ನಿಂತು ಕಾಲೇಜಿನ ಬಿಲ್ಡಿಂಗ್ ಕಟ್ಟಿಸಿಬಿಟ್ಟರು.



ಸ್ವಾಮಿದೇವನೇ, ಭೂಗಳ್ಳನೇ, ಶರಣು ಬಂದೆ ನಿನ್ನ ಪಾದಕೆ!

ಕಾನೂನಿನ ಪರಿವೆಯಿದ್ದೂ ಕೇಸು ಹಾಕಿದ ನಂತರವೂ ಕಾಲೇಜಿನ ಕಟ್ಟಡ ತಲೆ ಎತ್ತಿತೆಂದರೆ ಅದು ಶುದ್ಧ ಭೂಕಬಳಿಕೆಯಲ್ಲದೇ ಮತ್ತೇನು? ಭೂಕಬಳಿಕೆಗೆ ಒಂದು ವರ್ಷ ಜೈಲು ಶಿಕ್ಷೆ ಎಂದು ಹುಡಿಪುಡಿ ಭೂಗಳ್ಳರನ್ನೆಲ್ಲ ಜೈಲಿಗೆ ಹಾಕಿದ ಕುಮಾರಸ್ವಾಮಿ ಸರ್ಕಾರ ಬಾಲಗಂಗಾಧರರಿಗೂ ಅದೇ ಮಾನದಂಡವನ್ನು ಬಳಸ ಬೇಕಿತ್ತು. ಆದರೆ ಅಪ್ಪನ ಸೇಡನ್ನು ಬದಿಗೊತ್ತಿದ ಕುಮಾರಸ್ವಾಮಿ ಪದೇಪದೇ ಆದಿಚುಂಚನಗಿರಿ ಸ್ವಾಮಿಗಳನ್ನು ಭೇಟಿಯಾಗತೊಡಗಿದ್ದಾರೆ.


ತಮಾಷೆಯೆಂದರೆ ಮಗ ರಾಜಿ ನಟಿಸುತ್ತಿರುವಾಗಲೂ ಅಪ್ಪನ ಜಿದ್ದು ಮಾತ್ರ ಮುಂದುವರಿದೇ ಇತ್ತು!

ಒಬ್ಬ ಅರಣ್ಯಾಧಿಕಾರಿ ಆದಿಚುಂಚನಗಿರಿಯಂಥ ಪ್ರಭಾವಿ ಮಠಾಧಿಪತಿಯೊಬ್ಬರ ವಿರುದ್ಧ ಅರಣ್ಯ ಕಬಳಿಕೆ ಕೇಸು ಹಾಕುತ್ತಾನೆಂದರೆ ಅದು ಮುಖ್ಯಮಂತ್ರಿಗಾಗಲಿ, ಆತನ ತಂದೆಗಾಗಲಿ ಗೊತ್ತೇ ಆಗದಂತೆ ಹೇಗೆ ತಾನೇ ಜರುಗಲು ಸಾಧ್ಯ?

ಅರಣ್ಯಾಧಿಕಾರಿಯಾಗಿ ಅಣ್ಣಯ್ಯ ಬರುವುದಕ್ಕೂ ಸ್ವಾಮೀಜಿಯ ವಿರುದ್ಧ ಮೊಕದ್ದಮೆ ದಾಖಲಾಗುವುದಕ್ಕೂ ದೇವೇಗೌಡರ 'ಶತ್ರು ಸಂಹಾರ' ಯಜ್ಞಕ್ಕೂ ಸಂಬಂಧವಿಲ್ಲ ಎಂದರೆ ನಂಬುವವರ್ಯಾರು? ಇದನ್ನೇ ಉಪಾಯವಾಗಿ ದೀಕೆ ವಿಧಾನಮಂಡಲದಲ್ಲಿ ಪ್ರಶ್ನಿಸಿದರೆ, ಕಾಂಗ್ರೆಸ್ಸು ಲಜ್ಜೆಗೆಟ್ಟು ಸ್ವಾಮೀಜಿಯ ಭೂಕಬಳಿಕೆಯನ್ನೇ ಬೆಂಬಲಿಸುತ್ತಿದೆ. ಅದಕ್ಕೆ ತಕ್ಕಂತೆ ಕುಮಾರಸ್ವಾಮಿ ಕೂಡ ಕೇಸು ಹಾಕಿದ ಅಧಿಕಾರಿಯನ್ನೇ ಮಟ್ಟ ಹಾಕ್ತೀನಿ ಎಂದು ಠೇಂಕರಿಸುತ್ತಿದ್ದಾರೆಂದರೆ ಏನರ್ಥ?

ಸಾಮಾನ್ಯರು ಭೂಕಬಳಿಕೆ ಮಾಡಿದರೆ ಮಾತ್ರ ತಪ್ಪೆ? ಅದನ್ನೇ ಬಾಲಗಂಗಾಧರನಾಥರು ಮಾಡಿದರೆ ಒಪ್ಪೆ?

ಈ ದೇಶಕ್ಕೊಂದು ಸಂವಿಧಾನವಿದೆ. ಕಾನೂನು ಎಂಬುದನ್ನು ಇವರಿಗೆ ಹೇಳುವವರ್ಯಾರು? [illegible] ಗೊಂದು ಸಾಮಾನ್ಯನಿಗೊಂದು ಕಾನೂನೇನು?




ಅರಣ್ಯಭೂಮಿ ಕದ್ದ ಆರೋಪಿಗಳ ಹೆಸರಲ್ಲಿ ಬಾಲಗಂಗಾಧರ ಸ್ವಾಮಿ ಮೂರನೇ ಆರೋಪಿ




ಸ್ವಾಮಿಗೊಂದು ನ್ಯಾಯ ಸಾಮಾನ್ಯನಿಗೊಂದು ನ್ಯಾಯ?

ಬಹುಶಃ ಗಣಿ ಲಂಚ, ಮಗನ ಪುಂಡಾಟ ಮತ್ತು ನಟಿ ರಾಧಿಕಾ ಸಂಗ ಇತ್ಯಾದಿ ಪ್ರಕರಣಗಳಲ್ಲಿ ಸಿಲುಕಿ ಹೈರಾಣಾಗಿ ಹೋಗಿರದೇ ಇರುತ್ತಿದ್ದರೆ ಕುಮಾರಸ್ವಾಮಿ ಆದಿಚುಂಚನಗಿರಿ ವಿರುದ್ಧ ತನ್ನದೇ ಅಧಿಕಾರಿಗಳು ಹೂಡಿದ ಕೇಸನ್ನು ಸಮರ್ಥಿಸಿಕೊಳ್ಳುತ್ತಿದ್ದರೆ? ಅಥವಾ ಅಪ್ಪ ಮಕ್ಕಳ ನಾಟಕವೇ ಈ ರೀತಿಯೆ?



ಪೇಜಾವರ

ಒಂದಂತೂ ಸತ್ಯ ನೆಲದ ಕಾಯ್ದೆ ಕಾನೂನುಗಳನ್ನು ಬೇರೆಲ್ಲಾ ಸರ್ಕಾರಗಳಿಗಿಂತಲೂ ಯಡ್ಡಿ-ಕುಮಾರ್ ಸರ್ಕಾರವೇ ಅತೀಹೆಚ್ಚು ವಗೆಪಾಟಲಿಗೀಡುಮಾಡಿಬಿಟ್ಟಿದೆ. ಪೇಜಾವರ ಸ್ವಾಮೀಜಿಯೇ ನಿಂತು ಗೂಂಡಾಗಿರಿ ನಡೆಸಿದರೆ, ಅದರ ವಿರುದ್ಧ ಒದೆ ತಿಂದವನೇ ಪೊಲೀಸರಿಗೆ ದೂರು ಕೊಟ್ಟರೆ, 'ಸ್ವಾಮಿಯ ವಿರುದ್ಧವೇ ಕಂಪ್ಲೇಂಟ್ ಕೊಡೋ ಅವನನ್ನು ಬೆಂಡೆತ್ತಿ' ಎಂದು ಉಪಮುಖ್ಯಮಂತ್ರಿ ಯಡ್ಡಿ ಪೊಲೀಸರನ್ನು ಗದರುತ್ತಾನೆ. ರಾಜ್ಯಪಾಲರು ತನಗೆ ಬೋಧಿಸಿದ ಪ್ರಮಾಣವಚನವನ್ನೇ ಮರೆತು ಥೇಟು ಗೂಂಡಾ ಗತ್ತಿನಲ್ಲಿ ಉಪಮುಖ್ಯಮಂತ್ರಿ ಹೂಂಕರಿಸಿದ್ದೇ ತಡ, ಪೇಜಾವರರ ವಿರುದ್ಧ ದೂರು ಕೊಟ್ಟಾತನ ವಿರುದ್ಧ ಏಳೆಂಟು ಖೊಟ್ಟಿ ಕೇಸುಗಳು ದಾಖಲಾಗುತ್ತವೆ.



ಸೀತಾರಾಮ್


ಇನ್ನು ತರುಣ್‌ಸಾಗರ್ ಎಂಬ ಜೈನಮುನಿಯ ನಗ್ನತೆ ವಿರುದ್ಧ ಬರೆದರೆಂಬ ಒಂದೇ ಕಾರಣಕ್ಕೆ ಪತ್ರಕರ್ತ ಸೀತಾರಾಮ್‌ರನ್ನು ಸರ್ಕಾರ ಜೈಲಲ್ಲಿಡುತ್ತದೆ. ಅಷ್ಟಕ್ಕೂ ಸೀತಾರಾಂ ಎತ್ತಿ ಹಿಡಿದದ್ದು ನೆಲದ ಕಾನೂನನ್ನು ತಾನೆ? ಅದಕ್ಕೇಕೆ ಜೈಲು ಶಿಕ್ಷೆ? ಆದಿಚುಂಚನಗಿರಿ ಸ್ವಾಮಿ ಅರಣ್ಯಭೂಮಿ ಕದ್ದರೆ, ಅದನ್ನು ನಿಷ್ಠ ಅಧಿಕಾರಿಯೊಬ್ಬ ತಡೆಯಲೆತ್ನಿಸಿದರೆ ಅದು ತಪ್ಪೆ?

ನೆಲದ ಕಾಯ್ದೆಗೇ ಕವಡೆ ಕಿಮ್ಮತ್ತಿಲ್ಲವೆಂದರೆ, ಸರ್ಕಾರವೇ ನಿಂತು ಸಂವಿಧಾನವನ್ನು ಧಿಕ್ಕರಿಸುತ್ತಿದೆಯೆಂದರೆ ಸರ್ಕಾರವೊಂದನ್ನು ವಜಾ ಮಾಡಲು ರಾಜ್ಯಪಾಲರಿಗೆ ಇದಕ್ಕಿಂತ ಬೇಕೆ? ಸ್ವಾಮಿಗೊಂದು ಕಾನೂನು ಸಾಮಾನ್ಯನಿಗೊಂದು ಕಾನೂನೆ?

ದಾವಣಗೆರೆ ಎ.ಸಿ, ಚನ್ನಗಿರಿ ತಹಶೀಲ್ದಾರ

ಚೋರಗುರು-ಚಾಂಡಾಲ ಶಿಷ್ಯರು

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ದೊಂದರ ಹಳ್ಳಿ ಗ್ರಾಮದ ಜಯಶ್ರೀಗೆ ಸೇರಬೇಕಾದ ತೋಟದಲ್ಲಿನ 2000 ಅಡಿಕೆ ಗಿಡಗಳನ್ನು ಜೆಡಿಎಸ್ ಮುಖಂಡ ಪ್ರವೀಣ್‌ಕುಮಾರ್ ಜೈನ್ ಎಂಬ ಶ್ರೀಮಂತ ಮಾರ್ವಾಡಿಯು ತಾಡುತಗಲೇ ಕತ್ತರಿಸಿ ಹಾಕಿಸಿದ್ದ. ಇವನಿಗೆ ಚನ್ನಗಿರಿ ತಹಶೀಲ್ದಾರ್ ಸಜ್ಜನ ಶೆಟ್ಟರ್ ಹಾಗೂ ಪೊಲೀಸರ ನೇರ ಬೆಂಬಲವಿತ್ತು. ಜೊತೆಗೆ ಈ ಕೃತ್ಯದ ಶಾಸಕ ಮಹಿಮಾ ಪಾಟೀಲರ ಕಳಚಿಕೊಳ್ಳಲಾಗದ ರಾಜಕೀಯ ಸಂಬಂಧದ ಮಹಿಮೆಯೂ ಪ್ರವೀಣಕುಮಾರನ ಮನೆಹಾಳ ಕೆಲಸಕ್ಕೆ ಸಹಕಾರ ನೀಡಿತ್ತು. ಈ ಬಗ್ಗೆ 'ಲಂಕೇಶ್' ಜನವರಿ 10, 2007 ರ ಸಂಚಿಕೆಯಲ್ಲಿ ಸಮಗ್ರವಾಗಿ ವರದಿಯಾಗಿತ್ತು. ಈಗ ಇಂಥದೇ ಇನ್ನೊಂದು ಕೇಸಿನಲ್ಲಿ ಚನ್ನಗಿರಿ ತಹಶೀಲ್ದಾರ್ ಸಜ್ಜನ (ದುರ್ಜನ) ಶೆಟ್ಟರ್ ಮತ್ತು ದಾವಣಗೆರೆ ಉಪವಿಭಾಗಾಧಿಕಾರಿ ಬಿ.ಎಸ್. ಪುರುಷೋತ್ತಮ ಅಕ್ರಮವಾಗಿ ಭೂಮಿಯನ್ನು ಅನುಭವಿಸುತ್ತಿರುವ ಶ್ರೀಮಂತರೊಂದಿಗೆ ಶಾಮೀಲಾಗಿ ಹಕ್ಕಿಪಿಕ್ಕಿ ಜನಾಂಗದ ಎಸ್. ರಮೇಶ್‌ನನ್ನು ಕಾನೂನುಬಾಹಿರವಾಗಿ ಭೂಮಿಯಿಂದ ವಂಚಿಸಿದ್ದಾರೆ. ಕಾನೂನುಬದ್ಧವಾಗಿ ಹೋರಾಡಿ ಗೆದ್ದು ನಂತರದಲ್ಲಿ ಭೂಮಿಯ ಮೇಲೆ ಹಕ್ಕು ಸಾಧಿಸಬೇಕಾದ ಹಂತದಲ್ಲೇ ರಮೇಶನ ಭೂಮಿಯನ್ನೇ 'ಮಾಯ' ಮಾಡಿ 'ಬಿಡಿಸಿಕೊಡಲು ಭೂಮಿಯೇ ಇಲ್ಲ' ಎಂಬ ಹಿಂಬರಹವನ್ನು ನೀಡಿ ರಮೇಶನಿಗೆ ನೇಣಿನ ಕುಣಿಕೆಯನ್ನು ಕೈಗಿತ್ತಿದ್ದಾರೆ. ಇದು ರಮೇಶನೊಬ್ಬನ ಸಮಸ್ಯೆಯಲ್ಲ. ಈಗಾಗಲೇ ಭೂಮಿಯಿಂದ ವಂಚಿತರಾಗಿರುವ ಗೋಪನಾಳು ಗ್ರಾಮದ ಇಡೀ 28 ಹಕ್ಕಿಪಿಕ್ಕಿ ಜನಾಂಗದ ಕುಟುಂಬಗಳವರಿಗೂ ಮುಂದೊಂದು ದಿನ ಇದೇ ರೀತಿ ಒದಗಿಬರಬಹುದಾದ 'ಸರ್ಕಾರಿ ದ್ರೋಹ'ದ ಸಮಸ್ಯೆಯಾಗಿದೆ.



ಎ.ಸಿ. ಬಿ.ಎಸ್. ಪುರುಷೋತ್ತಮ್

ಹಕ್ಕಿಪಿಕ್ಕರ ಭೂಮಿಯ ಸಂಕ್ಷಿಪ್ತ ಹಿನ್ನೆಲೆ

ಗುಜರಾತ್ ಮೂಲದಿಂದ ಬಂದಿರುವ ಹಕ್ಕಿಪಿಕ್ಕಿ ಅಥವಾ ಮೇಲು ಶಿಕಾರಿ ಜನಾಂಗದವರು ಅಲೆಮಾರಿಗಳಾಗಿಯೇ ಬೇಟೆಯಾಡಿ ಬದುಕುವುದನ್ನು ತಡೆಯಲು ಅವರಿಗೊಂದು ನೆಲೆಯನ್ನೊದಗಿಸಲು ಕರ್ನಾಟಕ ಸರ್ಕಾರವು 1960ರಲ್ಲಿ ದಾವಣಗೆರೆ ಜಿಲ್ಲೆಯ ಚನ್ನಗಿರಿ (ಈ ಹಿಂದೆ ಶಿವಮೊಗ್ಗ ಜಿಲ್ಲೆ)ಗೆ ಎಂಟು ಕಿ.ಮೀ. ದೂರದಲ್ಲಿ ಗೋಪನಾಳು ಎಂಬ ನವಗ್ರಾಮವನ್ನು ನಿರ್ಮಿಸಿತು. ಗೋಪನಾಳು ಸರ್ವೆ ನಂಬರ್ 8 ರಲ್ಲಿ 21 ಮಂದಿ ಹಕ್ಕಿಪಿಕ್ಕಿರಿಗೆ ತಲಾ ನಾಲ್ಕು ಎಕರೆ, ಸ.ನಂ. 4 ರಲ್ಲಿ ಇದೇ ಜನಾಂಗದ ಹತ್ತು ಮಂದಿಗೆ ತಲಾ ಮೂರು ಎಕರೆಯಂತೆ ಒಟ್ಟು 114 ಎಕರೆ ಭೂಮಿಯನ್ನು ಮಂಜೂರು ಮಾಡಿದ ಸರ್ಕಾರ 1963ರಲ್ಲಿ ಸಾಗುವಳಿ ಪತ್ರಗಳನ್ನು ನೀಡಿತು. ಈ ಜಮೀನನ್ನು 1992ರವರೆಗೂ ಸಾಗು ಮಾಡಿಕೊಂಡು ಬಂದಿದ್ದ ಹಕ್ಕಿಪಿಕ್ಕರು ಚನ್ನಗಿರಿ ಹಾಗೂ ಅಕ್ಕಪಕ್ಕದ ಶ್ರೀಮಂತರ ಹುನ್ನಾರಕ್ಕೆ ಬಲಿಯಾಗಿ ಒಟ್ಟು 28 ಮಂದಿ ಹಕ್ಕಿಪಿಕ್ಕರು ತಮ್ಮ ಜಮೀನುಗಳನ್ನು ಮೂರು ಕಾಸಿನ ಬೆಲೆಗೆ ಮಾರಿಕೊಂಡು ಇಂದು ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ಜಮೀನನ್ನು ಕೊಂಡವರು ಪಿ.ಟಿ.ಸಿ.ಎಲ್. ಕಾಯ್ದೆ 1978ರ ಅನ್ವಯ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಹಕ್ಕಿಪಿಕ್ಕಿ ಬುಡಕಟ್ಟು ಜನರ ಭೂಮಿಯನ್ನು ಕಬಳಿಸಿದ್ದಾರೆ.


ತಮ್ಮ ತಂದೆ ತಾಯಿಗಳ ತಪ್ಪಿನಿಂದಾಗಿ ಬೀದಿಗೆ ಬಿದ್ದು ನೆಲೆ ಕಳೆದುಕೊಂಡಿರುವ ಜಮೀನಿನ ಮೂಲ ಮಂಜೂರಿದಾರರ ಮಕ್ಕಳಲ್ಲಿ ಕೆಲವರು ಜಮೀನು ಆಕ್ರಮ ಪರಭಾರೆಯ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿ, ಕಾನೂನುಬದ್ಧವಾಗಿ ಗೆದ್ದು ತಮ್ಮ ಜಮೀನುಗಳ ಮೇಲೆ ಪುನಃ ಹಕ್ಕನ್ನು ಸಾಧಿಸಿದ್ದಾರೆ. ಆದರೆ ಈ ಹಕ್ಕುದಾರಿಕೆ ಕೇವಲ ಆದೇಶಗಳಲ್ಲಿ ಮತ್ತು ಸಂಬಂಧಪಟ್ಟ ದಾಖಲೆಗಳಲ್ಲಿ ಸಾಬೀತಾಗಿದೆಯೇ ಹೊರತು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ, ಹಕ್ಕಿಪಿಕ್ಕರ ಜಮೀನುಗಳನ್ನು ಅಕ್ರಮವಾಗಿ ಅನುಭವಿಸುತ್ತಿರುವವರು ಪರೋಕ್ಷವಾಗಿ ಕಾರಣರಾದರೆ, ಶ್ರೀಮಂತರೊಂದಿಗೆ ಚೆನ್ನಾಗಿ ಕುದುರಿಸಿಕೊಂಡಿರುವ ಚನ್ನಗಿರಿ ತಹಶೀಲ್ದಾರ ಸಜ್ಜನ ಶೆಟ್ಟರ್ ಹಾಗೂ ದಾವಣಗೆರೆ ಉಪವಿಭಾಗಾಧಿಕಾರಿ ಪುರುಷೋತ್ತಮ ಪ್ರತ್ಯಕ್ಷವಾಗಿ ಕಾರಣರಾಗಿದ್ದಾರೆ.

ಎಸಿ, ತಹಶೀಲ್ದಾರರ ಉದ್ದೇಶಿತ ಕುತಂತ್ರಗಳು


ಉಪವಿಭಾಗಾಧಿಕಾರಿ ಪುರುಷೋತ್ತಮ ಹಾಗೂ ತಹಶೀಲ್ದಾರ್ ಸಜ್ಜನ ಶೆಟ್ಟರ್ ಈ ಇಬ್ಬರು ಖದೀಮರು ಈಗಾಗಲೇ ಹಕ್ಕಿಪಿಕ್ಕರ ಪರವಾಗಿ ಆದೇಶವಾಗಿರುವ ಕೇಸುಗಳಿಗೆ ಉದ್ದೇಶಪೂರ್ವಕವಾಗಿ ಒಂದು ಕಡೆ ವಿವಾದಿತ ತಿರುವುಗಳನ್ನು ನೀಡುತ್ತಾ, ಇನ್ನೊಂದು ಕಡೆ ಹಕ್ಕಿಪಿಕ್ಕಿ ಜನಾಂಗದವರ ಪರವಾಗಿರುವ ಸರ್ಕಾರಿ/ಕೋರ್ಟು ಆದೇಶಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಿದ್ದಾರೆ. ಇವರ ಕುತಂತ್ರಗಳಿಗೆ ಬಲಿಯಾಗುತ್ತಿರುವ ಹಲವಾರು ಹಕ್ಕಿಪಿಕ್ಕರಲ್ಲಿ ರಮೇಶನ ಜಮೀನು ಕೇಸೊಂದನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡು ನೋಡಿದರೆ ಈ ಇಬ್ಬರು ಚೋರ ಗುರು ಚಾಂಡಾಲ ಶಿಷ್ಯರ ಉದ್ದೇಶಪೂರ್ವಕ ಕುತಂತ್ರ ಹಾಗೂ ಬೇಜವಾಬ್ದಾರಿತನಗಳು ಬಟಾಬಯಲಾಗುತ್ತವೆ.

ರಮೇಶನ ತಂದೆ ಸಕಲೇಶಪುರ

ರಮೇಶನ ತಂದೆ ಸಕಲೇಶಪುರ (ಹಕ್ಕಿಪಿಕ್ಕರ ಹೆಸರುಗಳು ಸಕಲೇಶಪುರ, ಲಿಂಗನಮಕ್ಕಿ, ಮೈಸೂರ್ ಪಾಕ್, ಆಫೀಸು, ಲಾಯರ್, ಡಾಕ್ಟರ್, ಮುಂಗಸಿ –ಹೀಗೆ ಜನನದ ಸಂದರ್ಭಕ್ಕೆ ತಕ್ಕಂತಿವೆ) ಬಿನ್ ಶೆಟವಾಜಿಗೆ ಚನ್ನಗಿರಿ ತಹಶೀಲ್ದಾರ್ ಇವರ ಆದೇಶ ನಂ. ಕೆ.ಡಿ. 56/59- ದಿನಾಂಕ 26.7.1960 ರ ಪ್ರಕಾರ, ಸಾಗುವಳಿ ಚೀಟಿ ಸಂಖ್ಯೆ: 280/14.8.1963 ರಂದು ಗೋಪನಾಳು ಸ.ನಂ:8/4 ರಲ್ಲಿ ನಾಲ್ಕು ಎಕರೆ ಜಮೀನನ್ನು 'ಪರಭಾರೆ ನಿಷೇಧ ಕಾಯ್ದೆ' ಅಡಿಯಲ್ಲಿ ಕೊಡಲಾಗಿತ್ತು. ಸಕಲೇಶಪುರ ತನ್ನ ಜಮೀನನ್ನು 4.12.1992 ರಂದು ಜಿ.ಎನ್. ಶಿವಲಿಂಗಪ್ಪ ಎಂಬಾತನಿಗೆ ಮಾರಾಟ ಮಾಡಿದ್ದ. ಪಿ.ಟಿ.ಸಿ.ಎಲ್. ಕಾಯ್ದೆ 1978 ರ ಪ್ರಕಾರ ಸರ್ಕಾರದಿಂದ ಪೂರ್ವಾನುಮತಿ ಪಡೆಯದೇ ಮಾರಾಟ ಮಾಡುವುದು ಅಸಿಂಧುವಾದ್ದರಿಂದ ಸಕಲೇಶಪುರನ ಮಗನಾದ ಎಸ್. ರಮೇಶ 27.1.2003ರಂದು ದಾವಣಗೆರೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ತನ್ನ ಜಮೀನು ಬಿಡಿಸಿಕೊಡಲು ಅರ್ಜಿಯನ್ನು ಸಲ್ಲಿಸಿ, ಈ ಸಂಬಂಧವಾದ ವಿವಾದಗಳು ನಡೆದು ಕೊನೆಗೆ 26.5.2003 ರಂದು 'ಪ್ರಸ್ತುತ' ಜಮೀನಿನ ಪರಭಾರೆ ಅಸಿಂಧು ಎಂದು ಘೋಷಿಸಿ ಜಮೀನನ್ನು ರಮೇಶನಿಗೆ ಬಿಡಿಸಿಕೊಡಲು ಅಂದಿನ ಉಪವಿಭಾಗಾಧಿಕಾರಿ ಚಿಟ ಸೂರಮಠ ಸ್ಪಷ್ಟವಾಗಿ ಆದೇಶ (ಪಿ.ಟಿ.ಸಿ.ಎಲ್/ಸಿ.ಆರ್/79/02-03)ವನ್ನು ನೀಡಿದ್ದಾರೆ. ಕಾನೂನಿನ ಪ್ರಕಾರವೇ ನಡೆದಿದ್ದರೆ ಆದೇಶವಾದ ಮರು ದಿನವೇ ಜಮೀನನ್ನು ರಮೇಶನ ಸ್ವಾಧೀನಕ್ಕೆ ಬಿಡಿಸಿಕೊಡಬೇಕಿತ್ತು. ಆದರೆ ಹಾಗೆ ನಡೆಯಲಿಲ್ಲ. ಆದೇಶವಾಗಿ ಜಮೀನಿನ ದಾಖಲೆಗಳು ರಮೇಶನ ಹೆಸರಿಗೆ ಬದಲಾಗಿ ಇಂದಿಗೆ ನಾಲ್ಕು ವರ್ಷಗಳಾಗುತ್ತಾ ಬಂದರೂ ಜಮೀನು ಮಾತ್ರ ರಮೇಶನಿಗೆ ಸಿಗುತ್ತಿಲ್ಲ! ಸಜ್ಜನ ಶೆಟ್ಟರ್ ಹಾಗೂ ಪುರುಷೋತ್ತಮನಿಗೆ ಜಮೀನು ಕಬಳಿಸಿರುವ ಶ್ರೀಮಂತರು ಕೊಡುವಷ್ಟು ತಾಂಬೂಲವನ್ನು ಮೂರಡಿ ಎತ್ತರದ ರಮೇಶ ಕೊಡಲು ಸಾಧ್ಯವೇ ಇಲ್ಲ. ಹಾಗಾಗಿಯೇ ವಿಳಂಬ ಮಾಡುವುದು, ವಿವಾದಗಳನ್ನು ಸೃಷ್ಟಿಸುವುದು, ತಮ್ಮದೇ ಆದೇಶಗಳನ್ನು ಉಲ್ಲಂಘಿಸುವುದು ನಿರಂತರವಾಗಿ ನಡೆಯುತ್ತಾ ಬಂದಿದೆ.



ತಹಶೀಲ್ದಾರ್ ಸಜ್ಜನ ಶೆಟ್ಟರ್



ಜಮೀನು ಕಳೆದುಕೊಂಡಿರುವ ರಮೇಶ

ಜೋಡಿಯ ಕುತಂತ್ರಗಳು

ತಹಶೀಲ್ದಾರ್, ಉಪವಿಭಾಗಾಧಿಕಾರಿಗಳಾದ ಈ ಇಬ್ಬರು ಕೆಲವು ಸುಳ್ಳು, ಅನಧಿಕೃತ ವಿಷಯಗಳನ್ನೇ ವಿವಾದಗಳನ್ನಾಗಿ ಸೃಷ್ಟಿಸಿ ತಮಗೆ ಇಚ್ಛೆ ಬಂದಂತೆ ವರ್ತಿಸುತ್ತಿದ್ದಾರೆ. ಈ ಸುಳ್ಳು ಮತ್ತು ಅನಧಿಕೃತ ವಿಷಯಗಳೇನೆಂದರೆ:

1. ಸಕಲೇಶಪುರನಿಗೆ ಸ.ನಂ. 8/1 ರಲ್ಲೇ ಜಮೀನು ಮಂಜೂರಾಗಿತ್ತೆಂಬ ಸುಳ್ಳನ್ನು ಪದೇಪದೇ ದಾಖಲಿಸುತ್ತಿರುವುದು

2. ಜಮೀನು ಮಂಜೂರಾದ ನಂತರ ಸಕಲೇಶಪುರ ಮತ್ತು ಈತನ ಅಣ್ಣ ದೇವಪುರ (ಈತನಿಗೆ ಸಂ.ನಂ. 8/1 ರಲ್ಲಿ ಜಮೀನು ಮಂಜೂರಾಗಿದೆ) ಮೌಖಿಕ ಒಪ್ಪಂದದ ಆಧಾರದ ಮೇಲೆ ತಮ್ಮಿಬ್ಬರ ಜಮೀನನ್ನು ಅದಲುಬದಲು ಮಾಡಿಕೊಂಡು ಸಾಗು ಮಾಡುತ್ತಲೇ ಈ ಇಬ್ಬರೂ ತಮ್ಮ ಜಮೀನನ್ನು ಮಾರಿಕೊಂಡರು. ಮಾರುವಾಗ ಕ್ರಯಪತ್ರದಲ್ಲಿ ಕೈತಪ್ಪಿನಿಂದಾಗಿ ಜಮೀನಿನ ಚೆಕ್ಕುಬಂದಿಗಳೂ ಅದಲುಬದಲಾದವು–ಈ ತಪ್ಪನ್ನೇ ದೊಡ್ಡದು ಮಾಡಿ ರಮೇಶನನ್ನು ವಂಚಿಸಲಾಗುತ್ತಿದೆ.

3. ಸಕಲೇಶಪುರನಿಂದ ಜಮೀನು ಕೊಂಡ ಜಿ.ಎನ್. ಶಿವಲಿಂಗಪ್ಪ ನಂತರದಲ್ಲಿ ಶಾಂತಮ್ಮ ಎಂಬುವವರಿಗೆ ಮಾರಿದ್ದಾನೆ. 2001 ರಲ್ಲಿ ಸಕಲೇಶಪುರನ 8/4 ರ ಜಮೀನನ್ನೇ ಶಾಂತಮ್ಮನ ಹೆಸರಿಗೆ ಹೊಸ ಸರ್ವೆ ನಂಬರ್ 85 ಎಂದು ದುರಸ್ತಿ ಮಾಡಿಕೊಡಲಾಗಿದೆ–ಹೀಗೆ 8/4 ರ ಸಕಲೇಶಪುರನ ಜಮೀನನ್ನು ಹರಾಜು ಮಾಡಲಾಗಿದೆ. ಹೀಗೆ ಉದ್ದೇಶಪೂರ್ವಕವಾಗಿ ಕಂದಾಯ ಇಲಾಖೆಯ ಅಧಿಕಾರಿಗಳೇ ರೂಪಿಸಿದ ಸಂಚುಗಳನ್ನು ಈಗ ಬ್ರಹ್ಮಾಸ್ತ್ರಗಳಂತೆ ಬಳಸಿಕೊಂಡು, ನಾಲ್ಕು ವರ್ಷಗಳ ಹಿಂದೆಯೇ ರಮೇಶನ ಪರವಾಗಿ ಆದೇಶವಾಗಿದ್ದರೂ ಕೂಡಾ ಆದೇಶವನ್ನು ಪಾಲಿಸದೆ ರಮೇಶನನ್ನು ಸತಾಯಿಸುತ್ತಿದ್ದಾರೆ.

ದಿನಾಂಕ 16.11.2006 'ಸ್ಥಳ ತನಿಖಾ ವರದಿ' ಎಂಬ ಹಸಿಸುಳ್ಳಿನ ವರದಿಯನ್ನು ತಹಶೀಲ್ದಾರ ಸಜ್ಜನ ಶೆಟ್ಟರ್ ಹಾಗೂ ರಾಜಸ್ವ ನಿರೀಕ್ಷಕ ಮಲ್ಲೇಶಪ್ಪ ಮತ್ತಿತರರು ಸೇರಿ ತಯಾರಿಸಿದ್ದಾರೆ. ಇವರು ತನಿಖೆಗಾಗಿ ಸ್ಥಳಕ್ಕೆ ಕೂಡಾ ಹೋಗದೆ ಕ್ರಯಪತ್ರದ ಚೆಕ್ಕುಬಂದಿಯನ್ನೇ ಆಧಾರವಾಗಿಟ್ಟುಕೊಂಡು ಸುಳ್ಳು ವರದಿಯನ್ನು ಮಾಡಿ ಸ.ನಂ 8/1 ರಲ್ಲಿನ ಜಮೀನನ್ನು "ಈ ಹಿಂದೆಯೇ ಶಿವಾಜಿ ಬಿನ್ ದೇವಪುರ ಇವರಿಗೆ ಬಿಡಿಸಿಕೊಡಲಾಗಿದೆ. ಹಾಗಾಗಿ ರಮೇಶನಿಗೆ ಜಮೀನು ಇರುವುದಿಲ್ಲ" ಎಂದು ಉಪವಿಭಾಗಾಧಿಕಾರಿ ಪುರುಷೋತ್ತಮನಿಗೆ ವರದಿ ಮಾಡಿಕಳಿಸಿದ್ದಾರೆ. ಪುರುಷೋತ್ತಮ ತಹಶೀಲ್ದಾರನ ಬೋಗಸ್ ವರದಿಗೆ ಮತ್ತಷ್ಟು ಮಸಾಲೆ ಹಚ್ಚಿ 2.2.2007 ರಂದು "ಜಮೀನು ಬಿಡಿಸಿಕೊಡಲು ರಹ ಇರುವುದಿಲ್ಲ" ಎಂದು ರಮೇಶನಿಗೆ ಹಿಂಬರಹ ನೀಡಿದ್ದಾನೆ.

ಚಂದ್ರಶೇಖರ ತೋರಣಘಟ್ಟ

ವಾಸ್ತವವೇನೆಂದರೆ: ರಮೇಶ 8/1 ರ ಜಮೀನನ್ನು ಬಿಡಿಸಿಕೊಡಲು ಎಂದೂ ಕೇಳಿಲ್ಲ, ಕೇಳುತ್ತಿರುವುದು 8/4 ರ ತನ್ನದೇ ಜಮೀನನ್ನು. ಈ ಹಿಂದಿನ ಉಪವಿಭಾಗಾಧಿಕಾರಿ ಬಿಡಿಸಿ ಕೊಡಲು ಆದೇಶ ಮಾಡಿರುವುದೂ ಇದೇ ಜಮೀನನ್ನು. ಹೀಗಿದ್ದರೂ ರಮೇಶನ ತಂದೆ ಸಕಲೇಶಪುರನಿಗೆ ಮಂಜೂರಾಗಿದ್ದು 8/1 ರ ಜಮೀನು ಎಂದು ಹೇಳುತ್ತಿರುವುದೇಕೆಂದರೆ: ಈಗ ರಮೇಶನಿಗೆ ಸೇರಬೇಕಾದ ಜಮೀನಿನಲ್ಲಿ ಹೊಸ ಸ.ನಂ. 85 ನ್ನು ಕೊಟ್ಟು ಶಾಂತಮ್ಮನನ್ನ ಕೂರಿಸಿದ್ದಾರಲ್ಲ–ಆಕೆಯನ್ನು ಉಳಿಸಲಿಕ್ಕಾಗಿ ರಮೇಶ ನನ್ನ ಬೀದಿಗೆಸೆಯುತ್ತಿದ್ದಾರೆ. ರಮೇಶನ ಜಮೀನಿನಲ್ಲಿ ಶಾಂತಮ್ಮ ಇದ್ದಾಳೆಂಬ ಸತ್ಯ ಇಡೀ ಕಂದಾಯ ಇಲಾಖೆಗೆ ಗೊತ್ತಿದ್ದರೂ 'ಜಮೀನು ಬಿಡಿಸಿಕೊಡಲು ರಹ ಇರುವುದಿಲ್ಲ'ವೆಂಬ ಹಿಂಬರಹ ನೀಡುತ್ತಾರೆಂದರೆ ತಮ್ಮ ಲಂಚಕೋರತನವನ್ನು ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿ ಬಹಿರಂಗವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆಂದೇ ಅರ್ಥ.

ಕುತೋದ್ಯವೆಂದರೆ ಈ ರೀತಿ ತಲೆ ಕೆಟ್ಟ ಹಿಂಬರಹವನ್ನು ನೀಡಿರುವ ಇದೇ ಪುರುಷೋತ್ತಮ, ದಿನಾಂಕ 1.12.2006 ರಂದು ತಹಶೀಲ್ದಾರ ಸಜ್ಜನ ಶೆಟ್ಟರಿಗೆ ನೀಡಿರುವ ಆದೇಶದಲ್ಲಿ ಜಮೀನು ಲಭ್ಯವಿಲ್ಲ ಎಂದು ವರದಿ ಮಾಡುವುದು ಸರಿಯಲ್ಲ.... 8/4 ಅಥವಾ ಹೊಸ ಸ.ನಂ: 85 ರಲ್ಲಿ ಯಾರೇ ಇದ್ದರೂ ಬಿಡಿಸಿಕೊಟ್ಟು ವರದಿ ಮಾಡುವುದು..... ಜಮೀನು ಬಿಡಿಸಿಕೊಡಲು ವಿನಾಕಾರಣ ಅಡ್ಡಿಪಡಿಸುತ್ತಿರುವ ಗ್ರಾಮ ಲೆಕ್ಕಾಧಿಕಾರಿ ಹಾಗೂ ರಾಜಸ್ವ ನಿರೀಕ್ಷಕರ ಮೇಲೆ ಸಿಸಿಎ ಕ್ರಮಕೈಗೊಳ್ಳಲು ಆರೋಪ ಪಟ್ಟಿ ತಯಾರಿಸಿ ಕಳಿಸುವಂತೆ ತಾಕೀತು ಮಾಡಿದ್ದ. ಆದರೆ ಈಗ ಈತ ತನ್ನದೇ ಆದೇಶವನ್ನು ತಿರಸ್ಕರಿಸಿ ಈಗ ರಮೇಶನ ವಿರುದ್ಧವಾಗಿ ನಿಲುವು ತೆಗೆದುಕೊಳ್ಳುತ್ತಾನೆಂದರೆ ಪುರುಷೋತ್ತಮ ತನ್ನ ಬಾಯಿ ತುಂಬ ಹೇಸಿಗೆಯನ್ನು ಮುಕ್ಕಿ ಅದನ್ನೇ ಅಮೃತದಂತೆ ಸವಿಯುತ್ತಿದ್ದಾನೆಂದು ಯಾರಿಗಾದರೂ ಅರ್ಥವಾಗುತ್ತದೆ.

ಪುರುಷೋತ್ತಮನ ಹೊಸ ಸಂಶೋಧನ!

ದಾಖಲೆಗಳನ್ನು ತಿರುಚುವುದು ಒಂದು ಕತೆಯಾದರೆ

ಹಕ್ಕಿಪಿಕ್ಕರ ಭೂಮಿ ಕಬಳಿಸಿರುವುದು ಯಾರ್‍ಯಾರು?

ಗೋಪನಾಳು ಹಕ್ಕಿಪಿಕ್ಕರಿಗೆ ಒಟ್ಟು ಮಂಜೂರಾಗಿರುವ ಭೂಮಿ 114 ಎಕರೆ. ಚನ್ನಗಿರಿ ಹತ್ತಿರದ ಪಡ್ನಾಳು ಬಸ್ತಿಹಟ್ಟಿಯ ಶಾಂತರಾಜನೆಂಬುವನು ಹಕ್ಕಿಪಿಕ್ಕರ 53 ಎಕರೆ ಜಮೀನನ್ನು ಕಬಳಿಸಿದ್ದಾನೆ. ಇಂಥದೇ ಸರಿಸುಮಾರು 300 ಎಕರೆ ಭೂಮಿಯನ್ನು ಹೊಂದಿರುವ ಇವನು ಎಂಥಹ ಕಿಲಾಡಿ ಎಂದರೆ ತಾನು ಕೊಂಡ ಹಕ್ಕಿಪಿಕ್ಕರ ಭೂಮಿಯಲ್ಲಿ ತನಗೆ ಬೆಂಬಲ ಹೇಳುವ ನಾಲ್ಕೈದು ಮಂದಿ ಹಕ್ಕಿಪಿಕ್ಕರನ್ನು ಕೂರಿಸಿದ್ದಾನೆ. ಈಗ ಹಕ್ಕಿಪಿಕ್ಕರೇ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಂತು ಬಡಿದಾಡಿಕೊಳ್ಳುವ ಪರಿಸ್ಥಿತಿಯನ್ನು ಇವನು ಸೃಷ್ಟಿಸಿದ್ದಾನೆ.

ಶಿವಾನಂದಪ್ಪನೆಂಬ ವಕೀಲ 14 ಎಕರೆ, ಚನ್ನಗಿರಿಯ ಗಣೇಶ್ ಜುವೆಲರಿಯ ಮಾರ್ವಾಡಿ ಮತ್ತು ಗೋಪನಾಳಿನ ಅಕ್ಕಪಕ್ಕದ ಪುಢಾರಿಗಳು ಸೇರಿ ಹಕ್ಕಿಪಿಕ್ಕರ ಭೂಮಿಯನ್ನು ಕಬಳಿಸಿ ಅವರನ್ನು ಬೀದಿಗೆ ತಳ್ಳಿದ್ದಾರೆ.

ಯಾದಗಿರಿ-ಶಹಾಪುರ ಇವುಗಳಲ್ಲಿ ಯಾವುದು ಜಿಲ್ಲೆ?

ಗುಲ್ಬರ್ಗಾ

'ಗುಬ್ಬದಂಥ ರಾಗ ಹಾಡಿ ಅದೆಂಥದೋ ಪದ ಾಡಿದರು' ಅನ್ನುವಂತೆ ಬರೀ ಭರವಸೆಗಳ ಮಂತ್ರ ಳನ್ನೇ ಜಪಿಸುತ್ತಿರುವ ಆಡಳಿತಾರೂಢ ಸಮ್ಮಿಶ್ರ ರ್ಕಾರದವರು ಸುಳ್ಳುಗಳನ್ನು ಪೋಣಿಸಿ ಜನತೆಗೆ ಂಗನಾಮ ಹಾಕುವುದರಲ್ಲಿ ನಿಸ್ಸೀಮರು.

ಮುಖ್ಯಮಂತ್ರಿ ಕುಮಾರಸ್ವಾಮಿ ಮೊದಮೊದಲು ್ರತರ ಎಲ್ಲಾ ಬಗೆಯ ಸಾಲಮನ್ನಾ ಮಾಡಲಾಗುವುದು ಂದು ಪಾಲುದಾರ ಪಕ್ಷ ಬಿಜೆಪಿಯನ್ನು ಹಾಗೂ ಣಕಾಸು ಸಚಿವ ಯಡಿಯೂರಪ್ಪನವ ನ್ನು ಸಂಪರ್ಕಿಸದೆ ಅತ್ಯಂತ ವೀರಾವೇಶ ಂದ ಹೇಳಿದ್ದರು. ಆದರೆ ಈಗಿನ ಜೆಟ್ ಮಂಡನೆಯಲ್ಲಿ ಕೋ-ಆಪರೇ ವ್ ಬ್ಯಾಂಕುಗಳಲ್ಲಿನ 25 ಸಾವಿರ ರೆಗಿನ ಸಾಲ ಮಾತ್ರ ಮನ್ನಾ ಮಾಡಲಾಗುವುದು ಂದು ತಿಳಿಸಲಾಗಿದೆ. ಹೀಗೆ ಆಡಿದ್ದೊಂದು ಮಾಡಿದ್ದು ುತ್ತೊಂದು ಎನ್ನುವಂಥ ಸರ್ಕಾರದ ಅನೇಕ ಎಡಬಿಡಂಗಿ ಲಸಗಳನ್ನು, ಹುಸಿ ಭರವಸೆಗಳನ್ನು ಇಲ್ಲಿ ಪಟ್ಟಿ ಾಡುತ್ತಾ ಹೋಗಬಹುದು.

ಅದೇರೀತಿಯಾಗಿ ಸುಮಾರು ಹತ್ತು ವರ್ಷಗಳಿಂದ ನೆಗುದಿಗೆ ಬಿದ್ದಿದ್ದ ಗುಲ್ಬರ್ಗ, ಬೆಳಗಾವಿ, ಕೋಲಾರ ಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ವಿಭಜಿಸಿ ಾಲ್ಕು ಹೊಸ ಜಿಲ್ಲೆಗಳನ್ನು ಚಿಸಲು ಕೋ-ಜಾ ಸರ್ಕಾರ ದೀಗ ಮುಂದಾಗಿದೆ. ಈ ಂದೆ ಬಂಗಾರಪ್ಪ ುಖ್ಯಮಂತ್ರಿಯಾಗಿದ್ದಾಗಲೇ ಈ ಜಿಲ್ಲಾ ಪುನರ್ ಂಗಡಣೆಯ ಮಾತು ್ರಸ್ತಾಪಕ್ಕೆ ಬಂದಿತ್ತು. ೊಕ್ಕಸದಲ್ಲಿ ಹಣ ಇಲ್ಲ ಎಂಬ ಪದಿಂದ ಅದನ್ನು ುಂದೂಡಿಕೊಂಡು ರಲಾಗಿತ್ತು. ಆದರೆ ುಖ್ಯಮಂತ್ರಿ ಜೆ.ಎಚ್. ಟೇಲರಿಗೆ



ಶರಣಬಸಪ್ಪ ದರ್ಶನಾಪುರ

ಾವಣಗೆರೆ'ಯನ್ನು ಜಿಲ್ಲೆಯನ್ನಾಗಿ ಮಾಡಬೇಕಾಗಿತ್ತು, ನ್ನ ಹೆಂಡತಿಯ ತವರೂರು. ಅಲ್ಲದೆ ತಮ್ಮ ಸರ್ಕಾರದ ಾಧನೆ ಸಮಾವೇಶದಂದು ಅಲ್ಲಿನ ಜನತೆಗೆ ಮಾತು ೊಟ್ಟಿದ್ದರಿಂದ) ಹೀಗಾಗಿ ಯುಗಾದಿಯ ಉಡುಗೊರೆ ಯಾಗಿ ರಾಜ್ಯದಲ್ಲಿ ದಾವಣಗೆರೆ, ಚಾಮರಾಜನಗರ, ದಗ, ಕೊಪ್ಪಳ, ಬಾಗಲಕೋಟೆ, ಹಾವೇರಿ, ಉಡುಪಿ ಂಬ ಏಳು ಹೊಸ ಜಿಲ್ಲೆಗಳನ್ನು ಘೋಷಿಸಿದ್ದರು. ದೇ ವೇಳೆಯಲ್ಲಿ ಗುಲ್ಬರ್ಗ ಹಾಗೂ ಬೆಳಗಾವಿ ಜನತೆಗೆ ತೃಪ್ತಿಯನ್ನುಂಟು ಮಾಡಿದ್ದರು.

ಇದೇನೇ ಇದ್ದರೂ, ಸಾರ್ವಜನಿಕರ ಹಾಗೂ ಡಳಿತಾತ್ಮಕ ಅನುಕೂಲಕ್ಕಾಗಿ ಜಿಲ್ಲೆ ಹಾಗೂ ತಾಲ್ಲೂಕು ಳ ಪುನರ್‌ವಿಂಗಡಣೆ ಎಂದೆಂದಿಗಿಂತಲೂ ಇಂದು ೀರಾ ಅಗತ್ಯವಾಗಿದೆ. ಅಂದಂತೆ ಗುಲ್ಬರ್ಗ ಜಿಲ್ಲೆಯ ್ಲಿಯೂ ಹೊಸ ಜಿಲ್ಲೆಗಾಗಿ ಶಹಾಪುರ-ಯಾದಗಿರಿ ಾಲ್ಲೂಕುಗಳ ಮಧ್ಯೆ ಬಲಾಬಲದ ಪ್ರದರ್ಶನ ಹಾಗೂ ್ರತ್ಯೇಕ ಜಿಲ್ಲೆಯ ಕೂಗು ಮಾರ್ದನಿಸತೊಡಗಿದೆ. ಜಿಲ್ಲಾ ುನರ್ ವಿಂಗಡಣೆಯ ಪ್ರಸ್ತಾಪದಿಂದಾಗಿ, ಪರಸ್ಪರ ಂದಕ್ಕೊಂದು ಹತ್ತಿರದಂತಿರುವ ಈ ಎರಡೂ ತಾಲ್ಲೂಕಿನ ನ ತಮ್ಮದು ಜಿಲ್ಲೆಯಾಗಲಿ, ನಮ್ಮದು ಜಿಲ್ಲೆಯಾಗಲಿ ಂದು ಒತ್ತಾಯಿಸತೊಡಗಿದ್ದಾರೆ.

"ಕುರುಡಿಯ ಹಾದರಕ್ಕೆ ಊರೆಲ್ಲಾ ನಿದ್ದೆಗೇಡು' ಎನ್ನುವಂತೆ ಜೆಡಿಎಸ್ -ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಮಾತು ಕೇಳಿ ಈ ಎರಡೂ ತಾಲ್ಲೂಕುಗಳ ಜನ ತೀವ್ರ ಕಳವಳಕ್ಕೀಡಾಗಿದ್ದಾರೆ. ಒಂದು ವೇಳೆ ವಿ.ಬಾಲಸುಬ್ರಮಣಿಯನ್ ನೇತೃತ್ವದ ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸುವುದಾದರೆ ಅವರ ಗಮನದಲ್ಲಿ ಈ ಕೆಳಗಿನ ಅಂಶಗಳಿರಬೇಕಾಗಿದೆ.


ಸಮಿತಿಗಳ ವರದಿ

ಹೊಸ ಜಿಲ್ಲೆ ರಚನೆಗೆ ಸಂಬಂಧಿಸಿದಂತೆ ಹಿಂದೆ ರಚಿತವಾಗಿದ್ದ ವಾಸುದೇವರಾವ್ ಸಮಿತಿ, ಸುರಪುರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿತ್ತು. ಸುರಪುರ ಕೇಂದ್ರ ಸ್ಥಾನದಲ್ಲಿರುವುದು ವಾಸುದೇವರಾವ್ ಸಮಿತಿಯ ಶಿಫಾರಸ್ಸಿನ ಪ್ರಮುಖ point ಆಗಿತ್ತು. 1985 ರಲ್ಲಿ ರಚಿತವಾದ ಹುಂಡೇಕಾರ್ ಸಮಿತಿ ಹಿಂದಿನ ಸಮಿತಿಯನ್ನು ಪುನರ್ ಪರಿಶೀಲಿಸಿ, ಸುರಪುರದ ಬದಲಾಗಿ ಯಾದಗಿರಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಹೇಳಿತ್ತು. ಯಾದಗಿರಿಯಲ್ಲಿ 'ರೈಲ್ವೆ ಸ್ಟೇಷನ್' ಇರುವುದೇ ಹುಂಡೇಕಾರ್ ಸಮಿತಿಯ ಶಿಫಾರಸ್ಸಿನ ಮುಖ್ಯ ಅಂಶವಾಗಿತ್ತು.

1987 ರಲ್ಲಿ ರಚಿತವಾದ ಗದ್ದಿಗೌಡರ ಸಮಿತಿ ಹಿಂದಿನ ಎರಡೂ ಸಮಿತಿಗಳ ವರದಿಗಳನ್ನು ಗಮನದಲ್ಲಿಟ್ಟುಕೊಂಡು, ಗುಲ್ಬರ್ಗಾ ಜಿಲ್ಲೆ ರಾಜ್ಯದಲ್ಲಿಯೇ ಎರಡನೇ ಅತಿದೊಡ್ಡ ಜಿಲ್ಲೆಯಾಗಿದೆ. ವಿಭಜನೆ ತುಂಬಾ ಅಗತ್ಯವಾಗಿದೆ ಎಂದು ಹೇಳಿತ್ತು. ಆದರೆ ಹೊಸ ಜಿಲ್ಲಾಕೇಂದ್ರವನ್ನಾಗಿ ಯಾವುದನ್ನು ಘೋಷಿಸಬೇಕೆಂಬುದನ್ನು ಹೇಳಲಿಲ್ಲ! ಸುಮಾರು 25 ವರ್ಷದ ಅಂಕಿ-ಅಂಶಗಳನ್ನು ಆಧರಿಸಿ ಜಿಲ್ಲಾ ವಿಂಗಡಣೆ ಮಾಡುವುದು ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಾಪಕವಾಗಿ ಕೇಳಿಬಂದಿರುವುದರಿಂದ ಇದೀಗ ಹೊಸ ಸಮಿತಿ ನೇಮಿಸಲಾಗಿದೆ.

ಯಾದಗಿರಿಯವರ ವಾದ

ಶೈಕ್ಷಣಿಕ ಜಿಲ್ಲೆ, ಜೆಸ್ಕಾಂ ವಿಭಾಗೀಯ ಕಚೇರಿ, ಆಯುಕ್ತರ ಕಾರ್ಯಾಲಯ, ಲೋಕೋಪಯೋಗಿ ಇಲಾಖೆ, ಜೆ.ಪಿ.ಇಂಜಿನಿಯರಿಂಗ್ ವಿಭಾಗ ಕಚೇರಿ, 100 ಹಾಸಿಗೆ ಆಸ್ಪತ್ರೆ, ಸಾರಿಗೆ ಸಂಸ್ಥೆಯ ವಿಭಾಗೀಯ ಕಚೇರಿ, ರೈಲ್ವೆ ಸೌಲಭ್ಯ- ಹೀಗೆ ಹಲವು ಸಿದ್ಧ ಸೌಲಭ್ಯಗಳಿರುವುದರಿಂದ, ಹಿಂದಿನ ಎರಡು ಸಮಿತಿಗಳು ಯಾದಗಿರಿಯನ್ನೇ ಜಿಲ್ಲೆಯಾಗಿಸಲು ಶಿಫಾರಸ್ಸು ಮಾಡಿದ್ದರಿಂದ ಅದನ್ನು ಜಾರಿಗೊಳಿಸಬೇಕೆಂಬುದು ಇಲ್ಲಿಯ ಜನತೆಯ ವಾದ. ಹೀಗಾಗಿ ವಿ. ಬಾಲಸುಬ್ರಮಣಿಯನ್ ಅವರ ನೇತೃತ್ವದ ನೂತನ ಸಮಿತಿ ಅಸಗತ್ಯ ಎಂದು ಹೇಳುತ್ತಿದ್ದಾರೆ. ಮೇಲಾಗಿ ಸರ್ಕಾರ ಬದಲಾದಾಗೊಮ್ಮೆ ಸಮಿತಿ ಮೇಲೆ ಸಮಿತಿ ರಚಿಸಿ ಕಾಲಹರಣ ಮಾಡುವುದು ಹಾಗೂ ಜನರ ಭಾವನೆಗಳನ್ನು ಕೆರಳಿಸುವುದು ಸರಿಯಲ್ಲ, ಆಡಳಿತಾತ್ಮಕವಾಗಿ ಪ್ರಗತಿಯಾಗಬೇಕಿದ್ದರೆ ಯಾದಗಿರಿಯನ್ನೇ ಜಿಲ್ಲಾಕೇಂದ್ರವನ್ನಾಗಿ ಘೋಷಿಸಬೇಕೆಂಬುದು ಯಾದಗಿರಿ ತಾಲ್ಲೂಕಿನವರ ವಾದ.



ಮಲ್ಲಿಕಾರ್ಜುನ ಖರ್ಗೆ


ಶಹಾಪುರದವರ ವಾದ

ಬೀದರ್-ಶ್ರೀರಂಗಪಟ್ಟಣದ ರಾಜ್ಯ ಹೆದ್ದಾರಿಯಲ್ಲಿ ಬರುವ ಶಹಾಪುರವು ಕೃಷ್ಣಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುತ್ತಿದ್ದು ಅಂತರ್ಜಲ ಹೆಚ್ಚಿದೆ. ಕೃಷಿ ಕಾಲೇಜು, ಹೆಚ್ಚಿನ ಪ್ರಮಾಣದ ಕಂದಾಯ ಸಂಗ್ರಹ, ರಸ್ತೆ ಸಂಚಾರದ ದಟ್ಟಣೆ ಉತ್ತಮ ಸಾರಿಗೆ ವ್ಯವಸ್ಥೆ ಐತಿಹಾಸಿಕ ಹಿನ್ನೆಲೆ, ಪ್ರತಿ ದಿನಕ್ಕೆ ಶಹಾಪುರ ಬಸ್ ಘಟಕದಿಂದ 7-8 ಲಕ್ಷ ರೂ ಸಂಗ್ರಹ, ಭೀಮರಾಯನಗುಡಿಯಲ್ಲಿರುವ ಸುಸಜ್ಜಿತ ಭವ್ಯಕಟ್ಟಡ, ಇವೆಲ್ಲಕ್ಕೂ ಮೇಲಾಗಿ ಕೇಂದ್ರ ಸ್ಥಾನದಲ್ಲಿರುವುದರಿಂದ ಜನರ ಅನುಕೂಲಕ್ಕಾಗಿ ಶಹಾಪುರವನ್ನೇ ಜಿಲ್ಲಾ ಕೇಂದ್ರ ಮಾಡಬೇಕೆಂಬುದು ಇಲ್ಲಿನ ಜನರ ವಾದ. ಅಂತೆಯೇ ನೂತನ ಸಮಿತಿಯನ್ನು ಮುಕ್ತವಾಗಿ ಸ್ವಾಗತಿಸಿದ್ದಾರೆ.

ಸುಮಾರು 25 ವರ್ಷಗಳ ಹಿಂದಿನ ಸಮಿತಿಗಳ ಆಧಾರದನ್ವಯ ಯಾದಗಿರಿಯನ್ನು ಜಿಲ್ಲೆಯನ್ನಾಗಿಸಿದರೆ ಸುರಪುರದಿಂದ 60 ಕಿ.ಮೀ, ಜೇವರ್ಗಿಯಿಂದ 80 ಕಿ.ಮೀ, ಹುಣಸಗಿಯ ಡ್ಯಾಮ್ ಕೆಂಭಾವಿಯವರೆಗೆ 60 ರಿಂದ 80 ಕಿ.ಮೀ ದೂರ ಹೋಗಬೇಕಾಗುತ್ತದೆ. ಆದರೆ ಶಹಾಪುರ ಕೇಂದ್ರಸ್ಥಾನದಲ್ಲಿರುವುದರಿಂದ ಎಲ್ಲಾ ತಾಲೂಕುಗಳು 30 ರಿಂದ 40 ಕಿ.ಮೀ ಅಂತರದಲ್ಲಿ ಬರುತ್ತದೆ. ಶಹಾಪುರವೇ ಯೋಗ್ಯ ಹಾಗೂ ಸೂಕ್ತ ಸ್ಥಳ. ಹೊಸ ಸಮಿತಿ ಸಮಗ್ರ ಅಧ್ಯಯನ ಮಾಡಿ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿರುವ ಶಹಾಪುರವನ್ನು ಜಿಲ್ಲಾ ಕೇಂದ್ರವೆಂದು ಘೋಷಿಸಬೇಕೆಂಬುದು ಶಹಾಪುರ ತಾಲ್ಲೂಕಿನವರ ವಾದ.

ನೂತನ ಸಮಿತಿ ಮಾಡಬೇಕಾದುದೇನು?

ಇಷ್ಟರಲ್ಲಿಯೇ ಈ ಭಾಗಕ್ಕೆ ಆಗಮಿಸಲಿರುವ ಈ ನೂತನ ಸಮಿತಿ ಈ ಎರಡೂ ತಾಲ್ಲೂಕಿನವರ ವಾದ-ವಿವಾದವನ್ನು ಆಲಿಸಿ ಖುದ್ದಾಗಿ ಸಮೀಕ್ಷಿಸಿ ಜನಾಭಿಪ್ರಾಯ ಸಂಗ್ರಹಿಸಬೇಕಾಗಿದೆ. ಜಿಲ್ಲಾ ಪುನರ್‌ವಿಂಗಡಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ನೂತನ ಜಿಲ್ಲೆಗೆ ಸೇರಲಿರುವ ಇತರ ತಾಲ್ಲೂಕಿನ ಜನತೆಯೂ ಒಪ್ಪುವಂತಿರಬೇಕು ಎಂಬುದನ್ನು ಸಮಿತಿ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.



ಮಾಲಕರೆಡ್ಡಿ

ರಾಜಕೀಯ ದೊಂಬರಾಟ

ಈ ಭಾಗದ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆ ಹಾಗೂ ಒಬ್ಬರಿಗೊಬ್ಬರು ಕಾಲೆಳೆಯುವ ಆಟದಲ್ಲಿ ಮಗ್ನರಾಗಿರುವುದರಿಂದ ಜಿಲ್ಲಾ ಪುನರ್ ವಿಂಗಡಣೆ ಎಂಬುದು ಮರೀಚಿಕೆಯಾಗಿ ಹೋಗಿದೆ ಇಲ್ಲಿನ ಜನತೆಗೆ. ಒಟ್ಟು 10 ತಾಲ್ಲೂಕು ಹಾಗೂ 13 ವಿಧಾನಸಭಾ ಕ್ಷೇತ್ರಗಳಿರುವ ಗುಲ್ಬರ್ಗ ಜಿಲ್ಲೆ ಎಂದೋ ವಿಭಜನೆಯಾಗಬೇಕಿತ್ತು.

ಅಂದಿನಿಂದ ಇಂದಿನವರೆಗೆ ಈ ವಿವಾದವನ್ನು ಜೀವಂತವಾಗಿಟ್ಟು ಪ್ರತಿ ಚುನಾವಣೆ ಸಂದರ್ಭದಲ್ಲಿ ಈ ಎರಡೂ ತಾಲ್ಲೂಕಿನ ಪ್ರತಿಯೊಂದು ಪಕ್ಷದ ಮುಖಂಡರು ಜನತೆಗೆ ಜಿಲ್ಲೆ ವಿಂಗಡಿಸುವ ಭರವಸೆ ನೀಡಿ ತುಟಿಗೆ ತುಪ್ಪ ಸವರುತ್ತಿದ್ದಾರೆ. ಹಾಗೆ ನೋಡಿದರೆ ಇಲ್ಲಿನ ರಾಜಕಾರಣಿಗಳಿಗೆ ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸುವುದು ಬೇಕಾಗಿಲ್ಲ.

ಕೆಪಿಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಚಿವ ಮಾಲಕರೆಡ್ಡಿ ಯಾದಗಿರಿಯನ್ನೇ ಜಿಲ್ಲೆಯಾಗಿಸಬೇಕೆಂಬ ಉದ್ದೇಶದಿಂದ ಹಿಂಬಾಗಿಲಿನಿಂದ ಸರ್ಕಾರದ ಪ್ರಮುಖ ಕಚೇರಿಗಳನ್ನು ತಂದಿದ್ದಾರೆ. ಕೃಷಿ ಮಾರುಕಟ್ಟೆ ಸಚಿವ ಶರಣಬಸಪ್ಪ ದರ್ಶನಾಪುರ ಮಾತ್ರ ಸರ್ಕಾರದ ಮಟ್ಟದಲ್ಲಿ ಅದನ್ನು ತಡೆಹಿಡಿದು ಶಹಾಪುರ ಜನತೆಗೆ ಉಪಕಾರ ಮಾಡಿದಂತೆ ವರ್ತಿಸುತ್ತಿದ್ದಾರೆ.

ಈ ಹಿಂದೆ ಜೆ.ಎಚ್. ಪಟೇಲ್ ಸರ್ಕಾರದಲ್ಲಿ ಇನ್ನೇನು ಯಾದಗಿರಿ ಜಿಲ್ಲಾ ಕೇಂದ್ರವೆಂದು ಘೋಷಣೆಯಾಯಿತು ಎನ್ನುವಷ್ಟರಲ್ಲಿ ಪಟೇಲರ ಮಾನಸಪುತ್ರನೆಂದೇ ಗುರುತಿಸಲ್ಪಡುತ್ತಿದ್ದ ದರ್ಶನಾಪುರ ಅದನ್ನು ತಡೆಹಿಡಿದರು. ಆದರೆ ಕಚೇರಿಗಳು ಆರಂಭವಾದರೆ ಸುಲಭವಾಗಿ ಜಿಲ್ಲಾಕೇಂದ್ರವಾಗುತ್ತದೆ ಎಂಬ ದೂರದೃಷ್ಟಿಯಿಂದ ಮಲಿಕಾರ್ಜುನ ಖರ್ಗೆಯವರು ತಮ್ಮ ಅಧಿಕಾರಾವಧಿಯಲ್ಲಿ ವಿವಿಧ ಕಚೇರಿಗಳನ್ನು ಆರಂಭಿಸಿ, ಇಂದಲ್ಲಾ ನಾಳೆ ಯಾದಗಿರಿಯೇ ಜಿಲ್ಲೆಯಾಗುತ್ತದೆ, ಇನ್ನೇನು ಆ ದಿನಗಳಿಗಾಗಿ ಕಾಯಬೇಕಾಗಿದೆ ಎನ್ನುವಂತಿದ್ದಾಗ ಅದಕ್ಕೆ ಪ್ರತಿ ಅಸ್ತ್ರವೆಂಬಂತೆ ನೂತನ ಸಮಿತಿಯನ್ನು ದರ್ಶನಾಪುರ ಇದೀಗ ಅಡ್ಡ ತಂದು ಯಾದಗಿರಿಗೆ ಅಡ್ಡಲಾಗಿ ನಿಂತಿದ್ದಾರೆ.

ತಮ್ಮ ರಾಜಕೀಯ ಭವಿಷ್ಯಕ್ಕಾಗಿಯಾದರೂ ದರ್ಶನಾಪುರ ಶಹಾಪುರವನ್ನು ಜಿಲ್ಲಾ ಕೇಂದ್ರವನ್ನಾಗಿಸಬೇಕಾಗಿದೆ. ಕ್ಷೇತ್ರವಾರು ಮರುವಿಂಗಡಣೆಯಾಗಿ 'ಗುರುಮಠಕಲ್' ಮೀಸಲು ಕ್ಷೇತ್ರ ತನ್ನ ಕೈ ತಪ್ಪುವುದರಿಂದ ಖರ್ಗೆಯವರು ಸುಮ್ಮನಿರಬೇಕಾಗಿದೆ.

ಹಾಗೆ ನೋಡಿದರೆ ಶಹಾಪುರ ಹಾಗೂ ಯಾದಗಿರಿ ಇವೆರಡನ್ನೂ ಜಿಲ್ಲೆಯನ್ನಾಗಿ ಮಾಡಿದರೆ ಉತ್ತಮ. ಶಹಾಪುರ-ಸುರಪುರ-ಜೇವರ್ಗಿ ತಾಲ್ಲೂಕುಗಳನ್ನೊಳಗೊಂಡಂತೆ ಒಂದು ಜಿಲ್ಲೆ, ಯಾದಗಿರಿ, ಸೇಡಂ, ಚಿಂಚೋಳಿ ಈ ಮೂರು ತಾಲ್ಲೂಕುಗಳನ್ನು ಸೇರಿಸಿ ಮತ್ತೊಂದು ಜಿಲ್ಲೆ ಎಂದು ಘೋಷಿಸಿದರೆ ಎಲ್ಲಾ ರೀತಿಯಿಂದಲೂ ಸರ್ಕಾರಕ್ಕೆ ಸುಗಮವಾದೀತು.

ಹುಬ್ಬಳ್ಳಿ-ಹಾವೇರಿಯಂತೆ, ಗದಗ-ಕೊಪ್ಪಳದಂತೆ ಅತೀ ಸಮೀಪವಿರುವ ಸ್ಥಳಗಳನ್ನೇ ಜಿಲ್ಲಾಕೇಂದ್ರಗಳೆಂದು ಘೋಷಿಸಿರುವಾಗ ಅಷ್ಟೇ ಅಂತರ ಹಾಗೂ ಯೋಗ್ಯವಾಗಿರುವ ಶಹಾಪುರ. ಯಾದಗಿರಿ ಎರಡನ್ನೂ ಜಿಲ್ಲಾಕೇಂದ್ರವೆಂದು ಯಾಕೆ ಘೋಷಿಸಬಾರದು? ಜಿಲ್ಲಾ ವಿಭಜನೆಯಂಥ ಜೇನುಗೂಡಿಗೆ ಕೈಹಾಕಿರುವ ಸರ್ಕಾರ ಏನು ಮಾಡಬಹುದು ಎಂಬುದು ಕಾದು ನೋಡಬೇಕಾಗಿದೆ.

-ಶಿವರಂಜನ್ ಸತ್ಯಂಪೇಟೆ

.2.06 ರಂದು ರಮೇಶನಿಗೆ ನೀಡಿರುವ ಹಿಂಬರಹದಲ್ಲಿ ುರುಷೋತ್ತಮ "ಗೋಪನಾಳು ಸರ್ವೆ ನಂಬರ್ 8/ ರ ಒಂದೇ ಜಮೀನನ್ನು ದೇವಪುರ ಹಾಗೂ ಕಲೇಶಪುರ ಈ ಇಬ್ಬರಿಗೂ ಎರಡು ಬಾರಿ ುಂಜೂರು ಮಾಡಲಾಗಿದೆ" ಎಂಬ ಹೊಸ ಸಂಶೋಧನೆ ುನ್ನು ಮಾಡಿದ್ದಾನೆ! ಈಗಲೂ ರಮೇಶನ ಹೆಸರಿಗೆ /4 ರ ಜಮೀನಿನ ದಾಖಲೆಗಳು ಚಾಲ್ತಿಯಲ್ಲಿರುವುದನ್ನು ೋಡಲು ಈತನ ಕಣ್ಣು ಕುರುಡಾಗಿದ್ದರೆ. ಉನ್ನತ ರ್ಕಾರಿ ಅಧಿಕಾರಿಯಾಗಿ ಸುಳ್ಳುಗಳನ್ನೇ ಮಾಹಿತಿಗಳ ೂಪದಲ್ಲಿ ಪ್ರದರ್ಶಿಸಿ ಆ ಮೂಲಕ ದೀಲಿಗಿಳಿಯು ್ರದು ಬಹಳ ದಿನ ನಡೆಯುವುದಿಲ್ಲ, ನಾನು ಎಚ್. ಂಜನೇಯ (ಭರಮಸಾಗರ ಕ್ಷೇತ್ರದ ಶಾಸಕ) ್ಯಾಂಡಿಡೇಟ್ ಎಂದು ಹೇಳಿಕೊಳ್ಳುವ ಉಪವಿಭಾಗಾಧಿ ಾರಿ ಸ್ವತಃ ದಲಿತನಾಗಿದ್ದು, ಜಮೀನು ಕಳೆದುಕೊಂಡಿರುವ ಲಿತರಿಗೆ ಕಾನೂನುಬದ್ಧವಾಗಿ ಬೆಂಬಲಿಸುವುದನ್ನು ುಟ್ಟು ಮೇಲ್ಜಾತಿಯವರ ಎಂಜಲಿಗೆ ನಾಲಿಗೆ ಚಾಚಿ ದಲಿತರ ಬದುಕಿಗೆ ಮಾರಕವಾಗುತ್ತಿರುವುದನ್ನು ಶಾಸಕ ಎಚ್. ಆಂಜನೇಯ ತಡೆಯಲು ಸಾಧ್ಯವೇ?

ರಮೇಶ ಕೈ ಕಟ್ಟಿ ಕುಳಿತಿಲ್ಲ

ಕಂದಾಯ ಇಲಾಖೆಯು ಮಾಡಿದ ಮೋಸದಿಂದ ರಮೇಶ ಕೈ ಕಟ್ಟಿಕೊಂಡು ಕುಳಿತಿಲ್ಲ, ಎಲ್ಲ ದಾಖಲಾತಿಗಳೊಂದಿಗೆ ತಹಶೀಲ್ದಾರ ಸಜ್ಜನ ಶೆಟ್ಟರ್ ಮತ್ತು ಉಪವಿಭಾಗಾಧಿಕಾರಿ ಪುರುಷೋತ್ತಮನ ವಿರುದ್ಧ ಕರ್ನಾಟಕ ಲೋಕಾಯುಕ್ತ ರಿಜಿಸ್ಟ್ರಾರ್‌ರಿಗೆ ಮತ್ತು ದಾವಣಗೆರೆ ಜಿಲ್ಲಾಧಿಕಾರಿಗೆ ತನ್ನ ಜಮೀನು ಬಿಡಿಸಿಕೊಡಲು ಮತ್ತೆ ದೂರು ನೀಡಿದ್ದಾನೆ. ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ರಮೇಶನ ಅಹವಾಲನ್ನು ಪುರಸ್ಕರಿಸಿ ಎ.ಸಿ. ಹಾಗೂ ತಹಶೀಲ್ದಾರನಿಗೆ ನೋಟೀಸು ನೀಡಿ ರಮೇಶನನ್ನು ದಿ. 30.3.2007 ರಂದು ವಿಚಾರಣೆಗೆ ಕರೆದಿದ್ದಾರೆ. ಲೋಕಾಯುಕ್ತರು ತಮಗಿರುವ ಅಧಿಕಾರವನ್ನೇ ಬಳಸಿಕೊಂಡು ಗೋಪನಾಳಿನಲ್ಲಿ ಕರ್ನಾಟಕ ಸರ್ಕಾರ ಹಕ್ಕಿಪಿಕ್ಕರಿಗೆ ನೀಡಿರುವ ಜಮೀನಿನ ಎಲ್ಲ ಕಡತಗಳನ್ನು ಪರಿಶೀಲಿಸಿದರೆ ಸಜ್ಜನ ಶೆಟ್ಟರ್ ಹಾಗೂ ಪುರುಷೋತ್ತಮನ ಮೋಸದ ಮುಖವಾಡಗಳು ಕಳಚಿ ಬೀಳುತ್ತವೆ. ತಂದೆತಾಯಿ ಇಬ್ಬರನ್ನೂ ಕಳೆದುಕೊಂಡಿರುವ ರಮೇಶ ತನ್ನ ಐದು ಮಂದಿ ತಮ್ಮಂದಿರನ್ನು ಸಾಕುವ ಹೊಣೆ ಹೊತ್ತಿದ್ದಾನೆ. ಜಮೀನು ಕಳೆದುಕೊಂಡು ಬೀದಿಗೆ ಬಿದ್ದಿರುವ 28 ಕುಟುಂಬಗಳ ಪರಿಸ್ಥಿತಿಯೂ ಹೀಗೆಯೇ ಆಗಿದೆ. ಇದು ಒಂದು ಶೋಷಿತ ಸಮುದಾಯದ ಸಾಮೂಹಿಕ ಸಮಸ್ಯೆ ಎಂದು ಪರಿಗಣಿಸಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ವಿಭಾಗದ ಗಣ್ಯರು ತನಿಖೆಗೆ ಮುಂದಾಗಿ ಸಕಾರಕ್ಕೆ ಸತ್ಯ ವರದಿಯನ್ನು ಸಲ್ಲಿಸಬೇಕು. ಇಲ್ಲವೆ ಜನಪರ ಸಂಘಟನೆಗಳು ಬೀದಿಗಿಳಿಯಬೇಕು. ಆಗ ಮಾತ್ರ ರಮೇಶನ ಜೊತೆಗೆ, ಜಮೀನು ಕಳೆದುಕೊಂಡಿರುವ ಹಕ್ಕಿಪಿಕ್ಕಿ ಜನಾಂಗದವರಿಗೆ ಆಸರೆ ಸಿಗಬಹುದೇನೋ?


ದಲಿತರ ಭೂಮಿಯನ್ನು ಇತರರು ಕಬಳಿಸಬಾರದೆಂದು ದೇವರಾಜು ಅರಸು ಸರ್ಕಾರ 1978-79 ರಲ್ಲಿ ಜಾರಿಗೆ ತಂದ 'ಪರಭಾರೆ ನಿಷೇಧ ಕಾಯ್ದೆ' ನಾಡಿನ ಸಹಸ್ರಾರು ದಲಿತರಿಗೆ ಮರು ಜೀವವನ್ನು ನೀಡಿರುವುದು ನಿಜವಾದರೂ ಐಕ್ಯವಾಗಿದ್ದ 'ದಲಿತ ಸಂಘರ್ಷ ಸಮಿತಿ'ಯ ಅವಿರತ ಹೋರಾಟಗಳಿಂದ ಮಾತ್ರವೇ ದಲಿತರು ಕಳೆದುಕೊಂಡ ಭೂಮಿ ಮತ್ತೆ ದಲಿತರಿಗೆ ಸಿಕ್ಕಿದೆ.

ಆದರೆ ಈಗ 'ದಸಂಸ' ಪರಿಸ್ಥಿತಿಯನ್ನು ಚೆನ್ನಾಗಿ ಗ್ರಹಿಸುವ ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಪೊಲೀಸರು 'ಕಾನೂನುಬದ್ಧವಾಗಿ ಜಯಗಳಿಸಿ ದ್ದರೂ ದಲಿತರಿಗೆ ನ್ಯಾಯ ಮತ್ತು ರಕ್ಷಣೆ ಎರಡನ್ನೂ ಕೊಡುತ್ತಿಲ್ಲ, ಹೀಗಾಗಿಯೇ ಜಯಪ್ಪ ರಮೇಶನಂತವರು ಬಲಿಪಶುಗಳಾಗುತ್ತಿದ್ದಾರೆಂಬ ಕಹಿ ಸತ್ಯವನ್ನು ಈಗ ಲಾದರೂ 'ದಸಂಸ' ನಾಯಕರು [illegible] ಮಾಡಿಕೊಳ್ಳುವರೆ?

ಶಿಕಾರಿ ಜಿಮ್ ಕಾರ್ಬೆಟ್‌ನ ಕಥನಗಳು



ಮೋಹನದ ನರಭಕ್ಷಕ



ಹುಲಿಯ ಹಾದಿ ಹುಡುಕುತ್ತಾ......

ಹುಲಿಯ ಹೆಜ್ಜೆ ಗುರುತುಗಳು ಸುಸ್ಥಿತಿಯಲ್ಲಿ ನೋಡಲು ಸಿಗುವುದಾದರೆ ಅದರಿಂದ ಹುಲಿಯ ಲಿಂಗದ ಜೊತೆಗೆ ಅದರ ವಯಸ್ಸನ್ನು ಹೆಚ್ಚೂಕಡಿಮೆ ನಿಖರವಾಗಿ ಹೇಳಬಹುದು. ಇದರೊಂದಿಗೆ ಅದು ಹೋಗಿರುವ ವೇಗ, ದಿಕ್ಕುಗಳನ್ನೂ ಗುರುತಿಸಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಆ ಹುಲಿಯ ಯಾವುದಾದರೂ ಕಾಲು ವಿಕಲವಾಗಿದ್ದರೆ ಅದನ್ನೂ ಪತ್ತೆ ಮಾಡಬಹುದು. ವಿಕಲತೆಯ ಪ್ರಮಾಣದೊಂದಿಗೆ ಯಾವ ಕಾಲು ಎಂದು ನಿಖರವಾಗಿಯೇ ಹೇಳಬಹುದು.

ಹುಲಿ ವಿನಹಾ ಯಾವ ಮಾರ್ಗವಾಗಿ ಬರುತ್ತದೆಂದು ಜನ ತೋರಿಸಿದ್ದರೋ ಆ ದಾರಿ ಪೂರ್ವಕ್ಕೆ ಸಾಗಿ ಚೈತಾಲ್ ಕ್ಯಾಂಪನ್ನು ಸೇರಿ ಅಲ್ಲಿಂದ ನೇರವಾಗಿ ಕೆಳಕ್ಕೆ ಮೋಹನದತ್ತ ಹೋಗುತ್ತಿತ್ತು. ಮತ್ತೊಂದು ನೇರ ಪ್ರವಾಹದ ರಾಮಗಂಗಾ ನದಿಯ ಕಡೆಗಿದ್ದ ಚಕ್ನಕಲ್ ಹಳ್ಳಿಯನ್ನು ತಲುಪುತ್ತಿತ್ತು.

ಈ ಪ್ರವಾಹದ ಕಡೆಗೆ ಸಾಗುವ ದಾರಿ ಹಳ್ಳಿಯನ್ನು ಮೇಲ್ಭಾಗದಿಂದ ಬಳಸಿಕೊಂಡು ಅರ್ಧ ಮೈಲುಗಳಷ್ಟು ದೂರ ಹೊಲಗಳ ಮೂಲಕ ಸಾಗುತ್ತಿತ್ತು. ಇಲ್ಲಿಂದ ದಕ್ಷಿಣಕ್ಕೆ ತಿರುಗಿ ಪರ್ವತದ ಮುಖಭಾಗದಲ್ಲೇ ಹರಿದು ಮತ್ತೆ ನಮ್ಮ ಗುಡಿಸಲಿರುವ ಕಣಿವೆಯ ದಾರಿಯನ್ನು ಕೂಡಿಕೊಳ್ಳುತ್ತಿತ್ತು. ಈ ಒಟ್ಟೂ ರಸ್ತೆಯ ಉದ್ದದಲ್ಲಿ ಕಾರ್ತ್‌ಕಾನೌಲಾ ಮತ್ತು ಚಕ್ನಕಲ್ ನಡುವಿನ ಈ ಭಾಗದ ರಸ್ತೆ ಅತ್ಯಂತ ಅಪಾಯಕಾರಿಯೆಂದು ತೀರ್ಮಾನಿಸಲಾಗಿತ್ತು. ಈ ರಸ್ತೆಯನ್ನು ನರಭಕ್ಷಕ ಹುಟ್ಟಿಕೊಂಡ ದಿನಗಳಿಂದಲೇ ಯಾರೂ ಬಳಸುತ್ತಿರಲಿಲ್ಲ. ಹಳ್ಳಿಯ ಮೇಲ್ಭಾಗದ ಕೃಷಿ ಭೂಮಿಯನ್ನು ದಾಟುತ್ತಿದ್ದಂತೆ ಪರ್ವತ ಮುಖದ ಆ ದಾರಿಯಲ್ಲಿ ಸ್ವಲ್ಪ ದೂರ ಕುರುಚಲು ಕಾಡಿದ್ದರೆ ಉಳಿದ ಭಾಗ ದಟ್ಟ ಕಾಡಿನಿಂದ ಆವೃತವಾಗಿತ್ತು. ಈ ಕಾಡಿನ ನಡುವಿನಿಂದ ಇನ್ನೊಂದು ದಾರಿ ಇಳಿಜಾರಿನಲ್ಲಿ ಸಾಗಿ ರಾಮಗಂಗಾ ನದಿಯನ್ನು ಸೇರುತ್ತಿತ್ತು. ಕಾರ್ತ್‌ಕಾನೌಲಾದ ಬಹುಪಾಲು ಕೃಷಿಭೂಮಿಗಳು ಪರ್ವತದ ಉತ್ತರ ಮುಖಕ್ಕಿದ್ದವು. ಈ ಕೃಷಿಭೂಮಿಯ ಉತ್ತರದಾಚೆಯ ಅಂಚಿನಲ್ಲಿ ಸಾವಿರಾರು ಪ್ರಪಾತಗಳು, ಕಡಿದಾದ ಕಣಿವೆಗಳು, ಆಳವಾದ ಕಂದರಗಳೂ ಇದ್ದವು. ಇವುಗಳಲ್ಲಿ ತೀರಾ ಹತ್ತಿರದ ಕಣಿವೆಯು ಈ ಗುಡಿಸಲಿನಿಂದ ಸುಮಾರು ಮುಕ್ಕಾಲು ಮೈಲಿ ದೂರದಲ್ಲಿತ್ತು. ಅಲ್ಲೊಂದು ಬೃಹದಾಕಾರದ ಪೈನ್ ಮರವಿತ್ತು. ಹತ್ತು ದಿನಗಳ ಹಿಂದೆ ಆ ಮರದ ಬಳಿ ಹುಲಿ ಹೆಂಗಸೊಬ್ಬಳನ್ನು ಕೊಂದು ಅರ್ಧಂಬರ್ಧ ತಿಂದು, ಉಳಿದದ್ದನ್ನು ಬಿಟ್ಟುಹೋಗಿತ್ತು.

ಇಲ್ಲಿಂದ ನಾಲ್ಕು ಮೈಲಿಗಳ ದೂರದಲ್ಲಿದ್ದ ಅರಣ್ಯ ಇಲಾಖೆಯ ಪ್ರವಾಸಿ ಬಂಗಲೆಯಲ್ಲಿ ಈ ಹುಲಿಯನ್ನು ಹೊಡೆಯಲು ಮೂರು ಜನ ಶಿಕಾರಿದಾರರು ಕಾದುಕುಳಿತಿದ್ದರು. ಇಲ್ಲಿಗೆ ಬಂದು ನೋಡಿದ ಅವರಲ್ಲಿ ಯಾರಿಂದಲೂ ಈ ಪೈನ್ ಮರವನ್ನು ಹತ್ತಲಾಗಲಿಲ್ಲ, ಹಾಗಾಗಿ ಹಳ್ಳಿಗರು ಈ ಮೂವರಿಗೂ ಮೂರು ಪ್ರತ್ಯೇಕ ಮಚಾನುಗಳನ್ನು ಮೂರು ಬೇರೆ ಬೇರೆ ಮರಗಳಲ್ಲಿ ಕಟ್ಟಿಕೊಡಬೇಕಾಯಿತು. ಈ ಮಚಾನುಗಳು ಮೃತ ಹೆಂಗಸಿನ ಉಳಿಕೆಯಿಂದ ಸುಮಾರು 100- 150 ಗಜ ದೂರದಲ್ಲಿದ್ದವು. ಸಂಜೆಯ ಹೊತ್ತಿಗೆ ಈ ಶಿಕಾರಿದಾರರು ಮತ್ತು ಅವರ ಸೇವಕರು ಶಿಸ್ತಾಗಿ ಮಚಾನನ್ನು ಹತ್ತಿಕೂತರು. ಅದು ಎಳೆಯ ಚಂದಿರನ ತೆಳು ಬೆಳದಿಂಗಳ ಕಾಲವಾಗಿತ್ತು, ಚಂದ್ರ ಹುಟ್ಟಿದ ಸ್ವಲ್ಪ ಹೊತ್ತಿಗೆ ಅನೇಕ ಗುಂಡುಗಳು ಪೈಪ್ರೋಟಿಯಿಂದ ಹಾರಿದ್ದನ್ನ ಹಳ್ಳಿಗರು ಕೇಳಿಸಿಕೊಂಡರು. ಬೆಳಕಾದ ಮೇಲೆ ಬಂದು ನೋಡಿದರೆ ಅಲ್ಲಿ ಏನೂ ಸಂಭವಿಸಿರಲಿಲ್ಲ, ಜನ ಅವರ ಸೇವಕರನ್ನು 'ನಿಮ್ಮ ಒಡೆಯರು ರಾತ್ರಿ ಯಾವುದಕ್ಕೆ ಗುಂಡು ಹೊಡೆದರು' ಎಂದು ಕೇಳಿದರು. ಅದಕ್ಕೆ ಸೇವಕರು 'ಅದು ನಮಗೂ ಗೊತ್ತಿಲ್ಲ, ನಾವಂತೂ ಏನೂ ನೋಡಲಿಲ್ಲ' ಎಂದರು. ಎರಡು ದಿನಗಳ ನಂತರ ಮತ್ತೆ ಅದೇ ಪ್ರದೇಶದಲ್ಲಿ ಹುಲಿ ಒಂದು ಹಸುವನ್ನು ಕೊಂದುಹಾಕಿತ್ತು, ಅಂದು ರಾತ್ರಿಯೂ ಶಿಕಾರಿದಾರರು ಕಾವಲು ಕುಳಿತಿದ್ದರು. ಈ ಬಾರಿ ಬೆಳದಿಂಗಳು ಕಣ್ಮರೆಯಾದ ಮೇಲೆ ಗುಂಡು ಹಾರಿಸಿದ್ದರು. ಈ ಸಾರಿಯೂ ಏನೂ ಆಗಲಿಲ್ಲ, ಇವರೂ ಶಿಕಾರಿದಾರರೇ, ತಮ್ಮ ಪ್ರಯತ್ನವನ್ನೇನೋ ಮಾಡಿದ್ದಾರೆ, ಆದರೆ ನರಭಕ್ಷಕನನ್ನು ಹೊಡೆಯಲಾಗಲಿಲ್ಲ, ಇದೊಂದು ಆತಂಕದ ಸಂಗತಿ. ಮತ್ತೊಂದು ಆತಂಕದ ಸಂಗತಿ ಎಂದರೆ ಇಂತಹ ಶಿಕಾರಿದಾರರು ಇನ್ನು ಮುಂದೆಯೂ ಈ ಪ್ರದೇಶದಲ್ಲಿ ಮುಂದುವರೆಯುವುದು.

ಈ ಬಗ್ಗೆ ಮಾತನಾಡುತ್ತಿದ್ದ ಹಳ್ಳಿಗರು ಮಾತುಮಾತಿನ ನಡುವೆ ಹುಲಿಯ ಒಂದು ವಿಲಕ್ಷಣ ನಡವಳಿಕೆಯ ಬಗ್ಗೆ ಮಾಹಿತಿ ನೀಡಿದರು. 'ಈ ಹುಲಿ ಬೆಟ್ಟದಿಂದ ಇಳಿದು ಬರುವಾಗ ಮೊದಲು ನಮಗೆ ಕೇಳಿಸುವುದು ಅದರಿಂದ ಬರುವ ಮುಲುಕಿನಂಥ ಶಬ್ದ. ಈ ಶಬ್ದ ನಮಗೆ ದೂರದಿಂದಲೇ ಕೇಳಿಸುತ್ತದೆ' ಎಂದು. ನಾನು ಅದನ್ನು ಖಚಿತಪಡಿಸಿಕೊಳ್ಳಲು ಅನೇಕ ಬಗೆಯಲ್ಲಿ ಪ್ರಶ್ನಿಸಿದೆ ಅದು ನಿಜವಾಗಿತ್ತು, ಹುಲಿ ಮುಚ್ಚಿದ ಮನೆ ಬಾಗಿಲುಗಳ ಮುಂದೆ ಹಾದು ಹೋಗುವಾಗ ಹಾಗೂ ಅದು ಮನೆಗಳ ಮೇಲೆ ದಾಳಿ ಮಾಡುವಾಗಲೂ ಮುಲುಕಿದಂಥ ಸದ್ದನ್ನು ಮಾಡುತ್ತಿತ್ತು. ಇದನ್ನು ಹಳ್ಳಿಗರು ತೀರಾ ಸಮೀಪದಿಂದ ಕೇಳಿಸಿಕೊಂಡಿದ್ದರು. ಈ ಮುಲುಕು ಕೆಲವೊಮ್ಮೆ ಕ್ಷಣಿಕವಾಗಿದ್ದರೆ ಕೆಲವೊಮ್ಮೆ ದೀರ್ಘವಾಗಿರುತ್ತಿತ್ತು.

ಈ ಮಾಹಿತಿಯ ಮೇಲೆ ನಾನು ಈ ಶಬ್ದ ಸಾಧ್ಯತೆಯ ಮೂಲವನ್ನು ಅಂದಾಜು ಮಾಡಿದೆ. ಒಂದು; ಹುಲಿಗೆ ಆಳವಾದ ವ್ರಣವಾಗಿ ಅದರಿಂದ ನರಳುತ್ತಿರಬೇಕು, ಎರಡು; ಈ ವ್ರಣವು ನಿರ್ದಿಷ್ಟವಾಗಿ ಚಲಿಸುವ ಭಾಗದಲ್ಲೆಲ್ಲೋ ಆಗಿರಬೇಕು ಹಾಗಾಗಿ ನಡೆಯುವಾಗ ಮಾತ್ರ ಅದು ತೊಂದರೆ ಕೊಡುತ್ತಿದ್ದಿರಬೇಕು, ಮೂರು; ಖಚಿತವಾಗಿ ಆ ಗಾಯ ಅದರ ಯಾವುದೋ ಒಂದು ಕಾಲಿಗೇ ಆಗಿರಬೇಕು. ಆದರೆ ಹಳ್ಳಿಗರ ಹೇಳಿಕೆ ಮತ್ತು ನನಗಿದ್ದ ಮಾಹಿತಿಯ ಪ್ರಕಾರ ಅದಕ್ಕೆ ಯಾವುದೇ ಸ್ಥಳೀಯ ಶಿಕಾರಿದಾರರು ಗುಂಡು ಹೊಡೆದಿರಲಿಲ್ಲ ಹಾಗೂ ಇದನ್ನು ಹೊಡೆಯಲು ರಾಣಿಖೇತ್‌ನಿಂದ ಬಂದಿದ್ದ ಶಿಕಾರಿದಾರರಿಗೂ ಅದು ಎಂದೂ ಸಿಕ್ಕಿರಲಿಲ್ಲ, ಹಾಗಾಗಿ ಅವರು ಗುಂಡು ಹೊಡೆದು ಗಾಯಗೊಳಿಸಿರುವ ಸಾಧ್ಯತೆ ಇರಲಿಲ್ಲ, ಆದರೆ ಇದು ಹುಲಿಗೆ ಹಾಗೂ ಅದರ ಶಿಕಾರಿಗೆ ಸಂಬಂಧಿಸಿದಂತೆ ನನಗೆ ಅತ್ಯಂತ ಮಹತ್ವದ ಮಾಹಿತಿಯಾಗಿತ್ತು. ಅಲ್ಲದೆ ಹುಲಿ ನರಭಕ್ಷಕನಾಗಲು ಭಾಗಶಃ ಇದು ಕಾರಣವಾಗಿದ್ದಿರಬಹುದು. ಅನೇಕ ವರ್ಷಗಳಿಂದ ನರಭಕ್ಷಕನಾಗಿ ಮುಂದುವರೆಯುತ್ತಿರುವ ಇದು ಈ ವ್ರಣದ ಕಾರಣದಿಂದಲೇ ನರಭಕ್ಷಕನಾಗಿದ್ದರೆ ಈ ವ್ರಣವೂ ಯಾವುದೋ ನೈಸರ್ಗಿಕ ಕಾರಣದಿಂದಲೇ ಆಗಿದ್ದಿರಬಹುದು. ಸದ್ಯಕ್ಕೆ ಇದು ಊಹೆಯ ಸಂಗತಿಯಾದರೂ ಇಂದಲ್ಲ ನಾಳೆ ಇದರ ರಹಸ್ಯ ತಿಳಿದೇ ತಿಳಿಯುತ್ತದೆ. ಕೊನೆಯ ಪರೀಕ್ಷೆಯಲ್ಲಿ......, ಶವಪರೀಕ್ಷೆಯಲ್ಲಿ.... ಆದರೆ ಆಗ ಹುಲಿ ಸತ್ತಿರುತ್ತದೆ.

ಅಲ್ಲಿದ್ದ ಜನ ಹುಲಿ ಹಾಗೇಕೆ ಮುಲುಕುತ್ತದೆ ಎಂಬುದಕ್ಕೆ ನನ್ನಿಂದ ಕಾರಣ ತಿಳಿಯಲು ಕುತೂಹಲಿಗಳಾಗಿದ್ದರು. ಅದಕ್ಕೆ ನಾನು 'ಅದರ ಒಂದು ಕಾಲಿಗೆ ಎಲ್ಲೋ ಏಟು ಬಿದ್ದಿದೆ, ಅದು ಗುಂಡಿನ ಏಟೂ ಆಗಿರಬಹುದು ಅಥವಾ ಮುಳ್ಳು ಹಂದಿಯ ದಾಳಿಯಿಂದಲೂ ಆಗಿರಬಹುದು' ಎಂದು ಹೇಳಿದೆ. ಆದರೆ ಹಳ್ಳಿಗರು ಇದನ್ನು ಒಪ್ಪದೆ; ವಿರೋಧಿಸುತ್ತ 'ಇಲ್ಲ ಬಿಡಿ. ಮೊದಲಿನಿಂದಲೂ ನಾವು ಅದನ್ನು ನೋಡುತ್ತಿದ್ದೇವಲ್ಲ! ಅದು ಮನುಷ್ಯರನ್ನು ಹಿಡಿಯಲು ಆರಂಭಿಸಿದ ಸಮಯದಲ್ಲಿ ಗಟ್ಟಿಮುಟ್ಟಾಗಿಯೇ ಇತ್ತು, ಅಲ್ಲದೇ ಕೊಂದವರನ್ನು ಸಲೀಸಾಗಿ ಎತ್ತಿಕೊಂಡು ಹೋಗಿಬಿಡುತ್ತಿತ್ತು, ಅದಕ್ಕೆ ಯಾವ ಅಂಗ ಊನವೂ ಇರಲಿಲ್ಲ ಎಂಬುದಕ್ಕೆ 'ಇದೇ ಸಾಕ್ಷಿ' ಎಂದು ಖಚಿತವಾಗಿ ವಾದಿಸಿದರು. ವಾದವಿವಾದಗಳು ಏನೇ ಇರಲಿ ಅಂತಿಮವಾಗಿ ಸತ್ಯ ತಿಳಿಯುತ್ತದೆ. ಇಲ್ಲಿರುವ ಎಲ್ಲರಿಗೂ ನನ್ನ ಮಾತುಗಳೂ ನೆನಪಿನಲ್ಲಿರುತ್ತವೆ. ಆಗ ಈ ನನ್ನ ಇನ್ನೊಂದು ಸಾಧ್ಯತೆಯ ಅಂದಾಜಿಗೆ ಯಾವ ಬಹುಮಾನ ಸಿಗುತ್ತದೋ ನೋಡೋಣ.

ನಾನು ರಾಮನಗರದ ಮೂಲಕ ಹಾದು ಬರುವಾಗ ಎರಡು ಹರೆಯದ ಕೋಣಗಳನ್ನು ಖರೀದಿಸಿ ಮೋಹನಕ್ಕೆ ಕಳಿಸಿಕೊಡುವಂತೆ ತಹಸೀಲ್ದಾರರಿಗೆ ಹೇಳಿಬಂದಿದ್ದೆ. ಅವನ್ನು ನಮ್ಮವರು ಅಲ್ಲಿಂದ ಹೊಡೆದುಕೊಂಡು ಬರಬೇಕಿತ್ತು.

ಈ ಕೋಣಗಳನ್ನು ಎಲ್ಲಿ ಎರೆ ಕಟ್ಟಬೇಕೆಂದು ಯೋಚಿಸುತ್ತಾ...., ಅಲ್ಲಿದ್ದ ಜನರನ್ನು ' ಒಂದನ್ನು; ಮೂರುದಿನ ಮುಂಚೆ ಹುಲಿ ಒಬ್ಬ ಹೆಂಗಸನ್ನು ಹಿಡಿದು ತಿಂದ ಜಾಗದಲ್ಲಿ, ಇನ್ನೊಂದನ್ನು ಚಕ್ನಕಲ್ ರಸ್ತೆಯಲ್ಲಿ ಕಟ್ಟಿದರೆ ಹೇಗೆ?' ಎಂದು ಕೇಳಿದೆ. ಅದಕ್ಕೆ ಅವರು 'ಇವೆರಡಕ್ಕಿಂತ ಸೂಕ್ತವಾದ ಜಾಗಗಳು ಬೇರೆ ಯಾವುದಿವೆ ಹೇಳಿ?!' ಎಂದಿದ್ದರು. ಆದರೂ 'ನೀವೆಲ್ಲಾ ಕೂಡಿ ಇನ್ನೊಮ್ಮೆ ಯೋಚಿಸಿ ಬೇರೆ ಜಾಗಗಳಿದ್ದರೆ ನಾಳೆ ನನಗೆ ತಿಳಿಸಿ' ಎಂದು ಹೇಳಿದೆ.

ಕತ್ತಲಾಗುತ್ತಿತ್ತು. ಊರಿನ ಹಿರಿಯ ಅಲ್ಲಿಂದ ಹೊರಡುತ್ತಾ 'ನೀವು ಹೇಳಿದಂತೆ ನಾಳೆ ಬೆಳಿಗ್ಗೆಯೇ ಸುತ್ತಮುತ್ತಲ ಹಳ್ಳಿಗಳಿಗೆಲ್ಲಾ ನೀವು ಬಂದಿರುವ ಸುದ್ದಿ ಮತ್ತು ಕಾರಣವನ್ನು ರವಾನಿಸುತ್ತೇನೆ' ಎಂದು ಭರವಸೆ ನೀಡಿದರು. ಇದೇಕೆಂದರೆ ನಾವು ಬಂದಿರುವ ಸುದ್ದಿ ಮತ್ತು ಉದ್ದೇಶಗಳು ಹಳ್ಳಿಗಳ ಜನಕ್ಕೆ ತಿಳಿದರೆ, ಅವರ ಹಳ್ಳಿಗಳಲ್ಲಿ ನರಭಕ್ಷಕ ಕಾಣಿಸಿಕೊಂಡರೆ, ದನಕರುಗಳನ್ನು ಹಿಡಿದರೆ ಅಥವಾ ಯಾರ ಮೇಲಾದರೂ ದಾಳಿಮಾಡಿದರೆ ಅದರ ಮಾಹಿತಿ ನನಗೆ ತಕ್ಷಣ ದೊರೆಯುತ್ತಿತ್ತು. ಆ ಹಳ್ಳಿಗರು ಹೇಗಾದರೂ ಮಾಡಿ ಅದನ್ನು ನನಗೆ ತಲುಪಿಸುತ್ತಿದ್ದರು. ನರಭಕ್ಷಕನ ಶಿಕಾರಿಯಲ್ಲಿ ಈ ಸುದ್ದಿ ತಲುಪುವ 'ಸಮಯ' ತುಂಬಾ ಮುಖ್ಯವಾದದ್ದು.

ಈವರೆಗೂ ನಮ್ಮ ಗುಡಿಸಲಿನಲ್ಲಿ ತುಂಬಿಕೊಂಡಿದ್ದ ಕಮಟು ವಾಸನೆ ಸ್ವಲ್ಪ ಕಡಿಮೆಯಾಗಿತ್ತಾದರೂ ಪೂರ್ತಿ ಹೋಗಿರಲಿಲ್ಲ, ಅದರತ್ತ ಹೆಚ್ಚು ಗಮನ ಕೊಡಲಿಲ್ಲ. ಸ್ನಾನ ಮಾಡಿ ಊಟಮುಗಿಸಿದ ನಂತರ ನಾನು ವರಾಂಡದಲ್ಲಿ ಮಲಗಿದೆ. ನನ್ನ ಅಡುಗೆಯವರು ಅಡುಗೆ ಮನೆಯ ಭಾಗದದಲ್ಲಿ ಮಲಗಿದರು ಹಾಗೂ ಘರ್ವಾಲಿಗಳು ಸೌದೆ ಒಟ್ಟುವ ಅಂಕಣದಲ್ಲಿ ಜಾಗ ಹಿಡಿದರು. ನಾನು ಮಲಗುವ ಮುನ್ನ ಬಾಗಿಲಿಗೆ ಎರಡು ದೊಡ್ಡ ಕಲ್ಲುಗಳನ್ನು ಅಡ್ಡ ಇಟ್ಟೆ. ಅಗುಳಿ ಚಿಲಕ ಇಲ್ಲದ ಈ ಬಾಗಿಲನ್ನು ಮತ್ತೇಗೂ ಮುಚ್ಚಲು ಸಾಧ್ಯವಿರಲಿಲ್ಲ, ನಾನು ಒಂದು ಥರ ಕೋಳಿನಿದ್ದೆಯವನು. ಎರಡು-ಮೂರು ಗಂಟೆಗಳಿಗೊಮ್ಮೆ ಎಚ್ಚರಗೊಳ್ಳುತ್ತಿದ್ದೆ ಈಗಲೂ ಹಾಗೇ ಆಗಿತ್ತು, ನಾನು ಎಚ್ಚರಗೊಳ್ಳುತ್ತಿದ್ದಂತೆ ಪಕ್ಕದ ಕಾಡಿನಲ್ಲಿ ಯಾವುದೊ ಪ್ರಾಣಿ ಚಲಿಸುವ ಶಬ್ದ ಕೇಳಿಸಿತು. ತಕ್ಷಣ ಎದ್ದು ಹಿಂಬಾಲಿಸುತ್ತ ಬಂದೆ, ಒಂದು ಕೈ ಬಂದೂಕವನ್ನೂ ಇನ್ನೊಂದು ಕೈ ಬ್ಯಾಟರಿಯನ್ನೂ ಭದ್ರವಾಗಿ ಹಿಡಿದಿದ್ದವು. ಅಡ್ಡ ಇಟ್ಟಿದ್ದ ಕಲ್ಲುಗಳನ್ನು ಕಾಲಿನಿಂದಲೇ ಪಕ್ಕಕ್ಕೆ ಸರಿಸಿ ಬಾಗಿಲು ತೆರೆದೆ. ಕೇಳುತ್ತಿರುವ ಶಬ್ದದ ಸ್ವರೂಪವನ್ನು ನೋಡಿದರೆ ಹುಲಿಯೇ ಇರಬೇಕು ಅನಿಸುತ್ತಿತ್ತು, ಖಚಿತವಾಗಿ ಹೇಳಲಾರೆ. ಅದು ಚಿರತೆ ಅಥವಾ ಮುಳ್ಳುಹಂದಿಯೂ ಆಗಿರಬಹುದು. ಕಾಡು ದಟ್ಟವಾಗಿದ್ದ ಕಾರಣ ಅದು ದೃಷ್ಟಿಗೆ ಗೋಚರವಾಗುತ್ತಿರಲಿಲ್ಲ, ಸ್ವಲ್ಪಹೊತ್ತು ಕಾದಿದ್ದು ಒಳಕ್ಕೆ ಹಿಂತಿರುಗಿ, ಕಲ್ಲುಗಳನ್ನು ಸ್ವಸ್ಥಾನಕ್ಕಿಟ್ಟು ಮಲಗಿದೆ.

ಮತ್ತೆ ಮಲಗುವಾಗ ನನಗೆ ಗಂಟಲು ನೋವು ಬಂದಿರುವ ಗುಮಾನಿ ಬಂತು. ಉರಿ ಬಿಸಿಲಿನಲ್ಲಿ ಮೋಹನದಿಂದ ನಡೆದು ಬಂದು, ಸಂಜೆ ತೀರಾ ತಣ್ಣನೆಯ ಗಾಳಿಯಲ್ಲಿ ಬಹಳ ಹೊತ್ತು ಕುಳಿತಿದ್ದರ ಪರಿಣಾಮ ಇದಾಗಿರಬೇಕು ಅನಿಸಿತು. ಮುಂಜಾನೆಯೇ ನನ್ನ ಸಹಾಯಕರು ತಂದುಕೊಟ್ಟ ಬಿಸಿಬಿಸಿ ಟೀ ಕುಡಿಯುವಾಗ ನನ್ನ ಗಂಟಲು ಉರಿಯೂತದ ಬಾಧೆಗೆ ಬಲಿಯಾಗಿರುವುದು ಖಚಿತವಾಯಿತು. ಇದಕ್ಕೆ ದೀರ್ಘಾವಧಿಯಿಂದ ಬಳಸದ ಆ ಗುಡಿಸಲಿನೊಳಗಿನ ಕೆಟ್ಟ ವಾತಾವರಣ ಹಾಗೂ ಛಾವಣಿಯಲ್ಲಿ ಅಲಂಕಾರಕ್ಕೆ ನೇತು ಬಿಟ್ಟಂತೆ ಇಳಿಬಿದ್ದಿದ್ದ ಅಸಂಖ್ಯಾತ ಬಾವಲಿಗಳ ಹಿಂಡು ಬಹುಪಾಲು ಕಾರಣವಾಗಿದ್ದವು. ಇದರ ಪ್ರಭಾವದಿಂದ ನನ್ನ ಸಹಾಯಕರು ಬಚಾವಾಗಿದ್ದರು. ಆದರೆ ಘರ್ವಾಲಿಗಳೆಲ್ಲರೂ ನನ್ನಂಥದೇ ಸಮಸ್ಯೆಗೆ ಸಿಕ್ಕಿಬಿದ್ದಿದ್ದರು. ನನ್ನ ಬಳಿ ಇದ್ದ ಔಷಧಿಯ ದಾಸ್ತಾನು ತೀರಾ ಸೀಮಿತವಾಗಿತ್ತು. ಕೆಲವು ಔನ್ಸುಗಳಷ್ಟು ಅಯೋಡಿನ್ ಹಾಗೂ ಕೆಲವು ಕ್ವಿನೈನ್ ಮಾತ್ರೆಗಳು ಮಾತ್ರ ನನ್ನಲ್ಲಿದ್ದವು. ಆದರೆ ನನ್ನ ರೈಫಲ್ ಪೆಟ್ಟಿಗೆಯ ಗುಜರಿಯನ್ನು ತಡಕಾಡಿದಾಗ ನನಗೆ ಒಂದು ಸಣ್ಣ ಕಾಗದದ ಪೊಟ್ಟಣ ಕಾಣಿಸಿತು. ಇದರಲ್ಲಿ ಯಾವಾಗಲೋ ನನ್ನ ಅಕ್ಕ ಇಟ್ಟಿದ್ದ ಪೊಟಾಸಿಯಂ ಪರ್ಮಾಂಗನೇಟ್ ಇತ್ತು, ಪೊಟ್ಟಣದ ಮೇಲೆ ಗನ್‌ಆಯಿಲ್ ಸೋರಿತ್ತಾದರೂ ಒಳಗಿದ್ದ ಹರಳುಗಳಿಗೆ ಯಾವ ಧಕ್ಕೆಯೂ ಆಗಿರಲಿಲ್ಲ. ನಾನು ಕೂಡಲೇ ಒಂದು ದೊಡ್ಡ ಡಬ್ಬದಲ್ಲಿ ಬಿಸಿನೀರನ್ನು ತೆಗೆದುಕೊಂಡು ಅದಕ್ಕೆ ಪರ್ಮಾಂಗನೇಟಿನ ಹರಳುಗಳನ್ನು ಹಾಕಿ, ಅದರೊಂದಿಗೆ ಒಂದಿಷ್ಟು ಅಯೋಡಿನ್ ದ್ರಾವಣವನ್ನೂ ಮಿಶ್ರಮಾಡಿದೆ. ಇದನ್ನು ಎಲ್ಲರೂ ಗಂಟಲಿಗೆ ತುಂಬಿಕೊಂಡು ಗ್ರ್ಗ್ರ್ಗ್ರ....ಗ್ರ್ಗ್ರ್ಗ್ರ.....ಗ್ರ್ಗ್ರ್ಗ್ರ.... ಎಂದು ಗಟಕರಿಸಿದ್ದರ ಪರಿಣಾಮ ಫಲಕಾರಿಯಾಗಿತ್ತು. ಈ ಮಿಶ್ರಣವನ್ನು ಬಾಯಿಗೆ ಹಾಕಿಕೊಳ್ಳುವುದರಿಂದ ತಾತ್ಕಾಲಿಕವಾಗಿ ಹಲ್ಲುಗಳು ಕಪ್ಪಾಗುತ್ತವೆಯಾದರೂ ಗಂಟಲು ನೋವಿನ ಹಿಂಸೆಗಿಂತ ಇದು ಮೇಲಲ್ಲವೇ?

ಬೆಳಿಗ್ಗೆ ತಿಂಡಿ ಮುಗಿಸಿದ ನಂತರ ಕೋಣಗಳನ್ನು ಅಟ್ಟಿಕೊಂಡು ಬರಲು ನಾಲ್ಕು ಜನರನ್ನು ಓಡಿಸಿದೆ. ನಾನು, ಮೂರು ದಿನಗಳ ಮುಂಚೆ ಹೆಂಗಸು ಬಲಿಯಾಗಿದ್ದ ಜಾಗದ ತನಿಖೆಗೆ ಹೊರಟೆ. ನಿನ್ನೆ ಹಳ್ಳಿಗರು ಈ ಜಾಗದ ಸ್ಪಷ್ಟ ಚಿತ್ರ ನೀಡಿದ್ದರಿಂದ ಅದನ್ನು ಹುಡುಕುವುದು ಕಷ್ಟವಾಗಲಿಲ್ಲ. ಅಲ್ಲಿ ನೋಡಿದಾಗ ಒಟ್ಟಾರೆ ಸಂಭವಿಸಿದ್ದೇನೆಂದು ಸ್ಪಷ್ಟವಾಗಿ ಕಾಣುತ್ತಿತ್ತು. ಈ ಹೆಂಗಸು ಹುಲ್ಲನ್ನು ಕೊಯ್ದು ಹೊರೆ ಕಟ್ಟಲು ಹೋದಾಗ ಈ ದುರಂತ ಸಂಭವಿಸಿತ್ತು. ಅವಳು ಹೊರೆ ಕಟ್ಟಲು ಸಿದ್ಧವಾಗುತ್ತಿದ್ದಾಗ ಹುಲಿ ಹಿಂದಿನಿಂದ ಆಕ್ರಮಣ ಮಾಡಿತ್ತು. ಅವಳ ಹುಲ್ಲಿನ ತೆಕ್ಕೆಗಳು ಹಾಗೂ ಅವನ್ನು ಕಟ್ಟಲು ತಂದಿದ್ದ ಹಗ್ಗ ಮೂರು ದಿನಗಳ ಮುಂಚೆ ಹೇಗೆ ಎಲ್ಲಿ ಬಿದ್ದಿದ್ದವೋ ಈಗಲೂ ಅಲ್ಲೇ ಬಿದ್ದಿದ್ದವು. ಅವುಗಳೊಂದಿಗೆ ಹುಲಿ ಆ ಹೆಂಗಸಿನ ಮೇಲೆ ದಾಳಿ ಮಾಡುತ್ತಿದ್ದಂತೆ ಭೀತಿಯಿಂದ ಕೂಗುತ್ತಾ ಹಳ್ಳಿಯತ್ತ ಓಡಿಹೋದ ಉಳಿದ ಹೆಂಗಸರ ಹೊರೆ-ಹಗ್ಗಗಳೂ ಬಿದ್ದಿದ್ದವು. ಹಳ್ಳಿಗರು 'ಹೆಂಗಸಿನ ಶವ ಸಿಕ್ಕಿಲ್ಲವೆಂದು' ಹೇಳಿದ್ದರು. ಆದರೆ ಅವಳು ತೆಗೆದುಕೊಂಡು ಹೋದ ಇನ್ನೊಂದು ಹಗ್ಗ ಮತ್ತು ಕುಡುಗೋಲು ಕಾಡಿನ ಒಳಗೆ ಸ್ವಲ್ಪ ದೂರದಲ್ಲಿ ಬಿದ್ದಿದ್ದವು. ಅಂದರೆ ಅವರು ಇವಳ ಹೆಣವನ್ನು ಹುಡುಕುವ ಗೋಜಿಗೇ ಹೋಗಿಲ್ಲ ಎಂದರ್ಥ.

ನೆಲಪಾತವಾಗಿ ಮಣ್ಣು ಜರಿದು ಸೃಷ್ಟಿಯಾಗಿದ್ದ ದಿಬ್ಬವೊಂದರ ಮೇಲ್ಭಾಗದಲ್ಲಿ ಹುಲಿ ಆ ಹೆಂಗಸನ್ನು ಕೊಂದಿತ್ತು. ಈ ದಿಬ್ಬ ನಮ್ಮ ಗುಡಿಸಲಿನ ಬಳಿಯಿಂದಲೂ ಕಾಣುತ್ತಿತ್ತು. ಮಣ್ಣು ಜರಿದ ತಗ್ಗಿನ ಕಡೆಗೆ ಜಾರಿಸಿ, ಪೊದೆಗಳಿಂದ ದಟ್ಟೈಸಿದ್ದ ಕಾಡಿನೊಳಕ್ಕೆ ಹುಲಿ ಅವಳನ್ನು ಎತ್ತಿಕೊಂಡು ಹೋಗಿತ್ತು, ಭಾಗಶಃ ಅಲ್ಲೇ ಹುಲಿ ಆ ಹೆಂಗಸನ್ನು ಪೂರ್ತಿಯಾಗಿ ಕೊಂದಿದೆ. ಆದರೆ ಅಲ್ಲಿಂದ ಓಡಿಹೋದ ಹೆಂಗಸರು ಕಣ್ಮರೆಯಾಗುವವರೆಗೂ ಕಾದಿದ್ದು ಅಲ್ಲಿಂದ ಮುಂದಕ್ಕೆ ಪರ್ವತದ ಇಳಿಜಾರಿನಲ್ಲಿದ್ದ ದಿಬ್ಬದ ಏಣನ್ನು ದಾಟಿ ನೇರವಾಗಿ ಒಂದು ಮೈಲಿಗಿಂತಲೂ ಹೆಚ್ಚು ದೂರವಿದ್ದ ದಟ್ಟಾರಣ್ಯದೊಳಕ್ಕೆ ಅವಳನ್ನು ಎಳೆದು ಸಾಗಿಸಿದೆ. ಇದು ಹೋದ ಜಾಡು ನಾಲ್ಕು ದಿನಗಳಷ್ಟು ಹಳೆಯದಾಗಿತ್ತು, ಈಗ ಇದನ್ನು ಹಿಂಬಾಲಿಸುವುದರಿಂದ ಬರುವ ಭಾಗ್ಯವೇನೂ ಇರಲಿಲ್ಲ, ಹಾಗಾಗಿ ನಾನು ಗುಡಿಸಲಿಗೆ ಹಿಂತಿರುಗಿದೆ.

ನಾನು ಈವರೆಗೂ ಇಳಿದುಹೋಗಿದ್ದ ಬೆಟ್ಟ ಹತ್ತಲು ನಾ ಕಠಿದಾಗಿತ್ತು, ನಾನು ಪ್ರಯಾಸದಿಂದ ಇದನ್ನು ತ್ತಬೇಕಾಯಿತು. ಹಾಗಾಗಿ ಗುಡಿಸಲಿಗೆ ಹಿಂತಿರುಗಿದಾಗ ಧ್ಯಾಹ್ನವಾಗಿತ್ತು. ಇಲ್ಲಿ ನೋಡಿದರೆ ಇಡೀ ಗುಡಿಸಲು ಡಿಕೆ-ಮಡಿಕೆಗಳಿಂದ ತುಂಬಿಹೋಗಿತ್ತು. ನಡುಮನೆಯ ಂಬಾ ವಿವಿಧ ಗಾತ್ರ- ಆಕಾರದ ಅಸಂಖ್ಯಾತ ಕುಡಿಕೆ ಡಿಕೆ-ಚೊಂಬು ಲೋಟಗಳು ಜೋಡಿಸಿದಂತೆ ಳಿತಿದ್ದವು. ಇವುಗಳಲೆಲ್ಲಾ ಹಾಲು ತುಂಬಿತ್ತು. ನಿನ್ನೆಯ ಲಿನ ದುರ್ಭಿಕ್ಷಕ್ಕೆ ಪ್ರತಿಯಾಗಿ ಇಂದು ಹಾಲಿನ ೊಳೆಯೇ ಹರಿಯುತ್ತಿತ್ತು. ಇಲ್ಲಿದ್ದ ಹಾಲನ್ನೆಲ್ಲಾ ಬಳಸಲೇ ೇಕೆಂದಾದರೆ ನಾವೆಲ್ಲರೂ ಅದರಲ್ಲಿ ಸ್ನಾನಮಾಡಬೇಕಿತ್ತು. ನು ಕೇಳುವ ಮುನ್ನವೇ ನಮ್ಮವರು.... 'ನಾವು ಬಹಳ ರೋಧಿಸಿದೆವು, ಆದರೆ ಅವರ್‍ಯಾರೂ ಕೇಳಲಿಲ್ಲ, ತಂದೂ ದೂ ಇಲ್ಲಿ ಜೋಡಿಸಿದರು. ಅಲ್ಲದೆ ಪ್ರತಿಯೊಬ್ಬರೂ.... ವು ಇಲ್ಲಿರುವವರೆಗೆ ಯಾವುದೇ ಕಾರಣದಿಂದ ಹಾಲಿನ ಡಿಯ ಆ ದಬ್ಬವನ್ನು ಬಳಸಬಾರದು ಎಂದು ಸೂಚಿಸಿ ೋಗಿದ್ದಾರೆ' ಎಂದು ಹೇಳಿದರು.

ಸಂಜೆಗೆ ಮುಂಚೆ ನಾನು ಮೋಹನಕ್ಕೆ ಕಳಿಸಿದ್ದ ಜನ ರುತ್ತಾರೆಂಬ ನಿರೀಕ್ಷೆ ನನಗೆ ಇರಲಿಲ್ಲ. ಹಾಗಾಗಿ ನಾನು ೂಟದ ನಂತರ ಚಕ್ಕಕಲ್ ರಸ್ತೆಯ ತನಿಖೆಯನ್ನು ೂರೈಸಬೇಕೆಂದು ತೀರ್ಮಾನಿಸಿ ಅತ್ತ ಹೊರಟೆ.

ನಾವಿದ್ದ ಗುಡಿಸಲಿನ ಹಿಂಭಾಗದ ಬೆಟ್ಟ ಕ್ರಮೇಣ ಡಿದಾಗುತ್ತಾ ಐನೂರು ಅಡಿಗಳಷ್ಟು ಎತ್ತರದವರೆಗೆ ಏರಿತ್ತು. ೋಡಲು ಸರಿಸುಮಾರು ತ್ರಿಕೋನಾಕಾರದಲ್ಲಿತ್ತು. ನಾನು ಾಗುತ್ತಿದ್ದ ದಾರಿ ಅರ್ಧ ಮೈಲಿಗಳಷ್ಟು ದೂರ ಕೃಷಿ ೂಮಿಗಳಲ್ಲಿ ಸಾಗಿ, ಅಲ್ಲಿಂದ ಹೊರಬಂದು ಬೆಟ್ಟದ ಡೆ ಸಾಗುವಲ್ಲಿ ತಟ್ಟನೆ ಎಡಭಾಗಕ್ಕೆ ತಿರುಗಿ ಬೆಟ್ಟದ ಲಾಮುಖಗಳ ನಡುವೆಯೇ ಹರಿದು ಮುಂದಿನ ಣಿವೆಯನ್ನು ಸೇರುತ್ತಿತ್ತು. ಅಲ್ಲಿಂದ ಬಲಕ್ಕೆ ತಿರುಗಿ ಕಣಿವೆಯ ಳಿಜಾರಿನುದ್ದಕ್ಕೂ ಸಾಗುತ್ತಾ ಚಕ್ಕಕಲ್ ತಲುಪುತ್ತಿತ್ತು. ಈ ನಡುವೆ ಶಿಲಾಮುಖಗಳಿಂದ ಹೊರಬಂದ ಲ್ಪದೂರದವರೆಗೆ ಮಾತ್ರ ಸಮತಟ್ಟಾದ ಜಾಗದಲ್ಲಿ ಸಾಗಿ, ಂತರ ತೀರಾ ಕಡಿದು ಮತ್ತು ಇಳಿಜಾರುಗಳ ನಡುವೆ ರಿದು ಅನೇಕ ಕಡೆ ಘಟ್ಟಗಳಾಗಿ ಮಾರ್ಪಟ್ಟಿತ್ತು, ಈ ಡುವೆ ಅನೇಕ ಹಿಮ್ಮುರಿ-ಮುಮ್ಮುರಿ ತಿರುವುಗಳಿದ್ದವು.

ನನ್ನ ಮುಂದೆ ಇಡೀ ಅರ್ಧದಿನ ಬಿದ್ದಿತ್ತು. ಹೀಗಾಗಿ ಾನು ಈ ಮೂರೂ ಮೈಲಿಗಳ ಉದ್ದದ ರಸ್ತೆಯನ್ನು ರೀಕ್ಷಿಸಲು ಹೊರಟೆ. ಇದು ಹುಲಿಯು ಖಾಯಂ ಾಗಿ ಓಡಾಡುವ ರಸ್ತೆಯಾಗಿತ್ತು. ಹಾಗೊಂದು ಪಕ್ಷ ನರು ಹೇಳುವಂತೆ ಅಥವಾ ನಾನು ಊಹಿಸಿದಂತೆ ದು ಹುಲಿಯ ಖಾಯಂ ದಾರಿಯಾಗಿದ್ದರೆ ಹುಲಿಯು ನ್ನದೇ ಆದ ಕೆಲವು ಗುರುತುಗಳನ್ನು ಬಿಟ್ಟು ಹೋಗಿರುತ್ತದೆ. ದರಲ್ಲಿ ಮುಖ್ಯವಾದವೆಂದರೆ ಅದರ 'ಕೆರೆದ' ಗುರುತು. ದನ್ನು ಆಂಗ್ಲ ಪರಿಭಾಷೆಯಲ್ಲಿ 'ಸ್ಕ್ರಾಚ್' ಎನ್ನುತ್ತಾರೆ. ದರರ್ಥ ಇಷ್ಟೇ, ಹುಲಿಯು ಸಾಮಾನ್ಯವಾಗಿ ತಾನು ಡಾಡುವ ದಾರಿಗಳ ಅಕ್ಕಪಕ್ಕದಲ್ಲಿ ಕೆರೆದು ಗುಂಡಿತೋಡಿ, ದರಲ್ಲಿ ಮಲ ವಿಸರ್ಜಿಸಿ, ಅದನ್ನು ಮುಚ್ಚಿಹೋಗಿರುತ್ತದೆ) ಾಗೂ ಅದರ ಹೆಜ್ಜೆ ಗುರುತುಗಳು. ಈ ಗುರುತುಗಳು ಾಮಾನ್ಯವಾಗಿ ತಟ್ಟನೆ ಕಣ್ಮರೆಯಾಗುವಂಥವಲ್ಲ. ಈ ರೆದ ಗುರುತುಗಳನ್ನು ಬೆಕ್ಕಿನಂಥ ಸಾಕುಪ್ರಾಣಿಯೂ ಯಾವ ಂಪ್ತಪ್ರಜ್ಞೆಯ ಕಾರಣದಿಂದ ಪ್ರೇರಿತವಾಗಿ ಮಾಡುತ್ತದೋ ುಲಿಗಳೂ ಸಹ ಅದೇ ಕಾರಣದಿಂದ ಮಾಡುತ್ತವೆ. ೆಕ್ಕಿನ ಜಾತಿಯ ಪ್ರಾಣಿಗಳಿಗೆ ಇದು ಸಾಮಾನ್ಯ ನಡವಳಿಕೆ. ಈ ಕೆರೆದ ಗುರುತು ಶಿಕಾರಿದಾರನೊಬ್ಬನಿಗೆ ಅಪರಿಚಿತ ಲದಲ್ಲಿ ಒಂದು ಪ್ರಾಣಿಯ ಬಗ್ಗೆ ಅನೇಕ ಮಾಹಿತಿಗಳನ್ನು ೊಡುತ್ತವೆ. ಅವುಗಳೆಂದರೆ ಒಂದು; ಅದನ್ನು ಮಾಡಿರುವ ್ರಾಣಿ ಹೆಣ್ಣೋ ಗಂಡೋ?, ಎರಡು; ಅದು ಯಾವ ಕ್ಕಿನಿಂದ ಬಂದು ಯಾವ ದಿಕ್ಕಿಗೆ ಹೋಗಿದೆ?, ಮೂರು ದು ಈ ಪ್ರಯಾಣಕ್ಕೆ ಎಷ್ಟು ಸಮಯ ತೆಗೆದುಕೊಂಡಿದೆ?, ಾಲ್ಕು; ಅದರ ಅಡಗುದಾಣಕ್ಕೆ ಇಲ್ಲಿಂದ ಅಂದಾಜು ಷ್ಟು ದೂರ ಇರಬಹುದು?, ಐದು; ಇತ್ತೀಚೆಗೆ ಅದು ಯಾವ ಪ್ರಾಣಿಯನ್ನು ಬೇಟೆಯಾಡಿ ತಿಂದಿದೆ? ಹಾಗೂ ಹಳ ಮುಖ್ಯವಾಗಿ; ಅದು ಇತ್ತೀಚೆಗೆ ಮನುಷ್ಯ ಾಂಸವನ್ನೇನಾದರೂ ತಿಂದಿದೆಯೇ? ಎಂಬಂಥ ಅಮೂಲ್ಯ ಾಹಿತಿಗಳು ಸುಲಭವಾಗಿ ಸಿಕ್ಕಿಬಿಡುತ್ತವೆ. ಇನ್ನು ಅದರ ೆಜ್ಜೆ ಗುರುತುಗಳು ಸುಸ್ಥಿತಿಯಲ್ಲಿ ನೋಡಲು ಗುವುದಾದರೆ ಅದರಿಂದ ಹುಲಿಯ ಲಿಂಗದ ಜೊತೆಗೆ ದರ ವಯಸ್ಸನ್ನು ಹೆಚ್ಚೂಕಡಿಮೆ ನಿಖರವಾಗಿ ೇಳಬಹುದು. ಇದರೊಂದಿಗೆ ಅದು ಹೋಗಿರುವ ವೇಗ, ುವುಗಳನ್ನೂ ಗುರುತಿಸಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಹುಲಿಯ ಯಾವುದಾದರೂ ಕಾಲು ವಿಕಲವಾಗಿದ್ದರೆ ದನ್ನೂ ಪತ್ತೆಮಾಡಬಹುದು. ವಿಕಲತೆಯ ಪ್ರಮಾಣ ೊಂದಿಗೆ ಯಾವ ಕಾಲು ಎಂದು ನಿಖರ ವಾಗಿಯೇ ೇಳಬಹುದು.

(ಮುಂದುವರೆಯುತ್ತದೆ)

(8ನೇ ಪುಟದಿಂದ)

ಉತ್ತರ: ದಂಗೆಕೋರರನ್ನು ಹೇಗೆ ಸರ್ಕಾರದ ಮತ್ತೊಂದು ಮುಖ ಎಂದು ಕರೆಯಲಾಗುತ್ತದೆ? ವರ್ಣ ಭೇದದ ವಿರುದ್ಧ ಹೋರಾಡಿದವರನ್ನು- ಅವರ ಕ್ರಮಗಳು ಅದೆಷ್ಟೇ ಹಿಂಸಾತ್ಮಕವಾಗಿದ್ದರೂ- ಸರ್ಕಾರದ ದೌರ್ಜನ್ಯದ ಇನ್ನೊಂದು ಮುಖ ಎಂದು ಹೇಗೆ ಕರೆಯಲಾಗುತ್ತದೆ? ಅಲ್ಜೀರಿಯಾದಲ್ಲಿ ಫ್ರಾನ್ಸ್ ಸರಕಾರದ ವಿರುದ್ಧ, ನಾಜಿಗಳ ವಿರುದ್ಧ ವಸಾಹತುಗಳ ವಿರುದ್ಧ ಇರಾಕನ್ನು ಆಕ್ರಮಿಸಿರುವ ಅಮೆರಿಕಾದ ವಿರುದ್ಧ- ಇವೆಲ್ಲವುಗಳಲ್ಲಿ ತೊಡಗಿಸಿಕೊಂಡಿರು ವವರನ್ನು ಹೇಗೆ ಸರ್ಕಾರದ ದೌರ್ಜನ್ಯದ ಇನ್ನೊಂದು ಮುಖ ಎಂದು ಕರೆಯಲಾಗುತ್ತದೆ?

ಇವತ್ತು ನಮ್ಮ ಹೋರಾಟ ಎಷ್ಟೇ ಪರಿಶುದ್ಧವಾಗಿರ ಬೇಕೆಂದು ನಾವು ಬಯಸಿದರೂ, ದುರಂತ ಯಾವುದೆಂದರೆ ನಮ್ಮ ಮುಂದೆ ಪರಿಶುದ್ಧ ಆಯ್ಕೆಗಳೇ ಇಲ್ಲದಿರುವುದು. ಉದಾಹರಣೆಗೆ: ಛತ್ತೀಸ್‌ಗಢದಲ್ಲಿ ಸರ್ಕಾರವೇ ಸೃಷ್ಟಿಸಿರುವ, ಸರ್ಕಾರವೇ ಪ್ರೋತ್ಸಾಹಿಸುತ್ತಿರುವ ಅಂತರ್ಯುದ್ಧ ನಡೆಯುತ್ತಿದೆ. ಆ ಯುದ್ಧದ ಹಿಂದಿನ ಸಿದ್ಧಾಂತವು ಬುಷ್ ಸರಕಾರದ ಸಿದ್ಧಾಂತಕ್ಕಿಂತ ಭಿನ್ನವಾಗಿಲ್ಲ. ಅದೇನೆಂದರೆ, 'ನೀವು ನಮ್ಮೊಂದಿಗಿಲ್ಲ ಎಂದಾದರೆ ಭಯೋತ್ಪಾದಕರೊಂದಿ ಗಿದ್ದೀರಿ ಎಂದೇ ಅರ್ಥ' ಎಂಬುದು. ಛತ್ತೀಸ್‌ಗಢದಲ್ಲಿ ನಡೆಯುತ್ತಿರುವ ಯುದ್ಧದ ಜೀವಾಳವೇ- ಸರ್ಕಾರದ ರಕ್ಷಣಾಪಡೆಗಳ ಹೊರತಾಗಿ- ಸಲ್ವಾ ಜುಡುಂ. ಸಾಮಾನ್ಯ ಜನರಿಗೆ ಬಲಾತ್ಕಾರದಿಂದ ಶಸ್ತ್ರಾಸ್ತ್ರಗಳನ್ನು ನೀಡಿ ಬೆಳೆಸಿರುವ ಸೈನ್ಯವೇ ಸಲ್ವಾಜುಡುಂ. ಇದೇ ತಂತ್ರವನ್ನು ಭಾರತದ ಸರ ಕಾರ ಕಾಶ್ಮೀರದಲ್ಲಿ, ಮಣಿಪುರದಲ್ಲಿ, ನಾಗಾಲ್ಯಾಂಡಿನಲ್ಲಿ ಬಳಸಿದೆ.

ಇದರಿಂದಾಗಿ ಹತ್ತಾರು ಸಾವಿರ ಜನರ ಕೊಲೆಯಾಗಿದೆ, ನೂರಾರು ಸಾವಿರ ಜನರನ್ನು ಅಮಾನುಷವಾಗಿ ಹಿಂಸಿಸಲಾಗಿದೆ, ಸಾವಿರಾರು ಜನ ನಾಪತ್ತೆಯಾಗಿದ್ದಾರೆ. ಇಂತಹ ದಾಖಲೆ ಯಾವುದೇ ಬನಾನಾ ರಿಪಬ್ಲಿಕ್ ಹೆಮ್ಮೆ ಪಡುವಂತಹದ್ದು. ಈಗ, ಇಂತಹ ಒಂದು ವಿಫಲ ಯತ್ನವನ್ನು ದೇಶದ ಹೃದಯ ಭಾಗಕ್ಕೆ ಭಾರತ ಸರಕಾರ ಆಮದು ಮಾಡಿಕೊಳ್ಳುತ್ತಿದೆ. ಸಾವಿರಾರು ಆದಿವಾಸಿಗಳನ್ನು — ಖನಿಜ ಸಂಪತ್ತನ್ನು ಹೊಂದಿರುವ ಅವರ ಹಳ್ಳಿಗಳಿಂದ — ಒಕ್ಕಲೆಬ್ಬಿಸಿ ಪೊಲೀಸರು ಸ್ಥಾಪಿಸಿರುವ ಕ್ಯಾಂಪ್‌ಗಳಿಗೆ ಸ್ಥಳಾಂತರಿಸ ಲಾಗಿದೆ. ಕಬ್ಬಿಣ ಅದಿರನ್ನು ಸಮೃದ್ಧವಾಗಿ ಹೊಂದಿರುವ ಆದಿವಾಸಿಗಳ ಭೂಮಿಯ ಮೇಲೆ ಟಾಟಾ ಮತ್ತು ಎಸ್ಸಾರ್‌ನಂತಹ ಕಾರ್ಪೊರೇಟ್‌ಗಳ ಕಣ್ಣು ಬಿದ್ದಿದೆ. ಈಗಾಗಲೇ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ, ಆದರೆ ಆ ಒಪ್ಪಂದಗಳ ರೂಪುರೇಶೆ ಗಳೇನೆಂದು ಯಾರಿಗೂ ಗೊತ್ತಿಲ್ಲ. ಈ ಮಧ್ಯೆ ಆ ಭೂಮಿಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದೆ. ಇಂತಹ ವಿದ್ಯಮಾನಗಳು ಜಗತ್ತಿನಲ್ಲೇ ಅತಿ ನಾಶವಾಗಿರುವ ಕೊಲಂಬಿಯಾದಂತಹ ದೇಶಗಳಲ್ಲಿ ಮಾತ್ರ ನಡೆಯುತ್ತಿದ್ದವು. ಎಲ್ಲರ ಗಮನವು ಸರಕಾರಿ ಪ್ರೇರಿತ ಸಶಸ್ತ್ರಧಾರಿಗಳ ಮತ್ತು ಗೆರಿಲ್ಲಾ ತಂಡಗಳ ನಡುವೆ ಹೆಚ್ಚುತ್ತಿರುವ ಹಿಂಸೆ-ಪ್ರತಿ ಹಿಂಸೆಯತ್ತ ಕೇಂದ್ರೀಕೃತವಾಗಿದ್ದಾಗ, ಬಹುರಾಷ್ಟ್ರೀಯ ಕಂಪೆನಿಗಳು ಸದ್ದಿಲ್ಲದೆ ಗಣಿ ಸಂಪತ್ತನ್ನು ಲೂಟಿ ಮಾಡುತ್ತವೆ. ಅಂತಹದ್ದೇ ಒಂದು ನಾಟಕ ಇವತ್ತು ಛತ್ತೀಸ್‌ಗಢದಲ್ಲಿ ನಡೆಯುತ್ತಿದೆ.

ಹೌದು, ಐವತ್ತೈದು ಪೊಲೀಸರನ್ನು ಕೊಂದಿದ್ದು ಒಂದು ಘೋರ ಕೃತ್ಯ. ಆದರೆ ಅವರೂ ಕೂಡ ಇತರರಂತೆ ಸರಕಾರದ ನಿಯಮಗಳ ಬಲಿಪಶುಗಳೇ. ಸರಕಾರಗಳಿಗೂ, ಕಾರ್ಪೊರೇಟ್‌ಗಳಿಗೂ ಅವರೆಲ್ಲ ಫಿರಂಗಿ ಬಲಿಗಳು ಮಾತ್ರವಲ್ಲ ಇನ್ನೂ ಹೆಚ್ಚು ಜನರನ್ನು ಫಿರಂಗಿ ಬಲಿಗಳಾಗಿ ಉಪಯೋಗಿಸಲಾಗುತ್ತದೆ. ಆ ಫಿರಂಗಿ ಬಲಿಗಳಿಗಾಗಿ ಮೊಸಳೆ ಕಣ್ಣೀರನ್ನು ಚೆಲ್ಲುತ್ತಾರೆ, ಟಿವಿ ಚಾನೆಲ್‌ಗಳಲ್ಲಿ ಸುದ್ದಿ ಓದುವವರು ಸ್ವಲ್ಪ ದಿನಗಳ ಕಾಲ ಬಹಳ ಬಿಂಕದಿಂದ ಬೊಬ್ಬೆಹಾಕುತ್ತಾರೆ. ಅದಾದ ನಂತರ ಮತ್ತಷ್ಟು ಫಿರಂಗಿ ಬಲಿಗಳ ಸರಬರಾಜಿಗೆ ವ್ಯವಸ್ಥೆ ಮಾಡಲಾಗುತ್ತದೆ. ಮಾವೋ ವಾದಿಗಳ ಪ್ರಕಾರ ಅವರು ಕೊಂದ ಪೊಲೀಸರು ಮತ್ತು ಸಲ್ವಾ ಜುಡುಂನ ಸದಸ್ಯರು ಬೇರಾರೂ ಅಲ್ಲ, ಅವರೆಲ್ಲ ದೌರ್ಜನ್ಯ, ಹಿಂಸೆ, ಬಂಧನದಲ್ಲಿನ ಸಾವುಗಳು, ನಕಲಿ ಎನ್‌ಕೌಂಟರ್‌ಗಳಲ್ಲಿ ತೊಡಗಿರುವ ಭಾರತ ಸರ್ಕಾರದ ಸಶಸ್ತ್ರ ಪಡೆಯಷ್ಟೇ. ಅವರ್‍ಯಾರೂ ಯಾವ ದೃಷ್ಟಿಕೋನ ದಿಂದಲೂ ಅಮಾಯಕರಲ್ಲ- ಅಮಾಯಕತೆ ಎನ್ನುವುದು ಇನ್ನೂ ಇದ್ದರೆ.


ಮಾವೋವಾದಿಗಳು ಕೂಡ ಹಿಂಸೆ ಮತ್ತು ದಬ್ಬಾಳಿಕೆಯ ಏಜೆಂಟರಾಗಬಲ್ಲರು ಎಂಬುದರ ಬಗ್ಗೆ ನನಗೆ ಯಾವುದೇ ಅನುಮಾನಗಳಿಲ್ಲ, ಅವರೂ ಕೂಡ ಘೋರ ಕೃತ್ಯಗಳಿಗೆ ಕಾರಣರಾಗಿದ್ದಾರೆ ಎಂಬುದರ ಬಗ್ಗೆಯೂ ನನಗೆ ಅನುಮಾನಗಳಿಲ್ಲ, ಹಾಗೆಯೇ ಸ್ಥಳೀಯ ಜನರಿಂದ ತಮಗೆ ನಿಸ್ಸಂಶಯ ಬೆಂಬಲವಿದೆ ಎಂಬ ಅವರ ಸಮರ್ಥನೆ ಬಗ್ಗೆಯೂ ನನಗೆ ಅನುಮಾನಗಳಿವೆ- ಆದರೆ ಸ್ಥಳೀಯ ಜನರ ಬೆಂಬಲ ನಮಗಿದೆ ಎಂದು ಸಮರ್ಥಿಸಲು ಇವತ್ತು ಯಾರಿಂದ ಸಾಧ್ಯ? ಆದರೂ ಯಾವುದೇ ಗೆರಿಲ್ಲಾ ಸೈನ್ಯ ಸ್ಥಳೀಯರ ಬೆಂಬಲವಿಲ್ಲದೆ ಇರಲು ಸಾಧ್ಯವಿಲ್ಲ, ಅದು ತಾರ್ಕಿಕವಾಗಿ ಅಸಾಧ್ಯ. ಇವತ್ತು ಮಾವೋವಾದಿಗಳಿಗೆ

ಭಾರತ ವಿಭಜನೆಗೊಂಡಿದೆ

ಬೆಂಬಲ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆ ಆಗುತ್ತಿಲ್ಲ. ಇದು ಏನನ್ನು ಸೂಚಿಸುತ್ತದೆ? ಯಾವ ಕಡೆ ಕಡಿಮೆ ಕೆಟ್ಟದ್ದು ಇದೆಯೋ ಅದರೊಂದಿಗೆ ಗುರುತಿಸಿಕೊಳ್ಳದೇ ಜನರಿಗೆ ಮತ್ತೊಂದು ಮಾರ್ಗ ಇಲ್ಲವೆಂಬುದನ್ನು. ಬೃಹತ್ತಾದ ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿರುವ ಒಂದು ಚಳವಳಿಯನ್ನೂ, ಅದೇ ಅನ್ಯಾಯಗಳನ್ನು ಹೇರು ತ್ತಿರುವ ಸರಕಾರವನ್ನೂ ಸಮೀಕರಿಸುವುದು ಅವಿವೇಕತನ. ಇವತ್ತು ಎಲ್ಲಾ ಅಹಿಂಸಾತ್ಮಕ ಚಳವಳಿಗಳಿಗೆ ಸರಕಾರ ತನ್ನ ಬಾಗಿಲನ್ನು ಮುಚ್ಚಿದೆ. ಜನರು ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡರೆ ಎಲ್ಲಾ ರೀತಿಯ ಹಿಂಸೆಗಳು- ಕ್ರಾಂತಿಕಾರಿ, ಅಸಂಘಟಿತ ಮತ್ತು ಕ್ರಿಮಿನಲ್ ಚಟುವಟಿಕೆಗಳು ಪ್ರಾರಂಭ ವಾಗುತ್ತದೆ. ಇಂತಹ ವಿಲಕ್ಷಣ ಸ್ಥಿತಿ ನಿರ್ಮಾಣವಾಗುವುದಕ್ಕೆ ಸರ್ಕಾರವೇ ನೇರವಾಗಿ ಜವಾಬ್ದಾರಿಯಾಗಿರುತ್ತದೆ

ಪ್ರಶ್ನೆ: ನಕ್ಸಲರು, ಮಾವೋವಾದಿಗಳು, ಹೊರಗಿನವರು... ಇಂತಹ ಪದಗಳನ್ನು ಇತ್ತೀಚೆಗೆ ತುಂಬಾ ಸಡಿಲವಾಗಿ ಉಪಯೋಗಿಸಲಾಗುತ್ತಿದೆಯಲ್ಲಾ?

ಉತ್ತರ: ಯಾವುದೇ ದಬ್ಬಾಳಿಕೆಯನ್ನು ಪ್ರಾರಂಭಿಸಿದಾಗ ಸರ್ಕಾರ ಮೊದಲು ಉಪಯೋಗಿಸುವ ಪದವೇ 'ಹೊರಗಿ ನವರು'. ಯಾಕೆಂದರೆ ತನ್ನ ಬಗೆಗಿನ ತನ್ನ ಪ್ರಚಾರವನ್ನೇ ನಂಬಿರುವ ಸರಕಾರಕ್ಕೆ ತನ್ನ ವಿರುದ್ಧವೇ ಜನ ದಂಗೆ ಎದ್ದಿದ್ದಾರೆ ಎಂದು ನಂಬುವುದು ಕಷ್ಟವಾಗುತ್ತದೆ. ಇಂತಹ ಒಂದು ಮನೋಸ್ಥಿತಿಯಲ್ಲಿ ಇವತ್ತು ಪಶ್ಚಿಮ ಬಂಗಾಳದ ಸಿಪಿಎಂ ಸರ್ಕಾರ ಇದೆ. ಹಲವರ ಪ್ರಕಾರ ಬಂಗಾಳದಲ್ಲಿ ದಬ್ಬಾಳಿಕೆ ಹೊಸದೇನಲ್ಲ, ಬದಲಾಗಿ ಈಗ ಹೊಸ ರೂಪ



ಪಡೆದಿದೆಯಷ್ಟೆ. ಆದೆಲ್ಲ ಬದಿಗಿರಲಿ, ಯಾರು ಹೊರಗಿನ ವರು? ಗಡಿಗಳನ್ನು ನಿರ್ಧರಿಸುವವರು ಯಾರು? ಆ ಗಡಿಗಳು ಅಂತ್ಯಗೊಳ್ಳುವುದೆಲ್ಲಿ? ಹಳ್ಳಿ? ಹೋಬ್ಳಿ? ತಾಲ್ಲೂಕು? ಜಿಲ್ಲೆ? ರಾಜ್ಯ? ಸೀಮಿತ ಸ್ಥಳೀಯ ಮತ್ತು ಸೀಮಿತ ಜನಾಂಗೀಯ ರಾಜಕೀಯ ಯಾವತ್ತು ಕಮ್ಯುನಿಸ್ಟರ ಮಂತ್ರವಾಯಿತು?

ಇನ್ನು ನಕ್ಸಲರು ಮತ್ತು ಮಾವೋವಾದಿಗಳ ಬಗ್ಗೆ ಹೇಳುವುದಾದರೆ... ಪೊಲೀಸ್ ರಾಜ್ಯವಾಗುವ ಹೊಸ್ತಿಲಿನಲ್ಲಿ ನಿಂತಿರುವ ಭಾರತದಲ್ಲಿ ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ವನ್ನು ವ್ಯಕ್ತಪಡಿಸುವವರೆಲ್ಲರೂ ಭಯೋತ್ಪಾದಕರು ಎಂಬ ಹಣೆಪಟ್ಟಿ ಹೊರುವುದಕ್ಕೆ ತಯಾರಾಗಿರಬೇಕಿದೆ. ಮುಸಲ್ಮಾನ್ ಭಯೋತ್ಪಾದಕರು ಇಸ್ಲಾಂ ಧರ್ಮಕ್ಕೆ ಸೇರಿರಬೇಕಾಗುತ್ತದೆ. ಆದ್ದರಿಂದ ನಮ್ಮಂತಹ ಇತರರನ್ನು ಮುಸಲ್ಮಾನ್ ಭಯೋತ್ಪಾದಕರು ಎಂದು ಕರೆಯಲಾಗುವುದಿಲ್ಲ. ಅವರಿಗೆ ಆ ಪದಕ್ಕಿಂತಲೂ ದೊಡ್ಡದಾದ ಸಂಗ್ರಹಾಸ್ಪದ ಪದ ಬೇಕಿದೆ. ಆದ್ದರಿಂದ ನಮ್ಮಂತಹವರನ್ನು ಬಣ್ಣಿಸಲು ಅವರು ಯಾವ ನಿರ್ದಿಷ್ಟ ಪದವನ್ನು ಉಪಯೋಗಿಸದಿರುವ ತಂತ್ರವನ್ನು ಅನುಸರಿಸುತ್ತಾರೆ. ಆದರೆ ನಮ್ಮೆಲ್ಲರನ್ನು ಮಾವೋವಾದಿಗಳೆಂದೋ, ನಕ್ಸಲರೆಂದೋ, ಭಯೋತ್ಪಾದಕ ರೆಂದೋ ಅಥವಾ ಭಯೋತ್ಪಾದಕರ ಬೆಂಬಲಿಗರೆಂದೋ ಹಣೆಪಟ್ಟಿ ಕಟ್ಟಿ ಬಂಧಿಸುವ ದಿನಗಳು ಬಹಳ ದೂರವಿಲ್ಲ. ಆದರೆ ನಮಗೆ ಅಂತಹ ವಿವಿಧ ಹಣೆಪಟ್ಟಿಗಳನ್ನು ನೀಡುವ ಮೂಲಕ ಮಾವೋವಾದಿಗಳೆಂದರೆ ಯಾರು, ನಕ್ಸಲರು ಎಂದರೆ ಯಾರು ಎಂದು ಗೊತ್ತಿರದಿರುವ ಅಥವಾ ಗೊತ್ತು ಮಾಡಿಕೊಳ್ಳಲು ಇಚ್ಛಿಸದಿರುವ ಜನರಿಂದ ನಮ್ಮನ್ನು ನಿರ್ಬಂಧಿಸುವ ಯತ್ನ ನಡೆಯುತ್ತದೆ. ಈಗಾಗಲೇ ಈ ಪ್ರಕ್ರಿಯೆ ನಮ್ಮ ಹಳ್ಳಿಗಳಲ್ಲಿ ಪ್ರಾರಂಭವಾಗಿದೆ. ಸರ್ಕಾರವನ್ನು ಉರುಳಿಸುವ ಯತ್ನ ಮಾಡುತ್ತಿದ್ದ ಭಯೋತ್ಪಾದಕರೆಂದು ಆರೋಪಿಸಿ ಈಗಾಗಲೇ ದೇಶದೆಲ್ಲೆಡೆ ಸಾವಿರಾರು ಜನರನ್ನು ಬಂಧಿಸಲಾಗಿದೆ.

ಪ್ರಶ್ನೆ: ಮಾವೋವಾದಿಗಳು ಈ ಸರ್ಕಾರವನ್ನು ಉರುಳಿಸಬೇಕು ಎಂಬ ಧೋರಣೆಯನ್ನು ಹೊಂದಿದ್ದಾರೆ. ಆದರೆ ಅವರ ನಿರಂಕುಶ ಸಿದ್ಧಾಂತವನ್ನು ಪರಿಗಣಿಸಿದರೆ ಅವರು ಎಂತಹ ಪರ್ಯಾಯವನ್ನು ನೀಡಬಲ್ಲರು? ಅವರು ಕೂಡ ಒಂದು ಹಿಂಸಾತ್ಮಕ, ದೌರ್ಜನ್ಯದ ವ್ಯವಸ್ಥೆಯನ್ನೇ ನೀಡಬಹುದಲ್ಲವೇ? ಈಗಾಗಲೇ ಅವರು ಸಾಮಾನ್ಯ ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರಲ್ಲವೇ? ಅವರಿಗೆ ನಿಜವಾಗಲೂ ಸಾಮಾನ್ಯ ಜನರ ಬೆಂಬಲವಿದೆಯೇ?

ಉತ್ತರ: ಮಾವೋ ಮತ್ತು ಸ್ಟಾಲಿನ್ ಇಬ್ಬರೂ ಕೊಲೆಗಡುಕ ಇತಿಹಾಸವನ್ನು ಹೊಂದಿದ್ದ ನಾಯಕರು ಎಂಬುದನ್ನು ನಾವು ಒಪ್ಪಿಕೊಳ್ಳಬೇಕಿದೆ. ಅವರ ಅಧಿಕಾರದಡಿ ಲಕ್ಷಾಂತರ ಜನರನ್ನು ಕೊಲ್ಲಲಾಗಿತ್ತು, ಚೈನಾ ಮತ್ತು ರಷ್ಯಾದಲ್ಲಿ ನಡೆದ ಕೃತ್ಯಗಳಲ್ಲದೆ, ಚೀನಾದ ಕಮ್ಯುನಿಸ್ಟ್ ಸರ್ಕಾರದ ಸಹಯೋಗದೊಂದಿಗೆ — ಪಾಶ್ಚಿಮಾತ್ಯ ದೇಶಗಳು ಬೇಕಂತಲೇ ಜಾಣ ಕುರುಡನ್ನು ಪ್ರದರ್ಶಿಸಿದಾಗ - ಕಾಂಬೋಡಿಯಾದ ಪಾಲ್‌ಪಾಟ್ ಎರಡು ಮಿಲಿಯನ್ ಜನರನ್ನು ಕೊಂದದ್ದು, ಹಸಿವು ಮತ್ತು ರೋಗಗಳಿಗೆ ಲಕ್ಷಾಂತರ ಜನ ಸಾವಿಗೀಡಾಗುವಂತೆ ಮಾಡಿದ್ದನ್ನು ನಾವು ಮರೆಯಬಾರದು. ಚೈನಾದ ಸಾಂಸ್ಕೃತಿಕ ಚಳವಳಿ ನಡೆಯಲಿಲ್ಲ ಎಂದು ನಾವು ವಾದಿಸಲಾಗುತ್ತದೆಯೇ? ಹಾಗೆಯೇ ರಷ್ಯಾ ಮತ್ತು ಪೂರ್ವ ಯೂರೋಪಿನಲ್ಲಿ ಬಾತ್ಮೀದಾರರು, ಪೊಲೀಸರು ಮತ್ತು ಮಾಹಿತಿದಾರರ ನೆರವಿನೊಂದಿಗೆ ಕಾರ್ಮಿಕರ ಕ್ಯಾಂಪುಗಳಲ್ಲಿ, ಹಿಂಸೆಯ ಕೊಠಡಿಗಳಲ್ಲಿ, ಲಕ್ಷಾಂತರ ಜನರ ಬಲಿಯಾಗಿದ್ದನ್ನು ಮರೆಯಲಾದೀತೆ? ಪಾಶ್ಚಿಮಾತ್ಯ ವಸಾಹತುಶಾಹಿಗಳ ಇತಿಹಾಸದಷ್ಟೇ ಈ ಕಮ್ಯುನಿಸ್ಟರ ಅಧಿಕಾರಾವಧಿಗಳೂ ದಟ್ಟ ದಾರಿದ್ರ್ಯದಿಂದ ಕೂಡಿದ್ದವು, ಆದರೆ ಅದೃಷ್ಟವಶಾತ್ ಇವುಗಳೆಲ್ಲ ಅಲ್ಪಸಮಯದಲ್ಲೇ ಅಂತ್ಯಗೊಂಡವು. ಇರಾಕ್, ಪ್ಯಾಲೆಸ್ಟೇನ್ ಮತ್ತು ಕಾಶ್ಮೀರದ ಮೇಲಿನ ಆಕ್ರಮಣಗಳನ್ನು ಖಂಡಿಸುವ ನಾವು ಟಿಬೆಟ್ ಮತ್ತು ಚೆಚೆನ್ಯಾದಲ್ಲಿ ನಡೆದಿರುವ ದೌರ್ಜನ್ಯದ ಬಗ್ಗೆ ಮೌನ ವಹಿಸಲಾಗುವುದಿಲ್ಲ. ನನ್ನ ಪ್ರಕಾರ ಮಾವೋವಾದಿಗಳಾಗಲಿ, ನಕ್ಸಲರಾಗಲಿ, ಚುನಾವಣಾ ರಾಜಕೀಯದಲ್ಲಿ ತೊಡಗಿರುವ ಎಡಪಂಥೀಯ ಪಕ್ಷಗಳಾಗಲಿ, ಇತಿಹಾಸದ ಬಗ್ಗೆ ಪ್ರಾಮಾಣಿಕರಾಗಿದ್ದರೆ ಮಾತ್ರ ಅವರೆಲ್ಲರೂ ಭವಿಷ್ಯದ ಬಗ್ಗೆ ಜನರಲ್ಲಿ ಭರವಸೆಯನ್ನು ಮೂಡಿಸಲು ಸಾಧ್ಯ. ಇತಿಹಾಸದಲ್ಲಿ ಆಗಿದ್ದು ಪುನರಾವರ್ತನೆ ಆಗಬಾರ ದೆಂದು ನಾವು ಆಶಿಸುತ್ತೇವೆ. ಆದರೆ ಅಂತಹದ್ದು ಯಾವುದೂ ನಡೆದೇ ಇಲ್ಲ ಎಂದು ವಾದಿಸಿದರೆ ಜನರಲ್ಲಿ ಸ್ಫೂರ್ತಿಯನ್ನು ಚಿಮ್ಮಿಸಲಾಗುವುದಿಲ್ಲ. ಆದಾಗ್ಯೂ ರಾಜವಂಶದ ವಿರುದ್ಧ ನೇಪಾಳದಲ್ಲಿ ಮಾವೋವಾದಿಗಳು ದೃಢವಾದ ಮತ್ತು ಯಶಸ್ವಿಯಾದ ಹೋರಾಟವನ್ನು ಮಾಡಿದ್ದಾರೆ. ಈಗ ಭಾರತದಲ್ಲಿ ಮಾವೋವಾದಿಗಳು ಮತ್ತು ಇತರೆ ಮಾರ್ಕಿಸ್ಟ್-ಲೆನಿನಿಸ್ಟ್ ಗುಂಪುಗಳು ಅನ್ಯಾಯದ ವಿರುದ್ಧ ದೊಡ್ಡ ಸಂಗ್ರಾಮವನ್ನೇ ನಡೆಸಿವೆ. ಅವರು ಸರ್ಕಾರದ ವಿರುದ್ಧ ಮಾತ್ರ ಹೋರಾಡುತ್ತಿಲ್ಲ, ಅದರೊಂದಿಗೆ ಊಳಿಗಮಾನ್ಯ ವ್ಯವಸ್ಥೆ ಮತ್ತು ಆ ವ್ಯವಸ್ಥೆಯ ಸೈನ್ಯದೊಂದಿಗೂ ಹೋರಾಡುತ್ತಿದ್ದಾರೆ. ಪರಿಣಾಮಕಾರಿಯಾಗಿ ಹೋರಾಟ ಮಾಡುತ್ತಿರುವವರು ಅವರೇ. ಅವರನ್ನು ನಾನು ಅಭಿನಂದಿಸುತ್ತೇನೆ. ಮುಂದೊಂದು ದಿನ ಅವರೇ ಅಧಿಕಾರಕ್ಕೆ ಬಂದು ಇವತ್ತಿನ ಸರ್ಕಾರಕ್ಕಿಂತಲೂ ಹೆಚ್ಚು ದಬ್ಬಾಳಿಕೆ, ದೌರ್ಜನ್ಯ ಮತ್ತು ಅನ್ಯಾಯದ ವ್ಯವಸ್ಥೆಯನ್ನು ಸ್ಥಾಪಿಸ ಬಹುದು. ಆದರೆ ಆ ಕಾಲ್ಪನಿಕ ಭವಿಷ್ಯದ ಬಗ್ಗೆ ಈಗಲೇ ನಾನು ನಿರ್ಧಾರ ತೆಗೆದುಕೊಳ್ಳಲಾರೆ. ಆಕಸ್ಮಾತ್ ಅವರೂ ಹಾಗೇ ಆದರೆ ಅವರನ್ನೂ ನಾವು ವಿರೋಧಿಸಬೇಕು. ಅಂತಹ ಸಂದರ್ಭದಲ್ಲಿ ಪ್ರಾಯಶಃ ನನ್ನಂತಹವರೇ ಮೊದಲು ಹತ್ತಿರದ ಮರದ ರೆಂಬೆಯಿಂದ ನೇತಾಡುತ್ತಿರುತ್ತೇವೆ... ಆದರೆ ಇವತ್ತಿನ ಅವಶ್ಯಕತೆ ಯಾವುದೆಂದರೆ ಪ್ರಸ್ತುತ ಹೋರಾಟಗಳಲ್ಲಿ ಅತಿಹೆಚ್ಚು ನಷ್ಟಗಳನ್ನು ಅನುಭವಿಸುತ್ತಿರು ವವರು ಅವರೇ ಎಂಬುದನ್ನು ನಾವು ಗುರುತಿಸಬೇಕಿರು ವುದು.

ಅಧಿಕಾರಕ್ಕೆ ಬರುತ್ತಿದ್ದಂತೆ ಬದಲಾವಣೆಗಳಾಗುತ್ತವೆ ಎಂಬುದು ನಿಜ. ಉದಾಹರಣೆಗೆ ನೆಲ್ಸನ್ ಮಂಡೇಲಾರವರ ಎ.ಎನ್.ಸಿ ಅನ್ನೇ ತೆಗೆದುಕೊಳ್ಳಿ. ಭ್ರಷ್ಟಾಚಾರ, ವಸಾಹತು ಶಾಹಿ ಧೋರಣೆ, ಐಎಂಎಫ್ ಮುಂದೆ ದೊಗ್ಗು ಸಲಾಮು. ಇವೆಲ್ಲವುಗಳೊಂದಿಗೆ ಇಂಡೋನೇಷಿಯಾದಲ್ಲಿ ಲಕ್ಷಾಂತರ ಕಮ್ಯುನಿಸ್ಟರನ್ನು ಕೊಂದಿದ್ದ ಸುಹಾರ್ತೋಗೆ ದಕ್ಷಿಣ ಆಫ್ರಿಕಾದ ಸರ್ವೋನ್ನತ ಪ್ರಶಸ್ತಿಯ ಪ್ರದಾನ.... ಇದೆಲ್ಲವನ್ನೂ ಎಎನ್‌ಸಿ ಮಾಡುತ್ತದೆ ಎಂದು ಯಾರಾದರೂ ಕಲ್ಪಿಸಿಕೊಳ್ಳುವುದು ಸಾಧ್ಯವಿತ್ತಾ? ಆದರೆ ಇದೆಲ್ಲ ಆಗುತ್ತಿದೆ ಎಂದ ಮಾತ್ರಕ್ಕೆ ವರ್ಣಭೇದದ ವಿರುದ್ಧ ಅಲ್ಲಿನ ಜನರು ಹೋರಾಟ ಮಾಡಬಾರದಿತ್ತಾ? ಅಥವಾ ಹಾಗೆ ಹೋರಾಟ ಮಾಡಿದ್ದರ ಬಗ್ಗೆ ಇವತ್ತು ಪಶ್ಚಾತ್ತಾಪ ಪಡಬೇಕಾ? ಹಾಗೆಯೇ ಇವತ್ತಿಗೂ ಫ್ರಾನ್ಸ್ ದೇಶದ ವಸಾಹತುವಾಗಿಯೇ ಅಲ್ಜೀರಿಯಾ ಉಳಿದಿರಬೇಕಿತ್ತಾ? ಕಾಶ್ಮೀರಿ, ಇರಾಕ್ ಮತ್ತು ಪ್ಯಾಲೆಸ್ಟೇನ್ ದೇಶಗಳು ಸೈನ್ಯದ ಅತಿಕ್ರಮವನ್ನು ಒಪ್ಪಿಕೊಳ್ಳಬೇಕಾ? ನಮ್ಮ ಸ್ವಾಭಿಮಾನದ ಮೇಲೆ ಹಲ್ಲೆ ಆಗುತ್ತಿದ್ದರೂ ನಮ್ಮ ಹೋರಾಟದ ನಾಯಕತ್ವವನ್ನು ವಹಿಸಿಕೊಳ್ಳಬಲ್ಲ ಸಂತನೊಬ್ಬ ಸಿಗಲಿಲ್ಲ ಎಂದು ಸುಮ್ಮನಿರಬೇಕಾ?

-ಗೌರಿ ಲಂಕೇಶ್

ಸರಕಾರಕ್ಕೆ ಸೆಕ್ಸ್ ಪ್ರಾಬ್ಲಮ್ ಸುರುವಾಗ್ಯದಂತೆ!

ಮೌನವಾದಲು ಯಾವ ಸಂಗತಿಗಳೂ ಇಲ್ಲದ್ದ ರೀತಿ ಕಾಳಮಾವ.

"ಮೊನ್ನೆದಿನ ಕಾಲೆಯಲ್ಲ ನೀವು. ಎಲ್ಲಿಗೋಗಿದ್ರೀ?" ಎಂದ.

"ಮುಂಡೇವುಕೋಗಿದ್ದೊ ಕಣಮಾವ."

"ಮುಂಡೇವುದಲ್ಲೇನು ಕೆಲಸಿತ್ತೂ?"

"ಅಂತ ಕೆಲಸೇನು ಇರಲಿಲ್ಲ, ಸುಮ್ನನೆ ಹೋಗಿದ್ದೊ" ಎಂದಳು ಜುಮ್ಮಿ.

"ಲೀಡ್ರಾದೋರು ಊರಲ್ಲಿದ್ರೆ ಬ್ಯಲೆ ಕಮ್ಮಿ

ಚಿನಾಲಿ ಸಿಲೆಮೆಯಾ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಕಣಮಾವ. ಅದ್ಕೆ ಏನು ಮಾಡ್ತರಪ್ಪ ಅಂದ್ರೇ ಏನೂ ಕ್ಯಲಸಿಲ್ಲದೆಯಿದ್ರು ತಾಲೋಕು ಜಿಲ್ಲೆ ಅಂತ ಸುಮ ಸುಮ್ಮನೆ ತಿರಿಗಿ ಬತ್ತವೆ" ಎಂದ ಉಗ್ರಿ.

"ಯಾರಾರ ನಿಜ ಅನ್ನಬೇಕು ಕಂದ್ಯ" ಎಂದಳು ಜುಮ್ಮಿ.

"ನೋಡೆ ನಿನ್ನಲ್ಲಿ ಅದಿಲ್ಲದೆ ಇರಬವುದು. ನಿನ್ನ ಸುತ್ತಯಿರೋ ಜಿಲ್ಲಾ ಪಂಚಾತಿ ಮಂಡ್ಯು ಪಂಚಾತಿ ಮೆಂಬ್ರು ನೋಡು. ಯಾವ ಕ್ಯಲಸಿಲ್ದೆಯಿದ್ರು ಯಂಗೆ ನಾಯಿ ತಿರಿಗಿದಂಗೆ ತಿರುಗ್ತವೆ."

"ಯಾಕ್ ತಿರುಗ್ತವೆ?"

"ಯಾಕೆ ಅಂದ್ರೆ ಮನೆ, ವಲ, ತ್ವಾಟ ಅಂತ ಹೋದ್ರೆ ಓಹೋ ಇವುನ ಪವರು ಕಡಿಮ್ಯಾಯ್ತು. ರಾಜಕಾರಣದಲ್ಲಿ ಇವುನು ಮಗ್ಗುಲು ಕೊಟ್ಟವುನೆ. ಅದ್ಕೆ ವಲ್ತಕ್ಕೋಯ್ತನೆ, ಮನೆತವುಲೆ ಅವುನೆ ಅಂತ ತಿಳಕತ್ತರಂತೆ."

"ಜನ ಯಂಗಿದ್ರು ತಿಳಕತ್ತರೆ ಬುಡು."

"ಅದ್ಕೆ ಈ ಬಡ್ಡೆತ್ತವು, ಯಾವುದಾರ ಒಂದು ಮೂರಾಣೆ ಪೇಪರ್ ಹಿಡಕಂಡು ಯಾವುದಾರ ಹೋಟ್ಲಲಿ ಯಾವನ ಕೈಯಿಂದ್ಲಾರ ಕಾಫಿ ತಿಂದಿಗೆ ಯವಸ್ಥೆ ಮಾಡಿಕಂಡು ತಾಲೋಕಾಫೀಸು ಪಂಚಾತಿ ಆಫೀಸತ್ರ ತಿರಿಗಿ ಮನಿಗೆ ಬತ್ತವೆ."

"ನಿಜ ಕಂದ್ಯ, ಇಲ್ಲಿ ಪಂಚಾತಿ ಮೆಂಬ್ರು ಯಾಕಂಗೆ ತಿರುಗ್ತವೆ ಅಂತ ಈಗ್ಗೊತ್ತಾಯ್ತು."

"ಅದಿರ್ಲಿ, ನೀವ್ಯಾಕೆ ಮಂಡೇವುಕೋಗಿದ್ರಿ ಹೇಳಿರ್ಲ?" ಎಂದ ಕಾಳಮಾವ.

"ಅದೂ, ಈ ಕಾವೇರಿ ಚಳವಳಿ ಎಲ್ಲಿಗೆ ಬತ್ತು, ಮಂಡ್ಯ ಏನಾಗ್ಯದೆ ಅಂತ ನೋಡಕ್ಕೋಗಿದ್ದೊ. ಯಲ್ಲ ಚನಾಗಿರಂಗೆ ಕಾಣ್ತು, ಅದ್ಕೆ ಅತ್ಲಗೆ ಸಿನುಮಾ ನೋಡನ ಅಂತ ಹೋದ್ದೊ."

"ಸಿನುಮ್ಯಾವುದೂ?"

"ದುನಿಯಾ ಅಂತ."

"ಇಂದಿ ಸಿನುಮನೆ."

"ಹಿಂದಿನೂ ಅಲ್ಲ, ಮರಾಟಿನೂ ಅಲ್ಲ, ಕನಡ ಸಿನುಮ. ಆದ್ರು ಈಟಿಗೆ ಹಿಂದಿ ಇಂಗ್ಲಿಸ್ ಹೆಸುರು ಮಡುಗ್ತ ಅವುರೆ."

"ಅಂಗರೆ ಕನ್ನಡದಲ್ಲಿ ಹೆಸುರು ತೀರೋದೊ ಅನ್ನು?"

"ಕನ್ನಡದಲ್ಲಿ ಸಿನುಮ ಹೆಸರಿಡಕ್ಕಾಗದೆಯಿರೊವಷ್ಟು ಸಿನುಮ. ಎಲ್ಲಿ ತಗದವುರೆ ಮಾವ, ಇವುರಿಗೆ ತಲೆ ಕಡಮೆ ಆಗಿರದ್ರಿಂದ ಸಿನುಮ ದೆಸುರು ವಳಿತಯಿಲ್ಲ."

"ದುನಿಯಾ ಚನಾಗಿತ್ತೆ?"

"ಚನಾಗಿತ್ತು ಕಣಮಾವ, ನಾನಂತ ಸಿನುಮ ಇದೆ ಪಸ್ಟು ನೋಡಿದ್ದು."

"ಯೀರೊ ಯಾರ್ಲೆ?"


"ಯೀರೋ ವಸಬ ಕಣಮಾವ, ಅವು ನ್ಯಂಗವುನಪ್ಪ ಅಂದ್ರೆ ಈ ನಮ್ಮ ನಿಂಗಣ್ಣನ ಮಗವುನೆ ನೋಡು, ಅವುನ್ನ ನೋಡಿದ ಮ್ಯಾಲೆ ನೋಡ್ಬೈಬ್ಯಾಡ ಅಂಗವುನೆ."

"ಅಂಥೋನು ಯೀರೊ ಆಗಿದ್ದನೆ?"

"ಊ ಕಣೊ, ಇವತ್ತು ಯಲ್ಲ ಬದ್ಲಾ ಗ್ಯದೆ. ಮದ್ಲಾಗೆ ಸಿನುಮ ಆಗುಟ್ರಾಗೋನು ಸುಂದರ ಪುರುಸಾಗಿರಬೇಕು, ಮೂಗು ನೀಟಾಗಿರಬೇಕು, ಮುಕ ನೀಟಾಗಿರಬೇಕು, ಆಳು ವಳ್ಳೆ ಎದ್ವಾಳಾಗಿರಬೇಕು ಅಂತ ಹುಡಕೋರು. ಈಗಂಗಲ್ಲ, ಚನ್ನಾಗಿ ಆಕ್ಟ್ ಮಾಡಿದ್ರು ಸಾಕು ಅವುನ್ಯಂಥೋನಾರ ಆಗಿರ್ಲಿ ಅನ್ನೊ ಕಾಲ ಬಂದದೆ."

"ಸಿನುಮದ ಕತೆ ಹೇಳೊ ಉಗ್ರಿ" ಎಂದ ಚಿಕ್ಕ.

"ಕತೆ ಅಂತ ದ್ವಡ್ಡ ಕತೆ ಏನಲ್ಲ ಕಣೊ. ಮಾಮೂಲಿ



ಯಂಗೆ ಒಂದೇ ಯಳೆ. ಕಲ್ವದ್ರ ಪೈಕಿಲಿ. ಅವ್ವ ಮಗ ಅರೆಬಂಡೆ ಕ್ಯಲಸ ಮಾಡ್ತಯಿರತರೆ, ಆ ವಮ್ಮನಿಗೆ ಉಸಾರ ತಪ್ಪತದೆ. ಹುಡುಗ ಅವ್ವನ್ನ ಹೊತಗಂಡು ಆಸುಪತ್ರಿಗೋಯ್ತನೆ. ಅಲ್ಲಿ ಇಂಜೆಷನ್ನು ಅವುಸ್ಕಿ ಚೀಟಿತ ಗಂಡು ಎಲ್ಲೆಲ್ಲೊ ದುಡ್ಡೊಂಚಗಂಡು ಹೋಗೋವಷ್ಟ ರಲ್ಲಿ ಅವ್ವ ಸತ್ತೋಯ್ತಳೆ."

"ನಮ್ಮ ಹೊಂಬವುನ್ದು ಅಂಗೆ ಆಗಿರಲಿವೆ. ಗಂಡ ದನಮಾರಿ ದುಡ್ಡು ತಗಂಡೋಗೊವತ್ತಿಗೆ ಅವುಳು ಗ್ವಟುಕ್ಕಂದಿದ್ಲು" ಎಂದ ಸೀರ.

"ಇಲ್ಕು ಅಂಗೆಯ, ಕಡಿಗೆ ಹುಡುಗ ಅವರವ್ವನ್ನ ದಪುನ್ ಮಾಡಿ ಅವಳ ಸಮಾದಿ ಮ್ಯಾಲೊಂದು ಗೋರಿಮಾಡನ ಅಂತ ವಂಡತನೆ. ಆಗ ಕಣಯ್ಯ ಕತೆ ಸುರುವಾಗದು."

"ಬಾರಿ ದಡದಾಟದೆ ಅನ್ನು?"

"ದಡದಾಟ ಅಂತ ಕೇಳಿಯು, ಭೂಗತ ಲೋಕದೋ ಸವಾಸಕ್ಕೆ ಬೀಳ್ತನೆ ಅಂದ್ರೆ ಆಗಾಗ್ಗೆ ಮಚ್ಚಿನ ಸವುಂಡಾಯ್ತಿ ರಬೇಕು, ಹ್ಯಣ ಬೀಳತಯಿರಬೇಕು."

"ಭೂಗತ ಲೋಕ ಅಂದ್ರೇನ್ಲ?" ಎಂದ ಕಾಳಮಾ

"ಇದೇನೂ ಮಾವ ಹಿಂಕೇಳ್ತಿ? ಇದೇ ನಮ್ ಕ್ಯಾಟೇಗೌಡನುದಗ ಇದ್ದಿದ್ನು ಅವುರ ಜ್ವತೆಲಿ ಅಲ ಯಾರಿಗೂ ಕಾಣದಂಗೆ ಎಲ್ಲೊ ಇದ್ದಕಂಡು ದ ವಸೂಲು ಕ್ವಲೆ ಸುಲಿಗೆ ಮಾಡ್ತರಲ್ಲ, ಅವುರದೇ ಒಂ ಲೋಕದೆ. ಅದೇ ಭೂಗತಲೋಕ."

"ಯಾರಿಗೂ ಕಾಣದಂಗೆ ಯವಾರ ಮಾಡ ಭೂಗತ ಲ್ಯಾಕ ಅನ್ನು?" ಎಂದ ಸೀರ.

"ಯಾರಿಗೂ ಕಾಣದಂಗೆ ಎಲ್ಲೋ ಹೋ ಬರದ್ಕು ಭೂಗತ ಲೋಕದ ಚಟುವಟ ಅಂತರೆ ಚಿಗಪ್ಪ, ಪರೆಗ್‌ಜಾಂಪಲ್ ಮ ಕುಮಾರಸ್ವಾಮಿ. ಮಂಗಳೂರಿ ಗೋ ಬಂದನಲ್ಲ, ದಟೀಸಾಲ್ಟೊ ಅಂಡರ್‌ವರ ಆಕ್‌ಟಿವಿಟಿ" ಎಂದುಕೊಂಡು ವಾಟಿ ಹಾಜರಾದ.

"ಯಾರಿಗೂ ಕಾಣದಂಗ್ಯಾಕೋಗಿದ್ದ?"

"ಸೆಕ್ಸ್ ಪ್ರಾಬ್ಲಮ್ ಅಂತ ಸುದ್ದಿ ಕಣ ಸರ್ಕಾರ ಈಗ ಸೆಕ್ಸ್ ಪ್ರಾಬ್ಲಮ್ಮಲದೆ."

"ಅದೇನು ಸೆಕ್ಸ್ ಪ್ರಾಬ್ಲಮ್ಮ, ಸರಿಯಾ ಮಾತಾಡ್ಯ."

"ನೋಡಕ್ಕ ಕುಮಾರಣ್ಣನ ನಡವಳಿಕೆ ಮದ್ದ ತರ ಇಲ್ಲ ಅನ್ನದ ಒಪ್ಪಿಗತಿಯ."

"ಅವುನ್ಯಾವತ್ತು ನ್ಯಟ್ಟಗಿದ್ದೊ ವಾಟಿಸ್ಸೆ?" ಎಂದ ಉಗ್ರಿ.

"ಹೋಗ್ಲಿ ಕರಟ್ಟಾಗಿರಂಗೆ ಕಾಣಿಸಿಗುತ್ತಾ ಇದ ಅನ್ನದನಾರ ಒಪ್ಪಿಗತಿಯ?"

"ಆಯ್ತು ಹೇಳು."

"ಇತ್ತೀಚೆಗೆ ಅವುನು ಸಿನಿಮಾ ನಟ ಮನೆ ಲಿದ್ ಇನ್‌ಕಂ ಟ್ಯಾಕ್ಸನೋರು ಕೈಗೆ ಸಿಗದರ ಲ್ಲಿದ್ದು ಬಚಾವಾದ ಅಂತ ಸುದ್ದಿ ಕೇಳಿದ್ರ?"

"ಅದಾಗ್ಲೆ ಹಳೆ ಸುದ್ದಿಯಲವೇನೊ?"

"ಈಗಿನ ಸುದ್ದಿ ಪ್ರಕಾರ, ಇನ್ನ್ಯಾರೊ ವಬ್ಬಳು ಸಿನಿಮಾ ನಟ ಕುಮಾರಣ್ಣನಿಗೆ ಗಂಟುಬಿದ್ದಂತೆ. ಪ್ರಗ್ನೆಂಟಾದಳಂತೆ. ಅವುಳು ಅಬಾರ್ಷನ್ ಮಾಡಿಸಿಗಳಕ್ಕೆ ಅಂತ ಮಂಗಳೂರಿ

ಕ್ರಿಕೆಟ್ ಖಾಯಿಲೆಗೆ ಸೋಲೇ ಮದ್ದು!

'ಶತಕೋಟಿ ಭಾರತೀಯರ ಹೃದಯ ಭಗ್ನ'

'ಭಾರತೀಯರ ಕನಸು ನುಚ್ಚುನೂರು'

....


....

ಪತ್ರಿಕೆ ತೆರೆದರೆ ಇದೇ ಸುದ್ದಿ. ಟಿವಿ ತಿರುಗಿಸಿದರೂ ಇದೇ ಗೋಳು.

ಎಂತಹ ಅದ್ಭುತ ಕನಸು ಕಂಡಿದ್ದರು 'ಅವರ ಭಾರತೀಯರು?'

ಟೀಮ್ ಇಂಡಿಯಾ ವಿಶ್ವಕಪ್ ಗಳಿಸುವುದೆಂಬ ಕನಸು!

ವಿಶ್ವಕಪ್ ಗಳಿಸಿದ್ದರೆ ಭಾರತ ಸುಭಿಕ್ಷ ಆಗಿರುತ್ತಿತ್ತು! ಅದಕ್ಕಾಗಿ ಇವರು ಮಾಡಿದ ಪ್ರಯತ್ನ ಎಷ್ಟು? ದೈವ







ಭಕ್ತರು ಉರುಳು ಸೇವೆ ಮಾಡಿದರು. ದೇವಸ್ಥಾನಗಳಲ್ಲಿ ಹೋಮ ಮಾಡಿಸಿದರು. ಮಾಧ್ಯಮದವರು ಸುಮ್ಮನೆ ಕುಳಿತಿರಲಿಲ್ಲ, ಭಾರತೀಯ ಆಟಗಾರರು ತೊಡುವ ನೀಲಿ ಯೂನಿಫಾರಂಗೆ ಹೇಗೆ ಹವಾನಿಯಂತ್ರಣಗೊಳಿಸಲಾಗಿತ್ತು ಎಂಬುದರಿಂದ ಹಿಡಿದು ಯಾರ ಹೆಂಡಿರನ್ನು ಯಾರು ಕರೆದುಕೊಂಡು ಹೋಗಬೇಕು ಅಥವಾ ಹೋಗಬಾರದು ಎಂಬುದವರೆವಿಗೆ ಅದ್ಭುತವಾಗಿ ಕೆರೆದು ಕೆರೆದು ಬಿಸಾಕಿದರು. ಮೇಧಾವಿ ಕ್ರಿಕೆಟ್ ಪಂಡಿತರು ಯಾರನ್ನು ಆಡಿಸಬೇಕು ಯಾರನ್ನು ಆಡಿಸಬಾರದು ಅಂತ ಪುಟಗಟ್ಟಲೆ ಕೊರೆದು ಹಾಕಿದರು. ಒಟ್ಟಿನಲ್ಲಿ ಮಾಧ್ಯಮಗಳಲ್ಲಿ ಕ್ರಿಕೆಟ್ಟೇ ಇಲ್ಲದೆ ಸುದ್ದಿಯೇ ಇಲ್ಲ ಅನ್ನುವ ಪರಿಸ್ಥಿತಿ ಸೃಷ್ಟಿಸಿದರು. ಆದರೆ ಏನು ಮಾಡಿದರೆ ಏನು. ಅಪ್ಪ ಕಿರುಬನ ವೇಷ ಧರಿಸಿದ ಕತ್ತೆಗಳು. ಬಾಂಗ್ಲಾದೇಶದಂತಹ ಬಾಲಕರ ಟೀಮಿನಿಂದ ಹೀನಾಮಾನ ತದುಕಿಸಿಕೊಂಡರು.

ಶತಕೋಟಿ ಭಾರತೀಯರಲ್ಲಿ ಬಹುಪಾಲು ಗ್ರಾಮಾಂತರ ಪ್ರದೇಶದ ಜನರಿಗೆ ಇಂತಹ ಒಂದು ಆಟ ಇದೆ ಅನ್ನೋದೇ ಗೊತ್ತಿಲ್ಲ. ಬಡವರಿಗೆ ಇದು ಬೇಕಿಲ್ಲ. ಇನ್ನು ಕೆಲವರೂ ಈ ಮುಂದೇನಾದರೂ ಸೋತು ಬುದ್ಧಿ ಬರಲಿ. ಆಗಲಾದರೂ ಇವರ ಧೀಮಾಕು ಇಳಿದೀತು ಅಂತ ಹಾರೈಸುವವರು. ಅಂದರೆ ಶೇ. ತೊಂಭತ್ತು ಭಾಗದ ಭಾರತೀಯರಿಗೆ, ಟೀಮ್ ಇಂಡಿಯಾ ಸೋತರೂ ಹೃದಯಭಗ್ನ ಆಗಿಲ್ಲ ಅಂದ ಹಾಗಾಯಿತು. ಸುದ್ದಿ ಮಾಧ್ಯಮದವರು ಸುಳ್ಳೇನೂ ವರದಿ ಮಾಡಿಲ್ಲ ಅನ್ನಿ. ಅವರು ಯಾವುದೋ ಸ್ಕೇಲಿಗೆ ಅಂದರೆ ಒಬ್ಬ ಮಧ್ಯಮ ಮೇಲ್ಮಧ್ಯಮ ಭಾರತೀಯ ಹತ್ತು ಜನ ಬಡ ಭಾರತೀಯರಿಗೆ ಸಮ ಎಂಬ ಮಾಮೂಲಿ ಲೆಕ್ಕಾಚಾರದ ಮೇಲೆ ಹೀಗೆ ವರದಿ ಮಾಡಿದ್ದಾರೆ ಅಷ್ಟೆ!

ನಿಜಕ್ಕೂ ಹೃದಯಭಗ್ನ ಆಗಬೇಕಾದ್ದು ಯಾರಿಗೆ?

ಸುದ್ದಿ ಮಾಧ್ಯಮದವರಿಗೆ!

ಯಾಕೆ?

ಜಾಹೀರಾತು ಸಿಗುವುದು ತಪ್ಪಿತಲ್ಲ ಅದಕ್ಕೆ!

ಇನ್ನು ಯಾರಿಗೆ?

ಎಂಎನ್‌ಸಿಗಳಿಗೆ, ಇವರ ಮೇಲೆ ಸಾವಿರಾರು ಕೋಟಿ ಜಾಹೀರಾತು ಹಣ ಸುರಿದದ್ದಕ್ಕೆ!

ಇದೂ ನಿಜವೇ ಅನ್ನಿ, ಏಷ್ಯಾ ಖಂಡದ ಟೀಮುಗಳು ಇಲ್ಲದೆ ಇದ್ದರೆ ಅವರು ತಯಾರಿಸುವ ಮಾಲುಗಳಿಗೆ ಮಾರುಕಟ್ಟೆನೇ ಇರಲ್ವಂತೆ. ಅದಕ್ಕೆ ಪಾಕಿಸ್ತಾನ, ಇಂಡಿಯಾ ಟೀಮುಗಳ ಮೇಲೆ ಹಣದ ಹೊಳೆನೇ ಹರಿಸುತ್ತಾರಂತೆ. ಅಂದರೆ ಅವರು ನಾವೆಲ್ಲ ಮೂರ್ಖರು, ಜಾಹೀರಾತಿಗೆ ಮರುಳಾಗಿ ಮಗ್ಗ ಮಲಗ್ತೀವಿ ಅಂತ ನಿರ್ಧರಿಸಿದ್ದಾರೆ ಅಂದ ಹಾಗಾಯಿತು.

ಇದು ಹೇಗಾದರೂ ಇರಲಿ. ಭಾರತದ ಟೀಮು ಮಗ್ಗ ಮಲಗಿದ ಮೇಲೆ ಹತ್ತಾರು ಜೋಕುಗಳು ಚಾಲ್ತಿಯಲ್ಲಿವೆ.

ಟೀಮ್ ಇಂಡಿಯಾ ಗೆಲ್ಲಲೇಬೇಕಾಗಿತ್ತು. ಆದರೂ ಸೋತಿತು.

ಇದಕ್ಕೇನು ಕಾರಣ?

ಇಂದಿರಾಗಾಂಧಿ!

ಈ ಸೋಲಿಗೂ-ಇಂದಿರಾ ಗಾಂಧಿಗೂ ಏನು ಸಂಬಂಧ?

ಟೀಮ್ ಇಂಡಿಯಾ ಮೊದಲು ಸೋತಿದ್ದು ಯಾರ ಮೇಲೆ?

ಬಾಂಗ್ಲಾದೇಶದ ಮೇಲೆ.

ಬಾಂಗ್ಲಾದೇಶ ಆಗಲು ಕಾರಣ ಯಾರು?

ಇಂದಿರಾಗಾಂಧಿ!

ಅದಕ್ಕೇ! ಬಾಂಗ್ಲಾದೇಶನೇ ಇಲ್ಲದಿದ್ದರೆ......

****

ಟೀಮ್ ಇಂಡಿಯಾ ಸೋಲಲು ಕಾರಣ ಗೊತ್ತೆ?





ಏನು?

ಭಾರತೀಯ ಅಭಿಮಾನಿಗಳು!

ಹೇಗೆ

ಅವರು ಇನ್ನೂ ವೆಸ್ಟ್‌ಇಂಡೀಸ್‌ನಲ್ಲೇ ಆಡುತ್ತಾ ಇರುತ್ತಿದ್ದರು. ಆದರೆ ಹಾಳಾದ ಅಭಿಮಾನಿಗಳು ಬಿಡಬೇಕಲ್ಲ, ಅವರೇನು ಮಾಡಿದರು?

ಕಮಾನ್ ಇಂಡಿಯಾ, ಕಮಾನ್ ಇಂಡಿಯಾ ಅಂತ ಗಂಟಲು ಹರಿಯುವ ಹಾಗೆ ಕೂಗಿಕೊಂಡರು. ಅಭಿಮಾನಿಗಳು ಇಷ್ಟೊಂದು ಕೇಳಿಕೊಂಡ ಮೇಲೂ ಇಲ್ಲಿರುವುದು ಸರಿಯಲ್ಲ ಅಂತ ಸೋತು ಅವರನ್ನ ಸೇರಿಕೊಂಡರು!

****

ಅಣಕ

ಎಚ್.ಎಲ್. ಕೇಶವಮೂರ್ತಿ

ಟೀಮ್ ಇಂಡಿಯಾ ಸೋತಿತು. ಆದರೆ ಒಂದು ಸಮಾಧಾನ.

ಸೋತಾಗ ಸಮಾಧಾನ ಎಂತಹದ್ದು?

ಇದೆ, ಪಾಕಿಸ್ತಾನದ ಟೀಮು ನಮ್ಮ ಟೀಮಿಗಿಂತ ಮೊದಲೇ ಸೋತು ವಾಪಸಾಯಿತಲ್ಲ!

****

ಟೀಮ್ ಇಂಡಿಯಾ ಸೋತರೂ ಆಟಗಾರರ ಮನೆಯಲ್ಲಿ ಸಂತೋಷ, ಸಂಭ್ರಮ!

ಯಾಕೆ ಹೀಗೆ?

'ಏನೇ ಬೋರಿ ಹಾರಾಟ ಅಂದರೆ ಶ್ವಾನ ಭೋಗರಮನೇಲಿ ಬೀಗರೂಟ, ಅಂದಳಂತೆ ಹಂಗೆ.

ಅಂದರೆ.....

ಹೂಂ... ಅದೇ... ಬುಕ್ಕಿಗಳನ್ನ ಕೇಳು!

****

ಬಟ್ಟೆ ಅಂಗಡಿ. ಸಾಹುಕಾರರು ಖುಷೀಲಿದ್ರು.
'ಏನು ಸಾಹೇಬರೆ ದಿಲ್ ಆಗಿದೀರಿ' ಅಂದೆ.
'ಅಲ್ಲ ಕಣ್ಣುಬಿಟ್ಟ' ಅಂದರು.
'ಏನಂತಹದ್ದು?' ಕೇಳಿದೆ.
'ಒಳ್ಳೆ ರೇಟು ಸಿಕ್ತು, ಬುರ್ಖಾ ಎಲ್ಲ ಖಾಲಿ' ಅಂದು
'ಹಬ್ಬ ಇತ್ತಾ?'

...ೋಗಿ ಆಸ್ಪತ್ರೆಗೆ ಅಡಮಿಟ್ಟಾಗಿದ್ನಂತೆ. ಅಬಾರ್ಷನ್ ...ಗುವಾಗ ಸಂಬಂಧಪಟ್ಟ ಗಂಡ್ಸು ಅಲ್ಲಿರಬೇಕು ಅಂತ ...ಮಾರಣ್ಣ ಭೂಗತವಾಗಿ ಯಾರಿಗೂ ಗೊತ್ತಾಗದಂತೆ ...ೋಗಿ ಬಂದನಂತೆ."

"ಆಹಹ ಏನು ಸುಳ್ಳೇಳ್ತಿಲಾ ನೀನು? ಆ ಅನಿತಕ್ಕನ್ನ ...ೋಡಿದ್ರೆ ಕೈ ತ್ವಳಕಂಡು ಮುಟ್ಬಂಗವ್ಳೆ. ಅಂಥೋಳ ...ಟ್ಟು ಇನ್ನ್ಯಾರನೊ ಹುಡಿಕ್ಕಂಡೋದನಂತೆ. ಸುಳ್ಳು ...ಂಗೂ ಹೇಳತರ್ಲ?"

"ಯಕ್ಕಾ, ಅನಿತಕ್ಕ ನೀನೇಳೊ ತರನೇ ಇರಬವುದು. ...ದ್ರೆ ಅವುಳ ಪೇಸಲ್ಲಿ ಮಜಾಯಿಲ್ಲ. ಒಂಥರಾ ಜವಾ ...ಾರಿ ಹೊತ್ತ ಮಹಿಳೆಯಂಗೆ ಕಾಣ್ತಾಳೆ. ಆದ್ರೆ ...ಮಾರಣ್ಣ, ಪವರ್ ಬಳಸಿಗಂಡು ಪವರ್ ಯೂಜ್ ...ಾಡ್ತ ತಿರುಗ್ತಯಿದ್ದನಂತೆ."

"ಹಿಂದೆ ಗುಂಡೂರಾಯನು ಅಂಗೆ ಅಲವೆ. ಮಂಜು ...ಾರ್ಗವಿ ಅನ್ನೊ ಸಿನುಮಾ ನಟಿಯ ಮದಿವಾಯ್ತಿನಿ ...ಂತ ಹೋಗಿದ್ದ. ಆಗಕ್ಕಾಗಲಿಲ್ಲ. ಕಡಿಗೆ ಇದ್ದೋಟ ...ನ ಮಜ ಮಾಡಿ ಸುಮ್ಮನಾದ ಅತ್ತಗೆ" ಎಂದ ಉಗ್ರಿ.

"ಅಂಗೆ ನೋಡಿದ್ರೆ ಮುಖ್ಯಮಂತ್ರಿಯಾದೋರ್ಯಲ್ಲ ...ಂತವೇ ಕ್ಯಲಸ ಮಾಡಿಕೊಂಡು ಹಾಳಾಗೋದ್ರು. ...ದರರ್ಯಲ್ಲ ದ್ಯಾವೇಗೌಡುನ್ನ ಅಂತ ವಿಷಯದಲ್ಲಿ ಬೆಟ್ಟು ...ಡಚಂಗಿಲ್ಲ ಕಂಡ್ಯ" ಎಂದ ಕಾಳಮಾವ.

"ನೀನು ಬರೀ ದ್ಯಾವೇಗೌಡುಂದ್ನೆ ಹೇಳಬ್ಯಾಡ ...ಣಮಾವ. ಕಡಿದಾಳು ಮಂಜಪ್ಪಾರು, ನಿಜಲಿಂಗಪ್ಪಾರು, ...ರೇಂದ್ರ ಪಾಟೀಲ್ರು, ಇವ್ರುರ್ಯಲ್ಲ ತಮ್ಮ ತಮ್ಮ ಖಾತೆ ...ಮೀನು ವಿಷಯದಲ್ಲಿ ಎಷ್ಟು ನಿಷ್ಠರಾಗಿದ್ರು ಅಂದ್ರೆ ...ಾಳ ದೊಡ್ಡ ಮನುಸ್ರವುರು" ಎಂದ ಉಗ್ರಿ.

"ಅಲ್ಲಾ ದ್ಯಾವೇಗೌಡ್ರು ರತಿ ಅಂತ ಸ್ಪಸೇರ ತಂದು ...ಟ್ಟಿದ್ರೂ ಇವ್ನ್ಯಾಕಿಂತ ಬುದ್ಧಿ ಕಲ್ತಗಂಡೋ?" ಎಂದು ...ಮ್ಮಿ ಚಿಂತಾಕ್ರಾಂತಳಾದಳು.

"ಕಚ್ಚರಕ ನನ್ನ ಮಕ್ಕಳಿಗೆ ರತಿಯಲ್ಲ ಮನ್ಮತಿ ತಂದು ...ಟ್ಟಿದ್ರೂ ಅಂಗೆಯ ಕಂಡ್ಯೆ. ಗೊಂತರ ಕಂಡು ಹೋಗಿ ...ಂಡೋರ ವಲಿಮೇದು ಬುಟ್ಟು ಹೋದಜ್ಜೆ ಕಾಣದಂಗೆ ...ೇದು ಮೋಟು ಕಾಣದಂಗೆ ಬತ್ತವೆ" ಎಂದ ಸೀರ.

"ಅಂತ ಕ್ಯಲಸ ಅನಾಮಧೇಯ ಆಗಿದ್ರೆ ಸರಿ ಚಿಗಪ್ಪ ...ಯಾರಿಗೂ ಗೊತ್ತಾಗದಿಲ್ಲ. ಆದ್ರೆ ಚೀಫ್ ಮಿನಿಸ್ಟ್ರು ...ೋನು ಯಾರಿಗೂ ಕಾಣದಂಗೆ ಹೋಗಿ ಬರಕ್ಕಾದತೇ? ...ದ್ರು ಕುಮಾರಸ್ವಾಮಿ ಅಂಗೆ ಮಾಡಕ್ಕೋಗಿ ...ಗಾಯ್ಕಂಡನಂತೆ. ಇಟೀಸ್ ಸೇಂ ಟು ಅವರ್ ಸ್ಟೇಟ್" ...ಂದು ವಾಟಿಸ್ನೆ ಹೊರಟು ಹೋದ. ●

'ಟೀಮ್ ಇಂಡಿಯಾಕೆ ಕಳಿಸಾಕೆ ಬೇಕಲ್ಲ' ಅಂದರು ...ಹೇಬರು, ಮುಗುಮ್ಮಾಗಿ.

****

ಇಂತಹ ತರಹಾವರಿ ತಮಾಷೆಗಳ ನಡುವೆ ಹಲವು ...ಹಿಣಿಯರು ಟೀಮ್ ಇಂಡಿಯಾ ಸೋತಿದ್ದಕ್ಕೆ ದೇವರಿಗೆ ...ೇಪ ಹಚ್ಚಿದರಂತೆ! ಇದ್ಯಾಕೆ ತಾಯಿ ಹೀಗೆ ಮಾಡ್ತಿದೀರಿ ...ಂತ ಕೇಳಿದ್ದಕ್ಕೆ 'ಹಾಳಾದ ಮ್ಯಾಚು ಮ್ಯಾಚೂಂತ ನಮ್ಮ ...ುಡುಗರು ಪುಸ್ತಕ ಕೈಲೂ ಹಿಡೀದೆ ಟಿವಿ ಮುಂದೆ ...ಂತುಬಿಡುತ್ತಿದ್ದೊ. ಪರೀಕ್ಷೆ ಕಾಲ ಓದಿಕೊಳ್ರೋ ಅಂದರೆ ...ಮ್ಮ ಮಾತ್ನ ಕೇಳ್ತಾರ್ಲಿಲ್ಲ. ಈಗ ನೋಡಿ, ಸುಮ್ನೆ ...ದ್ಕಳ್ತವೆ' ಅಂದರು.

ಅಲ್ಲ, ಪರೀಕ್ಷೇನೂ ಮರೆತು ಕ್ರಿಕೆಟ್ ನೋಡ್ತಾ ಕೂರೋ ...ಕ್ಕಳು, ತರಹೇವಾರಿ ವೇಷ ಹಾಕಿಕೊಂಡು ಕ್ರಿಕೆಟ್ ...ೇಮಿಗಳಾಗೋರು ಇವರೆಲ್ಲ ನಿಜಕ್ಕೂ ಕ್ರಿಕೆಟ್ ...ಭಿಮಾನಿಗಳಾ?

ಇಲ್ಲ, ಉನ್ಮಾದದಲ್ಲಿರುವವರು.

ಟೀಮು ಗೆದ್ದರೆ ಉಘೇ ಉಘೇ... ಹೂವಿನ ಹಾರ

ಸೋತರೆ?

ಚಪ್ಪಲಿ ಹಾರ!

ಟೀಮ್ ಇಂಡಿಯಾ ಹೀನಾಯವಾಗಿ ಸೋತಿದ್ದು ...ಳ್ಳೆಯದೇ ಆಯ್ತು, ಈ ಭ್ರಮೆ ಇಳಿಯಿತು!

ಈ ಕ್ರಿಕೆಟ್ ಕಾಯಿಲೆಗೆ ಸೋಲೇ ಮದ್ದು!

ಏರಿದ್ದ ಕ್ರಿಕೆಟ್ ಜ್ವರವನ್ನು ಏಕ್‌ದಂ ಇಳಿಸಿದ ಟೀಮ್ ...ಂಡಿಯಾ ಆಟಗಾರರು ಅಭಿನಂದನಾರ್ಹರು ಅಲ್ಲವಾ....


****

ಸೂಪರ್ ಎಯ್ಟ್ ಸ್ಥಾನಕ್ಕೆ ಇಂಡಿಯಾ ಹೋಗ ...ೇಕಾದರೆ ಬರ್ಮುಡಾ ತಂಡ ಬಾಂಗ್ಲಾ ತಂಡದ ಎದುರು ...ಲ್ಲಬೇಕಂತೆ! ಹಾಗೆ ಆಗಲಿ ಅಂತ ಕೆಲ ಕ್ರಿಕೆಟ್ ಅಭಿಮಾನಿ ...ಳು ಆ ಭಗವಂತನಲ್ಲಿ ಪ್ರಾರ್ಥಿಸಿದರಂತೆ. ಅದು ಫಲಿಸಲಿಲ್ಲ ...ನ್ನುವ ಮಾತು ಬೇರೆ. ಅಲ್ಲ, ಇವರ ಪ್ರಾರ್ಥನೆಗೆ ...ಗೊಡಲು ಆ ಭಗವಂತನೇನು ಬೆಟ್ಟಿಂಗ್ ಏಜೆಂಟಾ?

ಅದು ಹಾಗಿರಲಿ. ಬರ್ಮುಡಾ ಕ್ರಿಕೆಟ್ ಟೀಮಿನಿಂದ ...ಪ್ಪಾಕಾಯಗಳಿಗೊಂದು ಶುಭ ಸಂದೇಶ-ನೀವು ಇನ್ನು ...ಮ್ಮ ಕೊಬ್ಬಿನ ಬಗ್ಗೆ ಚಿಂತಿಸಬೇಕಿಲ್ಲ! ಯಾಕೆ ಅಂತೀರಾ. ...ಬಿನ್ ಉತ್ತಪ್ಪನ ಕ್ಯಾಚ್ ಹಿಡಿದ ಮನುಷ್ಯನ ...ೋಡಿದಿರಾ... ಅಂತಹ ದಢೂತಿ ಮನುಷ್ಯನೇ ವಿಶ್ವಕಪ್‌ನಲ್ಲಿ ...ಡುತ್ತಾನೆ ಎಂದಾದರೆ... ನೀವು ಯಾಕೆ ನಿಮ್ಮ ಕೊಬ್ಬು ...ರಗಿಸುವ ಕುರಿತು ಕೊರುಗ್ತೀರಿ ಅಂತ.... ●

"ಕನ್ನಿಕಾಪರಮೇಶ್ವರೀ...."

'ಶೂದ್ರ' ಸೆಮಿನಾರ್‌ನಲ್ಲಿ ಒಬ್ಬರು ಮಾತಾಡಲು ಮೈಕ್‌ಗೆ ಬಂದರು. ಪರಿಚಿತರ ಮಾತು ಕೇಳಲು ತವಕಿಸುತ್ತಿದ್ದ ಜನಕ್ಕೆ ಕುರುಚಲು ಗಡ್ಡದ, ಸೊರಗಿದ ದೇಹದ ಈತನ ಬಗ್ಗೆ ಉತ್ಸಾಹವಿಲ್ಲ. ಹೆಸರು ಗುಪ್ತ. ನನಗೆ ಮಾತ್ರ ಅಪಾರ ಕುತೂಹಲ. ಈತ ಮೈಕ್‌ಗೆ ಬಂದದ್ದು ತನ್ನ ಅಳಲು ಹೇಳಿಕೊಳ್ಳಲು. ತಮ್ಮ ವೈಶ್ಯ ಜನಾಂಗದಲ್ಲಿ ಬುದ್ಧಿಜೀವಿಗಳಾಗಲಿ, ಸಾಹಿತಿಗಳಾಗಲಿ ಅಷ್ಟಾಗಿ ಇಲ್ಲ. ನಿಂತ ನೀರಿನಂತೆ ಈ ಜನಾಂಗ ಕಂತಿಹೋಗಿದೆ. ಒಂದು ಮನಶ್ಶಾಸ್ತ್ರದ ಸಂಸ್ಥೆ ನಡೆಸಿದ ತನಿಖೆಯ ಪ್ರಕಾರ ವೈಶ್ಯರಲ್ಲೇ ಹೆಚ್ಚು ಜನ ಮನೋವಿಕಲ ವ್ಯಕ್ತಿಗಳಿದ್ದಾರೆ.... ಅಂದರು ಗುಪ್ತ. "ದಿವಂಗತ ವಸುದೇವ ಭೂಪಾಲಂ ಬುದ್ಧಿಜೀವಿಯಾಗಿದ್ದರಲ್ಲವೆ?" ಎಂದು ಸಭೆಯಿಂದ ಒಬ್ಬರು ಕೂಗಿದರು. ಅದಕ್ಕೆ ಗುಪ್ತ ವ್ಯಂಗ್ಯವಾಗಿ, "ಕನ್ನಿಕಾ ಪರಮೇಶ್ವರಿಯ ಶಾಪದಿಂದ ಆತ ಹಾಳಾಗಿಹೋದದ್ದು ನೀವು ಕೇಳಿಲ್ಲವೆ?" ಅಂದರು.



ಇನ್ನೊಂದು ಅಂಶ. ಮಾತು ಬಲ್ಲವ ಎಂಥ ರೋಗವಾಗಬಲ್ಲ ಎಂಬುದಕ್ಕೆ ಈ ಸಿದ್ಧಲಿಂಗಯ್ಯ ಉದಾಹರಣೆ-ಅಂದರೆ ದಲಿತಕವಿ. ಹಳ್ಳಿಗಳ 'ಮಿತ್'ಗಳನ್ನೆಲ್ಲ ಹೇಳುತ್ತ ಹೇಳುತ್ತ ತನ್ನ ಮೂಗಿನ ನೇರಕ್ಕೆ ವಿವರಿಸುತ್ತ ನಗಿಸುತ್ತ ಹೋದ ಸಿದ್ಧಲಿಂಗಯ್ಯ, ಶೋಷಣೆಗೆ ಕೂಡ 'ಮಿತ್'ನ ಬೆಂಬಲ ನೀಡಬಲ್ಲ ಈತ....ವಿಧಾನ ಪರಿಷತ್‌ನಲ್ಲಿ 'ಬಾಯಿದ್ದವ' ಎಂಬ ಗಾದೆಗೆ ಹೊಸ ಸ್ಫೂರ್ತಿ ತರಬಲ್ಲ. 'ಬಾಯಿ' ಏನೆಲ್ಲ ಮಾಡುತ್ತದೆ, ಅಲ್ಲವೆ?

ರೇಣುಕ, ಲಕ್ಷ್ಮೀಶ

ಇವತ್ತು ಮನಸ್ಸು ಭೀಕರ ಗಂಭೀರ ವಿಷಯಗಳನ್ನು ಬಿಟ್ಟು ಭೂಮಿಯ ಮೇಲೇ ಸಂಚರಿಸಲು ಯತ್ನಿಸುತ್ತಿದೆ. ಈ ತರೀಕೆರೆಯ ಪುಟ್ಟ ಹುಡುಗಿ ರೇಣುಕ ನಮ್ಮ 'ಕಣ್ಣಾಮುಚ್ಚಾಲೆ'ಗೆ ಸದಾ ಪ್ರಶ್ನೆ ಕಳಿಸುವ ಹುಡುಗಿ. ತರೀಕೆರೆಗೆ ಹೋದಾಗ ನನಗೆ ಪೆನ್ನು ನೀಡಿದ ಹೆಣ್ಣು ಮಗಳು. ಈಕೆಗೆ 'ಪ್ರಗತಿ ರಂಗ'ದ ಕಾರ್ಯಕ್ರಮ ಆರಂಭಿಸಲು ಇಷ್ಟ. ಹಾಗೆ ಇವಳನ್ನು ಬಲ್ಲವರು ಹೇಳಿದರು. ಈಕೆಯೇ ಕಾಗದ ಬರೆದಳು. ನಾನು ಸುಮ್ಮನಿದ್ದೆ. ಬಹಳ ದಿನ ಸುಮ್ಮನಿದ್ದೆ. ಆಮೇಲೆ ಹೇಳಿದೆ-ನಿನ್ನಂಥವರಿಂದಲೇ ಈ ಕಾರ್ಯಕ್ರಮ ಆರಂಭವಾಗಬೇಕು. ಪುಢಾರಿಗಳು, ಮಧ್ಯವರ್ತಿಗಳು, ಸಮಯಸಾಧಕರಿಂದ ತುಂಬಿರುವ ರಾಜಕೀಯಕ್ಕೆ ರೇಣುಕ ತರಹದವರೇ ಮದ್ದು.

"ನಮಗೆ ಬೆಂಬಲಿಸಿ ಎಂದು ದಿಗಿಲಿನಿಂದ ತಾರಾಡಬೇಕಾದ್ದಿಲ್ಲ, ಕಾತರಿಸಿ ಯಾರನ್ನೂ ಬೇಡಿಕೊಳ್ಳಬೇಕಾದ್ದಿಲ್ಲ. ಪರಿಚಿತರೊಂದಿಗೆ ಮಾತಾಡು. ಅವರಿಗೂ ನಮ್ಮ ಕಾಳಜಿ ಇದ್ದರೆ ನಾಲ್ಕೇ ದಿನದಲ್ಲಿ ದೊಡ್ಡ ಗುಂಪು ರೂಪುಗೊಳ್ಳುತ್ತದೆ" ಎಂದೆ.

ಈ ನಡುವೆ ಪುತ್ತೂರಿನ ಹತ್ತಿರದ ಲಕ್ಷ್ಮೀಶ ತೋಳ್ಪಾಡಿ ಒಂದು ಕವನ ಕಳಿಸಿ ಕಾಗದ ಬರೆದಿದ್ದಾನೆ. ಈತನ ಕಾಗದ ನೋಡಿ ದೊಡ್ಡದಾಗಿ ನಕ್ಕೆ. ಎಲ್ಲರಿಗೂ ಓದಿಸಿದೆ. ಹೀಗಾಗಿ ಕಾಗದ ಕಳೆದುಹೋಯಿತು. ನೆನಪಿನಿಂದ ಬರೆಯುತ್ತಿದ್ದೇನೆ... "ನಿಮ್ಮ ಕಾಗದ ಬಂದಿದೆ. ಪ್ರಗತಿರಂಗದ ಕೆಲಸ ಮಾಡಲಿದ್ದೇನೆ. ನೀವೆಲ್ಲಿ ಬಿಡುತ್ತೀರಿ. ನಿಮ್ಮನ್ನು ಅರ್ಥ ಮಾಡಿಕೊಂಡವರು ಯಾರನ್ನು ನೀವು ನೆಮ್ಮದಿಯಾಗಿರಲು ಬಿಟ್ಟಿದ್ದೀರಿ....." ಅಂದಿದ್ದಾನೆ ಲಕ್ಷ್ಮೀಶ.


ನೆಮ್ಮದಿಯ ಕಲ್ಪನೆಯೇ ವೈವಿಧ್ಯಪೂರ್ಣ, ಅಲ್ಲವೆ?

ಮರೆಯುವ ಮುನ್ನ



■ ಪಿ. ಲಂಕೇಶ್ ಅಕ್ಟೋಬರ್ 16, 1988

ವ್ಯಕ್ತಿ ಮತ್ತು ವಿಚಾರ



ಒಬ್ಬ ಹುಡುಗ. ಈತನಂಥವರು ನಿತ್ಯ ನನಗೆ ಸಿಗುವುದರಿಂದ ಹೇಳುತ್ತಿದ್ದೇನೆ. ಈತ ಬೆಂಗಳೂರಿಗೆ ಹತ್ತಿರದ ಊರಿನವನು. ಈತ ವೈಜ್ಞಾನಿಕ ಸಂಘವೊಂದನ್ನು ಮಾಡಿಕೊಂಡಿದ್ದಾನಂತೆ; ಇವನ ಮುಖ್ಯ ಉದ್ದೇಶ ಜನರಿಗೆ ವೈಜ್ಞಾನಿಕ ವಿಷಯ ಹೇಳುವುದು, ಅವರಲ್ಲಿನ ಮೂಢನಂಬಿಕೆ, ಹುಂಬತನ ಕಮ್ಮಿ ಮಾಡುವುದು. ಇವನ ಭಾಷೆ ಕೂಡ ಸರಿ ಇರಲಿಲ್ಲ. ನಾನು ಹೇಳಿದೆ, ಗೊತ್ತಿದ್ದುದನ್ನು ಸರಳವಾಗಿ ಹೇಳುವುದನ್ನು ಮೊದಲು ಕಲಿಯಬೇಕು.

ಈತ ಕುವೆಂಪು ಅಭಿಮಾನಿ. ಕುವೆಂಪು ಅವರಿಗೆ ತಮ್ಮ ವಿಶ್ವಮಾನವ ಸಂದೇಶವೆಂದರೆ ಪಂಚಪ್ರಾಣ; ಅದೊಂದು ಹೊಸ ಧರ್ಮವಾಗಬೇಕೆಂದು ಅವರ ಇಷ್ಟ. ಈಚೆಗೆ ಈ ವಿಶ್ವಮಾನವ ಸಂದೇಶವನ್ನು ಧರ್ಮಸ್ಥಳದ ಹೆಗ್ಗಡೆ ಸ್ವೀಕರಿಸಿದ್ದಾಗಿಯೂ ಈ ಹೆಗ್ಗಡೆಯನ್ನ ಕುವೆಂಪು ಹೊಗಳಿರುವುದಾಗಿಯೂ ಈ ಹುಡುಗ ಹೇಳಿದ. ಹೆಗ್ಗಡೆಯನ್ನ ಈತ ಇಷ್ಟಪಡುವುದಿಲ್ಲವಾದ್ದರಿಂದ ಕುವೆಂಪು ಅವರ ಬಗ್ಗೆ ಬೇಸರ ವ್ಯಕ್ತಪಡಿಸಿದ. ತಮ್ಮ ಇಡೀ ಬದುಕನ್ನು ರೂಪಿಸಿದ ಕುವೆಂಪು ಹೀಗೆ ಹೆಗ್ಗಡೆಯನ್ನ ಹೊಗಳಬಹುದೇ ಅಂದ.

ನಾನು ಹೇಳಿದೆ, ವಿಚಾರವಾದಿಯಾದ ನೀನು ಮೊದಲು ಯಾವುದಕ್ಕೆ ಎಷ್ಟು ಪ್ರಾಮುಖ್ಯ ಕೊಡಬೇಕು ಎಂಬುದನ್ನ ಕಲಿಯಬೇಕು. ವೃದ್ಧರಾದ ಕುವೆಂಪು ಹೀಗೆ ಹೇಳಿದ್ದರೂ ಅವರ ಮೂಲಭೂತ ಸಾಧನೆಗೆ ಧಕ್ಕೆಯಾಗಲಿಕ್ಕಿಲ್ಲ, ಒಂದು ಜೀವನದ ಸಾಧನೆಯನ್ನು ಒಂದು ಘಟನೆಯಿಂದ ಅಲ್ಲಗಳೆಯಬಾರದು.



ಅದಕ್ಕಿಂತ ಮುಖ್ಯವಾದ ಅಂಶವೊಂದಿದೆ. ಯಾವ ಮನುಷ್ಯನೂ ಪೂರ್ತಿ ಭಕ್ತಿಗೆ ಅರ್ಹನಲ್ಲ. ಮನುಷ್ಯ ಬದಲಾಗುತ್ತಾನೆ, ಅದು ಆತನ ಗುಣ. ಆದ್ದರಿಂದ ನಾವು ನಮ್ಮ ನಂಬಿಕೆಯನ್ನು ವಿಚಾರಗಳ ಮೇಲೆ, ಸಿದ್ಧಾಂತಗಳ ಮೇಲೆ ಇಡಬೇಕು. ಮಾರ್ಕ್ಸ್‌ನ ಜೀವನಕ್ಕಿಂತ ಆತನ ವಿಚಾರಗಳು ಮುಖ್ಯ ಕ್ರಿಸ್ತನ ಬದುಕಿಗಿಂತ ಆತ ಹೇಳಿದ್ದು ನಮ್ಮಲ್ಲಿ ಹೇಗೆ ಪ್ರತಿಧ್ವನಿಸಿತು, ನಮ್ಮನ್ನು ರೂಪಿಸಿತು ಎಂಬುದು ಮುಖ್ಯ. ಅಷ್ಟೇ ಅಲ್ಲ, ನಮ್ಮ ರಾಜಕೀಯ ಕೂಡ. ವ್ಯಕ್ತಿಯನ್ನು ನಂಬಿ ರಾಜಕೀಯ ಹದಗೆಟ್ಟಿದೆ. ಸಿದ್ಧಾಂತ, ಕಾರ್ಯಕ್ರಮ ನಂಬಿದ್ದರೆ ಹೀಗಾಗುತ್ತಿರಲಿಲ್ಲ.

ಕುವೆಂಪು ಅವರಿಂದ ಬೆಳೆದಾತ ಅವರ ಒಂದು ಹೇಳಿಕೆಯಿಂದ ಕೆಡುವುದಿಲ್ಲ.

ಹೊಕ್ಕಳಿಂದ್ಹರಿದ ವಿಷಾದ ಗೀತೆ

■ ಅನಸೂಯ ಕಾಂಬಳೆ

ಬುರಕಾದಿಂದೆದ್ದು
ಬೆಳಕ ದಾರಿಯ ಕಂಡು
ಸಂಕಟದಲಿ ನರಳಿದವರು.

ಹೊತ್ತದ ಒಲೆಗೆ
ಬತ್ತದ ಆಶೆಗಳು
ನಶೆಯಲ್ಲೂ ಹೊಸೆವ
ಹಾದರದ ಮಾತು
ಗಳನು ಮನದಲಿ ಹೂತು
ಹೊಗೆಸೊಪ್ಪಿನೊಂದಿಗೆ ಸುತ್ತಿ
ಒಪ್ಪತ್ತಿನ ಗಂಜಿಗಾಗಿ
ಅಣಕಿಸುವ ಬದುಕಿಗೆ
ಎದೆಯೊಡ್ಡಿ....
ಬೀಡಿ ಸುತ್ತುತ್ತಾಳೆ ಅವ್ವ

ಮನೆಮನೆಯ ಕಸಮುಸುರೆ
ಬೆಳಗುತ್ತ
ಸೂರ್ಯ-ಚಂದ್ರ-ನಕ್ಷತ್ರಗಳನು



ಬೊಗಸೆಯಲಿ ತಂದು
ಗಲ್ಲಕ್ಕೆ ಒತ್ತಿ, ಕಣ್ಣುಗಳಲಿ ಕಾದಿಟ್ಟು
ಬುರ್ಖಾದ ಮೇಲೆ ಕನಸುಗಳ ಚಿತ್ತಾರ
ನಾಜೂಕಿನ ನೆಯ್ಗೆ ಬಿಡಿಸುತ್ತಾಳೆ
ಎದೆಮಟ್ಟ ಬೆಳೆದ ಮಗಳು

ಹಾದಿ ಬದಿಯಲಿ ಹಣ್ಣು-ಕಾಯಿ ಖರ್ಜೂರ
ಮಾರುತ, ಹಸಿದ ಹೊಟ್ಟೆಯಲಿ ಮುದುಡಿ ಕುಂತ
ಜೀವಗಳಿಗೆ ಸಿಂಬಿ ಸುತ್ತಿದಂತೆ
ಸರ್ಪಗಾವಲು!
ಯಾವಾಗ ಬಂದರಿವರು?
ಬೆಳಕು-ಗಾಳಿ-ನೀರಿಗಾಗಿ!!
ಒಂದು ಷುಗರ್? ಎಷ್ಟೋ ಹೊಟ್ಟೆ.....
ತಾಯ್ಯೆ! ನಿನ್ನ
ಹೊಕ್ಕಳಿಂದ್ಹರಿದ ವಿಷಾದ ಗೀತೆ!!! ■

(ವಿಶೇಷಾಂಕದಲ್ಲಿ ಪ್ರಕಟವಾದ ಕೆ. ಷರೀಫರ 'ಥ್ಯಾಂಕ್ಸ್ ಷುಗರ್' ಮಾತುಗಳಿಗೆ ಇನ್ನಷ್ಟು ಚಿತ್ರಿಕೆಗಳು)

ಸಿಎಂ ವಾಸ್ತವ್ಯ ರಾಧಿಕಾ ಮನೆಯಲ್ಲಿ, ಡಿಸಿಎಂ ವಾಸ್ತವ್ಯ?

ಎಂ. ಶಿವಸ್ವಾಮಿ, ಬೆಂಗಳೂರು
ರಾಜಕೀಯ ತಂತ್ರ, ಕುತಂತ್ರಗಳು ಒಳಗೊಳಗೆ ಒಡಾಡಲು ಕಾರಣವೇನು?
◆ ತಂತ್ರ, ಕುತಂತ್ರ ಗೋಚರಿಸದ ಕಾಯಿಲೆಗ ಳಾದ್ದರಿಂದ.

ವಿ.ಎಸ್. ಶ್ರೀವತ್ಸ, ಬೆಂಗಳೂರು
ಪ್ರಸ್ತುತ ಮಂತ್ರಿಮಂಡಲವನ್ನು ನೋಡಿ ಸರ್ಕಾರವನ್ನು ಗೌಡರ ಮತ್ತು ಲಿಂಗಾಯತರ ಸರ್ಕಾರವೆಂದು ಕರೆದರೆ ತಪ್ಪಿಲ್ಲ ಅಲ್ಲವೇ?
◆ ಟೋಟಲ್ಲಿ ದರೋಡೆಕೋರರ ಸರ್ಕಾರ ಅಂದರೂ ನಡೆಯುತ್ತೆ.

ವಿದ್ಯಾಶ್ರೀ, ಸುರಪೂರ
ಹೆಣ್ಣು ಚಂಚಲೆಯಂತೆ, ಹಾಗಾದ್ರೆ ಗಂಡು?
◆ ನಿಶ್ಚಲ.

ಕುಬೇರಪ್ಪ ಎಂ. ವಿಭೂತಿ, ಹರಿಹರ
ಮರಳಿ ಯತ್ನವ ಮಾಡು ಎಂದು ಹೇಳುವುದು ಸರಿಯೇ?
◆ ಮರಳಿ ಯತ್ನಕ್ಕೆ ಏಜಿನ ಮಿತಿಯಿಲ್ಲ.

ಟಿ.ಸ್ವಾಮಿ, ಹೊಸಪೇಟೆ
ಯಡಿಯೂರಪ್ಪನವರು ಗ್ರಾಮ ವಾಸ್ತವ್ಯ ಯಾಕೆ ಮಾಡುವುದಿಲ್ಲ?
◆ ನಿದ್ರೆಯಲ್ಲಿ ಎದ್ದೋಗುವ ಅಭ್ಯಾಸವಿರುವುದರಿಂದ.

ಎಂ. ನಿಸರ್ಗ, ದಾವಣಗೆರೆ
ವಿಶ್ವಕಪ್ ಗೆಲ್ಲಲೆಂದು ನಡೆಸಿದ ಹೋಮ, ಹವನ, ಹರಕೆ, ಜಪ, ತಪಾದಿಗಳಿಗೆಲ್ಲಾ ನಾಚಿಕೆ ಆಗಿದೆಯೇ?
◆ ಪುರೋಹಿತರಿಗೆ ನಾಚಿಕೆ ಎಂಬುದು ಯಾವಾಗಿತ್ತು?

ಎನ್. ಸೋಮಶೇಖರಪ್ಪ, ಬೆಂಗಳೂರು
ದೇವೇಗೌಡರು ಎಂತಹ ರಾಜಕಾರಣಿ?
◆ ಎಲ್ಲಾ ಬಿಟ್ಟ ರಾಜಕಾರಣಿ.

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
ವಯಸ್ಸಾದ ಮೇಲೆ ಹೆಂಡ್ತಿ ಹೇಳಿದ ಹಾಗೆ ಕೇಳದಿದ್ದರೆ ಏನಾಗುತ್ತೆ? ಏನ್ಮಾಡ್ತಾಳೆ?
◆ ಉಳಿತಿರುವ ಜಾಗಕ್ಕೆ ಬರುವುದೇ ಇಲ್ಲ.

ಉಮಾ ಮಂಚಾಲಿಗುರುರಾಜಚಾರು, ಸಂಗನಕಲ್ಲು
ಧರ್ಮರಾಜನಿಗೂ, ಸತ್ಯಹರಿಶ್ಚಂದ್ರನಿಗೂ ವ್ಯತ್ಯಾಸವೇನು?
◆ ಹರಿಶ್ಚಂದ್ರ ಜೂಜುಕೋರನಾಗಿರಲಿಲ್ಲ.

ಕಣ್ಣಾ ಮುಚ್ಚಾಲೆ

ಅಕ್ಷಯಕುಮಾರ, ಸುರಪೂರ
ಪ್ರೀತಿಯ ಆಳ ಹೆಚ್ಚೋ, ಸಾಗರದಾಳ ಹೆಚ್ಚೋ?
◆ ಎರಡರ ಆಳಕ್ಕೋದವರು ೬ ಬಂದಿಲ್ಲ.

ಡಿ.ಎಲ್.ನಾಗರಾಜ್, ಹರಪನಹಳ್ಳಿ
ಯುಗಯುಗ ಕಳೆದರೂ ಯುಗಾ ಮರಳಿಬರುತಿದೆ, ಯೌವನ ಮರಳಿ ಬಂದರೆ
◆ ಯೌವನ ಮರಳಿ ಬರುವುದೂ, ಸತ್ತ ಮೇಲೆ LIC ಬರುವುದೂ ಒಂದೇ.

ಟಿ.ಯು.ಕುಮಾರ್, ರಾಮದುರ್ಗ
ಜಯಲಲಿತಾ ಪ್ರಧಾನಿ ಆಗಿ ಮಣ್ಣಿನ ಮಗ ರಾಷ್ಟ್ರಪತಿ ಆದರೆ ದೇಶಕ್ಕೆ ಹಿತವಾಗುವುದಿಲ್ಲವೇ?
◆ ಅವರ ಮುಸುಡಿ ನೋಡಿದರೆ ಅಂತಹ ಕನಸ್ಸು ಕಾಣುತ್ತಿರಬಹು।

ಬಹುಮಾನಿತ ಪ್ರಶ್ನೆ

ಅಬ್ದುಲ್ ರಜಾಕ್, ದೇವದುರ್ಗ
ಸಿಎಂ ವಾಸ್ತವ್ಯ ರಾಧಿಕಾ ಮನೆಯಲ್ಲಿ, ಡಿಸಿಎಂ ವಾಸ್ತವ್ಯ?
◆ ಕರಂದ್ಲಾಜೆ ಕೋಣೆಯಲ್ಲಿ ಎಂಬುದು ಅನಂತ್‌ಕುಮಾರ್ ಕಡೆಯವರ ದೂರು.

ಎಂದೆನಿಸುತ್ತದೆ.

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಲದ್ದಿ ತುಂಬದ ಮಾಧ್ಯಮದವರಿಗೆ ನಟನಟಿಯರು ಹಾಕುವ ಲದ್ದಿಯೂ ಸುದ್ದಿಯೇ?
◆ ಸುದ್ದಿ ಎಂಬ ಲದ್ದಿಯಿಂದ ಮುದ್ದೆ ಸಿಗುವುದಾದರೆ ಇನ್ನೇನು ಮಾಡಿಯಾರು.

ಹೇಮಲತಾ ಮಹಾದೇವ್, ಬೆಂಗಳೂರು
ಮದುವೆ ಗಂಡಿಗೆ ಕಚ್ಚೆಯನ್ನೇ ಉಡಿಸುವುದೇಕೆ?
◆ ಉಡಿಸುವ ನೆಪದಲ್ಲಿ ಗಂಡೆ ಎಂದು ಪತ್ತೆ ಹಚ್ಚಲು.



ಗುರುಸ್ವಾಮಿ, ಶೋರಾಪೂರ
ಬೆಡಗಿಯರು ನಗುವಾಗ ಬಾಯಿ ಮುಚ್ಚಿಕೊಳ್ಳುತ್ತಾರೆ ಯಾಕೆ?
◆ ಬೆರಗು ಹುಟ್ಟಿಸಲಿಕ್ಕೆ.

ಡಿ.ಎಲ್.ಸುರೇಶ್, ಹರಪನಹಳ್ಳಿ
ದೇವೇಗೌಡರು ರಾಷ್ಟ್ರಪತಿ ಹುದ್ದೆ ಕನಸು ಕಾಣುತ್ತಿದ್ದಾರಂತೆ?
◆ ಮುದ್ದೆ ಉಂಡು ನಿದ್ದೆ ಮಾಡಲು ಪ್ರಶಸ್ತ ಜಾಗವಂತೆ.

ವಾರದ ಪ್ರಶ್ನೆ:
ಯಡ್ಡಿ ಬಜೆಟ್‌ಗೊಂದು ಟೈಟಲ್ ಕೊಡಿ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಏಪ್ರಿಲ್ 4ರ ಸಂಚಿಕೆಯ ನಮ್ಮ ಪ್ರಶ್ನೆ: ವರ್ಲ್ಡ್‌ಕಪ್‌ನಲ್ಲಿ ಭಾರತದ ಸೋಲು ಹತ್ಯೆಯೋ? ಆತ್ಮಹತ್ಯೆಯೋ?
ನಿಮ್ಮ ಉತ್ತರ: ಹತ್ಯೆಯೂ ಅಲ್ಲ, ಆತ್ಮಹತ್ಯೆಯೂ ಅಲ್ಲ, ಮಾನಭಂಗ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಡಿ.ಎಲ್.ಸುರೇಶ್, ಹರಪನಹಳ್ಳಿ

ನಿಜಕ್ಕೂ ವಿಶೇಷವೇ

ಒಂದು ಪತ್ರ

ಯುಗಾದಿಯ ಸಂಭ್ರಮಕ್ಕೆ ಹೋಗುವ ಅವಸರದಲ್ಲಿ ಪತ್ರಿಕೆ ಕೊಂಡುಕೊಂಡೆ. ಹಲವು ವಿಶೇಷಾಂಕಗಳನ್ನು ಗಮನಿಸಿದ ನನಗೆ 'ಲಂಕೇಶ್' ನಿಜಕ್ಕೂ ವಿಶೇಷವೆನ್ನಿಸಿದೆ. ವಿಶೇಷಕ್ಕೆ ಕಾರಣವಿಷ್ಟೆ. 'ಬಳಿದಾಳಿಯ ಹುಚ್ಚು ಬೆಳೆ ಅರ್ಕ' ಎಂಬ ಪಾರ್ವತೀಶರ ಲೇಖನ ವಿಶಿಷ್ಟವಾಗಿದೆ. ನಾನು ಬಹಳ ಚಿಕ್ಕವನಿರುವಾಗ ಹುಚ್ಚು ಅರ್ಕ ತಿಂದು ಹುಚ್ಚಾಟ (ಬೇಧಿ)ಕ್ಕಿಟ್ಟುಕೊಂಡು ಹಗಲಿರುಳು ಕಷ್ಟಪಟ್ಟದ್ದನ್ನು ನನ್ನ ಅಜ್ಜಿ ಹನುಮಕ್ಕ ಇನ್ನೂ ಜ್ಞಾಪಿಸಿಕೊಳ್ಳುತ್ತಿರುತ್ತಾರೆ. ಅತ್ಯಂತ ಅಪರೂಪದ ಅರ್ಕ ಬೆಳೆಯ ವಿವರಗಳನ್ನು ಜನರಿಗೆ ನೀಡಿದ್ದು ಅಲ್ಲದೆ, ರೈತರು, ರೈತರ ಮನೆಯ ಯುವಕರ ಆಟ, ಅಭ್ಯಾಸಗಳ ಮೇಲೆ ಬೆಳಕು ಚೆಲ್ಲಿರುವ ಪಾರ್ವತೀಶರಿಗೆ ಅಭಿನಂದನೆಗಳು.

ಅತಿಸಣ್ಣ ರೈತರ ಮನೆಯಿಂದ ಬಂದ ನಾನು ಅರ್ಕ, ನವಣೆ ಹುರುಳಿ, ಎಳ್ಳು, ಮಡಿಕೆಹೆಸರು, ಸಜ್ಜೆ ಮತ್ತಿತರ ಅಪರೂಪದ ಬೆಳೆಯ ಧಾನ್ಯಗಳನ್ನು ಇಂದಿಗೂ ಬೆಳೆಯುತ್ತೇನೆ. ಅರ್ಕ ಹೊರತುಪಡಿಸಿ. ಅರ್ಕ ರೈತರ ಅಂಕೆಯಿಂದ ಕಣ್ಮರೆಯಾಗಿದೆ.

ಸಂಪಾದಕೀಯ ಒಳಗೊಂಡಂತೆ ಜಿ.ಆರ್, ರೆಹಮತ್, ಕಿ.ರಂ, ಶಿವು, ಕುಮಾರ್, ಆಶಾದೇವಿ ಮತ್ತು ಚಂದ್ರೇಗೌಡರ ಬರಹಗಳು ಅಪರೂಪವಾದರೂ ಸಂದರ್ಭೋಚಿತವಾಗಿವೆ. ಗೌರಿಯವರ ಅನುವಾದದ 'ಗೃಹಿಣಿ' ಕಥೆ ಅದ್ಭುತವಾಗಿದೆ. 'ಲಂಕೇಶ್' ನಿಜ ಲಂಕೇಶ್ ಆಗಿ ಮೂಡಿಬರುತ್ತಿದೆ. ಹೀಗೆ ತನ್ನ ನಿರಂತರತೆಯನ್ನು ಕಾಯ್ದುಕೊಳ್ಳುತ್ತದೆಂಬ ಆಶಾಭಾವನೆಯಲ್ಲಿ.

–ಸಣ್ಣಿಂಗಿರಾಜ,
ರಾಮಜೋಗಿಹಳ್ಳಿ, ಚಳ್ಳಕೆರೆ

ದಕ್ಷ ದಲಿತ ಅಧಿಕಾರಿ ಧುಮಾಳೆ

ನಮ್ಮ ಪತ್ರಿಕೆಯ ಫೆಬ್ರವರಿ 28, 2007ರ ಸಂಚಿಕೆಯಲ್ಲಿ ಬೆಳಗಾವಿ ಅಧಿಕಾರಿ ಎ.ಜೆ. ಧುಮಾಳೆಯವರು ಯುವಕನ ಮೇಲೆ ಅತ್ಯಾಚಾರ ನಡೆಸಿದ್ದರು ಎಂಬ ವರದಿಯೊಂದು ಪ್ರಕಟವಾಗಿತ್ತು. ಆದರೆ ಈ ವರದಿ ತಪ್ಪು ಆರೋಪಗಳಿಂದ ಮತ್ತು ತಪ್ಪು ಮಾಹಿತಿಗಳಿಂದ ಕೂಡಿತ್ತು ಎಂದು ನಮಗೆ ತಿಳಿದುಬಂದಿದೆ.

ವಾಸ್ತವವಾಗಿ, ಧುಮಾಳೆಯವರು ಬಡ ಕುಟುಂಬದಲ್ಲಿ ಜನಿಸಿ ಶ್ರಮಪಟ್ಟು ಕೆ.ಎ.ಎಸ್ ಅಧಿಕಾರಿಯಾಗಿರುವವರು, ದಲಿತರಾಗಿದ್ದರೂ ಯಾವುದೇ ಗಾಡ್ ಫಾದರ್‌ಗಳಿಲ್ಲದೆ ಬೆಳೆದು ಬಂದವರು ಮತ್ತು ದಕ್ಷ ಅಧಿಕಾರಿ ಎನಿಸಿಕೊಂಡಿರುವವರು. ಇದನ್ನು ನಾವೇ ನಮ್ಮ ಪತ್ರಿಕೆಯಲ್ಲಿ ಹಿಂದೆ ಗುರುತಿಸಿ ಅವರನ್ನು ಬೆಂಬಲಿಸಿ ಬರೆದಿದ್ದೇವೆ.

ಧುಮಾಳೆಯವರು ತನ್ನ ಮೇಲೆ ಅತ್ಯಾಚಾರವೆಸಗಿದರು ಎಂದು ಮಹೇಶ್ ಎಂಬ ಯುವಕ ಆರೋಪಿಸಿದ್ದ. ಆದರೆ ತಾತ್ಕಾಲಿಕ ಕೆಲಸಕ್ಕೆಂದು ಸೇರಿದ್ದ ಮಹೇಶ್ ಮೈಗಳ್ಳನಾಗಿದ್ದರಿಂದ ಅವನ ಜಾಗಕ್ಕೆ ಬೇರೆಯವರನ್ನು ನೇಮಿಸುವ ಪ್ರಕ್ರಿಯೆ ಪ್ರಾರಂಭವಾಗಿತ್ತು, ತಾನು ಕೆಲಸ ಕಳೆದುಕೊಳ್ಳುವುದನ್ನು ತಪ್ಪಿಸಲು ಆತ ಅಂತಹ ಸುಳ್ಳು ಆರೋಪವನ್ನು ಮಾಡಿದ್ದ. ಅಷ್ಟೇ ಅಲ್ಲದೆ, ಧುಮಾಳೆಯವರು ಅಪಾರ ಆಸ್ತಿ ಸಂಗ್ರಹಿಸಿದ್ದಾರೆ ಎಂದೂ ಆರೋಪಿಸಿದ್ದ.

ವಾಸ್ತವವಾಗಿ ಧುಮಾಳೆಯವರು ಹನ್ನೆರಡು ವರ್ಷಗಳ ಹಿಂದೆ ಸದಾಶಿವನಗರದಲ್ಲಿ ಒಂದು ಮನೆಯನ್ನು ಕಟ್ಟಿಸಿದ್ದಾರೆ ಮಾತ್ರವಲ್ಲ, ಅವರ ಮೂಲ ಊರಾದ ಚಿಕ್ಕೋಡಿ ತಾಲ್ಲೂಕಿನ ಸದಲಗಾ ಗ್ರಾಮದಲ್ಲಿ ಅವರ ಕುಟುಂಬಕ್ಕೆ ಇದ್ದದ್ದು ಹನ್ನೊಂದು ಎಕರೆ ಜಮೀನು, ಮತ್ತು ಆ ಜಮೀನು ಅವರ ತಾಯಿ ಮತ್ತು ಮೂವರು ಸಹೋದರರಲ್ಲಿ ಹಂಚಿಕೆಯಾಗಿದೆ.

ಮಹೇಶ್ ಈ ಎಲ್ಲ ಆರೋಪಗಳನ್ನು ಮಾಡಿದ್ದ ಸಂದರ್ಭದಲ್ಲಿ ಧುಮಾಳೆಯವರ ಪುತ್ರನ ಮದುವೆ ನಡೆಯಲಿತ್ತು, ಇದನ್ನೇ ನೆಪ ಮಾಡಿಕೊಂಡು ಅವರಿಗೆ ಅವಮಾನ ಮಾಡಿ ಅವರಿಂದ ಹಣ ಪಡೆಯಲು ಮಹೇಶ್ ಸಂಚು ರೂಪಿಸಿದ್ದ.

ಇದೆಲ್ಲ ನಮ್ಮ ಗಮನಕ್ಕೆ ಬಾರದೇ ಧುಮಾಳೆಯವರ ಮನ ನೋಯಿಸುವಂತಾ ಮತ್ತು ಸತ್ಯಕ್ಕೆ ದೂರವಾದ ಆರೋಪಗಳನ್ನು ಹೊಂದಿದ್ದ ವರದಿಯನ್ನು ಪ್ರಕಟಿಸಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ.

ಧುಮಾಳೆ ಯವರಂತಹ ದಲಿತ ಮತ್ತು ದಕ್ಷ ಅಧಿಕಾರಿಗಳಿಗೆ ನಮ್ಮ ಬೆಂಬಲ ಸದಾ ಇರುತ್ತದೆ ಎಂದು ಮತ್ತೊಮ್ಮೆ ಹೇಳಬಯಸುತ್ತೇವೆ.

– ಸಂ

ದೇಶದ ಉಳಿವಿಗೆ ಬ್ರಾಹ್ಮಣಿಕೆಯ ಕೊಡುಗೆಯೇನು?

ತೆಗಳಿಕೆ ಹೊಗಳಿಕೆ

ಭೈರಪ್ಪನವರ ಕೃತಿ ಆವರಣದಲ್ಲಿ (ಲಂಕೇಶ್ 21.3.07) ಈ ದೇಶ ಉಳಿದದ್ದು ಬ್ರಾಹ್ಮಣಿಕೆಯಿಂದಲೇ (ಆವರಣ ಪುಟ 181) ಎಂಬ ಅಭಿಪ್ರಾಯವಿದೆ . ಅದಕ್ಕುತ್ತರವಾಗಿ ಇದನ್ನು ಬರೆಯುತ್ತಿದ್ದೇನೆ.

ಒಂದು ವಸ್ತುನಿಷ್ಠ ಕೃತಿ ಎಂದು ಇತಿಹಾಸಕಾರರಿಂದ ಹೊಗಳಲ್ಪಟ್ಟಿರುವ ಭಾರತದಲ್ಲಿ ಮೊಗಲ್ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದ ಬಾಬರನು ರಚಿಸಿದ ಬಾಬರ್ ನಾಮ ಗ್ರಂಥದಲ್ಲಿ ಬರುವ ಒಂದು ಪ್ರಮುಖವಾದ ಉಲ್ಲೇಖ ಹೀಗಿದೆ: "ಈ ದೇಶವಾಸಿಗಳು ಬೇರೆ-ಬೇರೆ ಜಾತಿಗಳೆಂಬ ಕಾರಣಕ್ಕೆ ಒಂದೇ ರಾಜನ ಸೈನ್ಯದಲ್ಲಿದ್ದರೂ ಕೂಡ ಪ್ರತ್ಯೇಕವಾಗಿ ಅಡುಗೆ ಮಾಡಿ ಉಣ್ಣುತ್ತಾರೆ, ಆದ್ದರಿಂದ ಒಗ್ಗಟ್ಟೇ ಇಲ್ಲದ ಇವರನ್ನು ಬಗ್ಗು ಬಡಿಯುವುದು ದೊಡ್ಡ ಸಂಗತಿಯೇನಲ್ಲ..." ಬ್ರಿಟಿಷರು ದೇಶಕ್ಕೆ ಕಾಲಿಡುವ ಎಷ್ಟೋ ಮೊದಲೇ ನಮ್ಮವರ ದೌರ್ಬಲ್ಯ (ಅಥವಾ ಹಣೆಬರಹ)ವನ್ನು ಬಾಬರ್ ದಾಖಲಿಸಿದ್ದ.

ಹೀಗೆ ಜಾತಿ-ಭೇದಗಳ ಕಾರಣ ಸ್ವಭಾವತಃ ಒಡೆದು ಹೋಗಿದ್ದವರನ್ನು ಬಾಬರ್‌ನಂಥ ಪರಕೀಯರು ಸುಲಭದಲ್ಲಿ ಸೋಲಿಸಿದರೆ, ನಂತರ ಬಂದ ಬ್ರಿಟಿಷರು ಕೂಡ ಇದನ್ನು ಸಮರ್ಥವಾಗೇ ಬಳಸಿಕೊಂಡು ಸಾಮ್ರಾಜ್ಯ ಕಟ್ಟಿದರು. ಒಟ್ಟಾರೆ ದೇಶದ ಒಗ್ಗಟ್ಟನ್ನು ಮುರಿಯಲು ಮೂಲಕಾರಣವಾದ ಜಾತೀಯತೆಯ ವಿಷಬೀಜವನ್ನು ಬಿತ್ತಿ ಪೋಷಿಸಿದವರೇ ದೇಶದ ದಾಸ್ಯಕ್ಕೆ ಕಾರಣರೇ ಹೊರತು ಅವರು ರಕ್ಷಕರಲ್ಲ ಎಂಬುದನ್ನು ಭೈರಪ್ಪನವರು ತಿಳಿದಿರಲಿ.

ಹಿರಿಯ ಸಾಹಿತಿಗಳೆಂದೆನಿಸಿಕೊಂಡವರು ಧರ್ಮ-ಧರ್ಮಗಳ ನಡುವೆ ಉತ್ಪ್ರೇಕ್ಷಿಸಿ ಬರೆದ ಅಸಂಬದ್ಧ ತರ್ಕಗಳು ಜನರನ್ನು ತಪ್ಪು ದಾರಿಗೆಳೆಯುತ್ತವೆಯೋ ವಿನಃ ಸಂಬಂಧ ಬೆಸೆಯಲಾರವು. ಕ್ರೈಸ್ತ-ಮುಸಲ್ಮಾನರು ದೇಶಕ್ಕೆ ಕಾಲಿಡುವ ಮೊದಲು ಹಿಂದೂಗಳು ಬೌದ್ಧ ಜೈನ ಧರ್ಮೀಯರೊಡನೆ ಕಚ್ಚಾಟ ನಡೆಸಿದ್ದರು. ಶಂಕರಾಚಾರ್ಯರಂತಹವರು ಬೌದ್ಧ ಧರ್ಮಕ್ಕೆ ಹಾಗು ಅವರ ಆಲಯಕ್ಕೆ ಮಾಡಿದ ಹಾನಿ ಇತಿಹಾಸಬಲ್ಲ ಪ್ರತಿಯೊಬ್ಬರಿಗೂ ತಿಳಿದಂತಹ ಸಂಗತಿಯಾಗಿದೆ.

ಹಿಂದೂ ದೇಗುಲವನ್ನು ಲೂಟ ಮಾಡಿದ ಮರಾಠರ (ಭೈರಪ್ಪನವರ ಪ್ರಕಾರ ಹಿಂದೂತ್ವವನ್ನು ರಕ್ಷಿಸಿದವರು) ವಿರುದ್ಧ ಶೃಂಗೇರಿ ಪೀಠಕ್ಕೆ ಅಭಯ ನೀಡಲು ಟಿಪ್ಪುವಿನಂತಹ ಮುಸ್ಲಿಮರೇ ಬರಬೇಕಾಯಿತು. ಮಾರ್ಚ್ 7 ರ ಲಂಕೇಶ್‌ನಲ್ಲಿರುವ 'ವೇಟೆ ಚೀಗವ' ಲೇಖನದಲ್ಲಿ ಕೋಟೇಶ್ವರ ದೇವಾಲಯದಲ್ಲಿ ನಡೆದ ಹೋರಾಟದ ಪ್ರಸ್ತಾಪವಿದೆ. ಈ ಹೋರಾಟದ ಬಳಿಕ ಕೆಲ ವರ್ಷಗಳ ಕಾಲ ನಿಂತ ಈ ಪ್ರಸಿದ್ಧ ಜಾತ್ರೆಯನ್ನು ಮಧ್ಯಸ್ಥಿಕೆ ವಹಿಸಿ ಪುನಃ ಆರಂಭಿಸಿದ್ದು ಆಗ ಬಾರಕೂರನ್ನು ಆಳುತ್ತಿದ್ದ ಏಕದಲ ಖಾನ್ ಎಂಬ ಮುಸ್ಲಿಂ ಸಾಮಂತ ಎಂದು ಶಾಸನಗಳು ಸಾರುತ್ತವೆ. ಜಹಾಂಗೀರ್, ಷಾಹಜಹಾನ್ ದೇಗುಲವನ್ನು ಲೂಟಗೈದರು ಎನ್ನುವ ಭೈರಪ್ಪನವರು ಸ್ವಧರ್ಮೀಯರೇ ಆಗಿರುವ ಮರಾಠರು, ಶಂಕರಾಚಾರ್ಯರು, ಹಿಂದೂ ದೇಗುಲ, ಬೌದ್ಧ ಮಂದಿರಗಳನ್ನು ಲೂಟಗೈದಂತ ಸಂಗತಿಯ ಬಗ್ಗೆ ಜಾಣಮರೆವನ್ನು ತೋರುವುದು ಹಾಸ್ಯಾಸ್ಪದವೆನಿಸುತ್ತದೆ.

ಮೊಗಲ್ ಸಾಮ್ರಾಜ್ಯವಿರಲಿ, ಬ್ರಿಟಿಷ್ ಚಕ್ರಾಧಿಪತ್ಯವೇ ಇರಲಿ ಸಂದರ್ಭಕ್ಕೆ ತಕ್ಕಂತೆ ಬಹುತೇಕ ಬ್ರಾಹ್ಮಣರು ಅವರೊಂದಿಗೆ ವ್ಯವಹರಿಸಿ ತಾವು ಬದುಕಿದರೇ ವಿನಃ ಭೈರಪ್ಪನವರಂದಂತೆ ಕಾಡಿಗೆ ಓಡಿ ಪರ್ಣ ಕುಟೀರ್‌ಗಳಲ್ಲಿ ವಾಸಿಸಿದ್ದ ಕಥೆ ಚಂದಮಾಮಕ್ಕೆ ಕಳುಹಿಸಲು ಯೋಗ್ಯವಾಗಿದೆ ಅಷ್ಟೆ.

ಬ್ರಿಟಿಷರಿಂದ ಸ್ವಾತಂತ್ರ್ಯ ಗಳಿಸಲು ಹಿಂದೂಗಳಂತೆ ಮುಸ್ಲಿಂ ವೀರರೂ ಕೆಚ್ಚೆದೆಯಿಂದ ಹೋರಾಡಿ ವೀರ ಮರಣವನ್ನಪ್ಪಿದ್ದರು. ಕೆಲ ವರ್ಷಗಳ ಹಿಂದೆ ಭಗತ್‌ಸಿಂಗ್ ಕುರಿತ ಕೆಲ ಸಿನಿಮಾಗಳು ಬಂದವು. ಅಂತಹ ಒಂದು ಸಿನಿಮಾದ ಕುರಿತು ಮಾತನಾಡುತ್ತ ಭಗತ್‌ರ ಸೋದರ ಸಂಬಂಧಿಯೊಬ್ಬರು ಅವರ ಬದುಕಿನಲ್ಲಿ ನಡೆದ ಕಾಕೋರಿ ರೈಲು ಘಟನೆಯನ್ನು ಉಲ್ಲೇಖಿಸಿ–'ಈ ಸನ್ನಿವೇಶದಲ್ಲಿ ಸ್ವಾತಂತ್ರ್ಯ ವೀರ ಅಷ್ಫಾಕ್ ಉಲ್ಲಾ ಖಾನ್‌ರನ್ನು ಮರೆತೀರಾದರೆ, ಮದುವೆ ಮನೆಯಲ್ಲಿ ಮದುಮಗನನ್ನೇ ಮರೆತಂತೆ' ಎಂದು ಎಚ್ಚರಿಸಿದ್ದರು. ಹೀಗೆ ಅಷ್ಫಾಕ್‌ರಿಂದ ಹಿಡಿದು ಟಿಪ್ಪು ಸುಲ್ತಾನನವರೆಗೆ ಭಾರತಮಾತೆಯ ಇಸ್ಲಾಮ್ ವೀರಪುತ್ರರು ಅನೇಕರಿದ್ದಾರೆನ್ನುವುದನ್ನು ಭೈರಪ್ಪನವರು ತಿಳಿದುಕೊಳ್ಳುವುದೊಳಿತು...

–ರವಿ ಪುತ್ತೂರ, ದಕ್ಷಿಣ ಕನ್ನಡ

ಪ್ರಶಸ್ತಿ ಗೆದ್ದ 'ಚಿಲ್ಟು'

ಕೆಲವರ ಜೀವನದಲ್ಲಿ ಎಂತೆಂತಹ ಸಂದರ್ಭಗಳು ...ದುರಾಗುತ್ತವೆ ನೋಡಿ. ಆಗ ನಾನು ಮೂರು ಚಿತ್ರಗಳಲ್ಲಿ ...ಟ್ಟೊಟ್ಟಿಗೆ ನಟಿಸುತ್ತಿದ್ದೆ. ಬೆಳಗ್ಗೆ 'ಓಂ' ಚಿತ್ರದಲ್ಲಿ ...ರೌಡಿಯಾಗಿ ನಟಿಸಿದರೆ, ಮಧ್ಯಾಹ್ನ 'ಗಡಿಬಿಡಿ ಅಳಿಯ' ...ಚಿತ್ರದಲ್ಲಿ ಅಳಿಯನ ಪಾತ್ರದಲ್ಲಿ ತಲ್ಲೀನನಾಗುತ್ತಿದ್ದೆ, ಅದನ್ನು ...ಮುಗಿಸಿ ರಾತ್ರಿ ಒಂಬತ್ತು ಗಂಟೆಗೆ 'ಸಮರ' ಚಿತ್ರೀಕರಣಕ್ಕೆ ...ಹಾಜರಾಗುತ್ತಿದ್ದೆ. ರಾತ್ರಿ ಹತ್ತರಿಂದ ಬೆಳಗ್ಗಿನ ಜಾವ ...ಆರು ಗಂಟೆಯ ತನಕ 'ಸಮರ'ದಲ್ಲಿ ಭಾಗವಹಿಸುತ್ತಿದ್ದೆ. ...ಹೀಗೆ ಒಂದೇ ದಿನದಲ್ಲಿ ಬೆಳಗಿನ ಜಾವ ರೌಡಿ, ಮಧ್ಯಾಹ್ನ ...ಅಳಿಯ ಮತ್ತು ರಾತ್ರಿ ಸಮರನಾಯಕ.... ಇಂತಹ ...ವಿಭಿನ್ನ ಪಾತ್ರಗಳಲ್ಲಿ ನಟಿಸುತ್ತಿದ್ದೆ. ಇದೆಲ್ಲವೂ ಆ ...ಸಂದರ್ಭದಲ್ಲಿ ಅನಿವಾರ್ಯವಾಗಿತ್ತು. ಯಾವುದೇ ...ನಿರ್ಮಾಪಕರಿಗೆ ನನ್ನಿಂದ ನಷ್ಟವಾಗಬಾರದು ಎಂಬ ...ಉದ್ದೇಶದಿಂದ ಹನ್ನೆರಡು ದಿನಗಳ ಕಾಲ ನಾನು ದಿನದ ...ಇಪ್ಪತ್ತೆರಡು ಗಂಟೆ ಸತತವಾಗಿ ನಟಿಸುತ್ತಿದ್ದೆ.

ಆಗ ನನ್ನ ಪತ್ನಿ ಗೀತಾ ಮತ್ತು ಅಪ್ಪಾಜಿ "ಇಷ್ಟೊಂದು ...ಶ್ರಮವಹಿಸಿ ನಟಿಸಬೇಡ" ಎಂದು ಕಿವಿಮಾತು ...ಹೇಳುತ್ತಿದ್ದರು. ಆದರೆ ಹೀಗೆ ನಟಿಸುವುದರಲ್ಲೇ ಒಂಥರಾ ...ಸುಖ ಮತ್ತು ಸವಾಲನ್ನು ನಾನು ಕಂಡೆ. ಅಂತಹ ...ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿದೆ ಎಂಬ ...ಸಂತೋಷ ನನಗಿದೆ. ಹೀಗೆ ನಾನು ಹಗಲು-ರಾತ್ರಿ ...ನಟಿಸಿದ್ದರಿಂದ ಆ ಚಿತ್ರಗಳ ಗುಣಮಟ್ಟಕ್ಕೇನೂ ತೊಂದರೆ ...ಆಗಲಿಲ್ಲ. 'ಓಂ' ಮತ್ತು 'ಗಡಿಬಿಡಿ ಅಳಿಯ' ...ಬಾಕ್ಸಾಫೀಸಿನಲ್ಲಿ ಸೂಪರ್‌ಹಿಟ್ ಆದರೆ 'ಸಮರ' ...ಆವರೇಜ್ ಸಕ್ಸಸ್ ಆಯಿತು.

ನಾನು ಎದುರಿಸಿದ ಮತ್ತೊಂದು ಸವಾಲೆಂದರೆ ...ನನ್ನ ಕಿರಿಯ ಮಗಳು 'ಚಿಲ್ಟು' (ನಿವೇದಿತಾ) ಜೊತೆ ...ನಟಿಸಬೇಕಾಗಿ ಬಂದಾಗ. 'ಅಂಡಮಾನ್' ಚಿತ್ರದ ಬಗ್ಗೆ ...ಚರ್ಚಿಸಲು ನಿರ್ದೇಶಕ ವಿಶ್ವನಾಥ್ ನಮ್ಮ ಮನೆಗೆ ...ಬಂದ ಸಂದರ್ಭ ನನಗಿನ್ನೂ ನೆನಪಿದೆ. ನಾವಿಬ್ಬರೂ ...ಚಿತ್ರದ ನಾಯಕಿಯ ಬಗ್ಗೆ ಚರ್ಚಿಸುತ್ತಿರುವಾಗ ನನ್ನ ...ಪ್ರೀತಿಯ ಚಿಲ್ಟು ಶಾಲೆಗೆ ಹೊರಟುನಿಂತಿದ್ದಳು. ಆಕೆ ...ಹೋಗುವ ಮುನ್ನ 'ಒಕೆ ಪಪ್ಪಾ, ಬಾಯ್....' ಎಂದು ...ಹೇಳುತ್ತಾ ನನ್ನ ಕೆನ್ನೆಗೆ ಒಂದು ಮುತ್ತು ಕೊಟ್ಟು ...ಓಡಿಹೋದಳು. ಆಗ ನಿರ್ದೇಶಕ ವಿಶ್ವನಾಥ್‌ಗೆ ...'ಅಂಡಮಾನ್' ಚಿತ್ರದಲ್ಲಿನ ಮಗುವಿನ ಪಾತ್ರಕ್ಕೆ ನನ್ನ ...ಕಿರಿ ಮಗಳು ನಿವೇದಿತಾಳನ್ನೇ ಯಾಕೆ ಹಾಕಿಕೊಳ್ಳಬಾರದು ...ಎಂದು ಅನ್ನಿಸಿತು. ಅವರು ಅದನ್ನು ವ್ಯಕ್ತಪಡಿಸಿದಾಗ ...ಅಯ್ಯಯ್ಯೋ.... ನಾನು ರಿಸ್ಕ್ ತಕ್ಕೋಳಲ್ಲ... ನನ್ಗೆ ಕೋಪ ...ಜಾಸ್ತಿ. ನನ್ಗೆ ಮಕ್ಕಿಗೆ ಬಯ್ಯೋಕೆ ಇಷ್ಟವಿಲ್ಲ. ನಿಮ್ಗೂ ...ಜೊತೆ ಚಿತ್ರ ಮಾಡುವಾಗ ಪ್ರಾಬ್ಲಂ ಜಾಸ್ತಿ ಆಗುತ್ತೆ. ...ಚಿಕ್ಕ ರೋಲ್ ಆದ್ರೆ ಪರ್ವಾಗಿರ್ಲಿಲ್ಲ, ಆದ್ರೆ ಈ ಪಾತ್ರ ...ಇಡೀ ಚಿತ್ರದುದ್ದಕ್ಕೂ ಇದ್ಯಲ್ವ? ಬೇರೆ ಯಾರಾದ್ರೂ ...ಒಳ್ಳೆಯ ಬಾಲನಟಿಯನ್ನು ನೋಡಿ' ಎಂದು ನಾನು ...ಹೇಳಿದೆ.

'ಇಲ್ಲ ಸಾರ್, ನಾವು ನಿಭಾಯಿಸ್ತೀವಿ' ಎಂದು ...ವಿಶ್ವನಾಥ್ ಹೇಳಿದಾಗ 'ಹಾಗಾದ್ರೆ ನನ್ಗೆ ಎರಡು ದಿವಸ ...ಟೈಂ ಕೊಡಿ' ಎಂದು ಕೇಳಿಕೊಂಡೆ. ಇದನ್ನು ಗೀತಾ ...ಜೊತೆ ಚರ್ಚಿಸಿದೆ. 'ನೀವ್ ಬೇರೆ ಅಪ್ಸೆಟ್ ಆಗ್ತೀರಾ... ...ನಿಮ್ಗೂ ತೊಂದ್ರೆ ಆಗುತ್ತೆ...' ಎಂದು ನಾನು ಹೇಳಿದಾಗ ...ಟ್ರೈ ಮಾಡೋಣ' ಎಂದು ಗೀತಾ ಧೈರ್ಯ ತುಂಬಿದಳು. ...ಚಿಲ್ಟುಗೆ ಕೇಳಿದಾಗ ಆಕೆ ಕೂಡ 'ಎಸ್' ಎಂದಳು.



ಕೊನೆಗೆ ಅಪ್ಪಾಜಿಯ ಗಮನಕ್ಕೆ ವಿಷಯ ತಂದೆ. ಅವರಿಗಂತೂ ಖುಷಿಯೋ ಖುಷಿ. ಅವರು ಎಂದಿನಂತೆ 'ನಿನ್ನ ತಾತನ ಆಶೀರ್ವಾದ ಅವಳಿಗೆ ಇದೆ ಕಂದಾ. ಮಾಡ್ತಾಳೆ ಬಿಡು...' ಎಂದು ಹುರಿದುಂಬಿಸಿದರು. ಹೀಗೆ.... ನನ್ನ ಮಗಳು ನಿವೇದಿತಾ ಅನಿರೀಕ್ಷಿತವಾಗಿ ಬಾಲನಟಿಯಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುವಂತಾಯಿತು.

ಅಂಡಮಾನ್‌ನಲ್ಲಿ ನಡೆದ 'ಅಂಡಮಾನ್' ಚಿತ್ರೀಕರಣಕ್ಕೆ ನನ್ನ ಜೊತೆ ಗೀತಾ, ಹಿರಿಯ ಮಗಳು ನಿರುಪಮಾ ಮತ್ತು ಕಿರಿಯ ಮಗಳು ನಿವೇದಿತಾ ಕೂಡ ಬಂದರು. ಅಂದರೆ ನನ್ನ ಸಂಸಾರವೇ ಒಂದೂವರೆ ತಿಂಗಳ ಕಾಲ ಅಂಡಮಾನ್‌ನಲ್ಲಿ ಮೊಕ್ಕಾಂ ಹೂಡಿತ್ತು. ಮೊದಲ ದಿನ ಚಿಲ್ಟು ಚಿಕ್ಕದೊಂದು ದೃಶ್ಯವನ್ನು ಎದುರಿಸಿದಳು. ಆ ನಂತರ ಅವಳನ್ನು ರಿಸಾರ್ಟ್‌ಗೆ ಅವಳ ತಾಯಿ ಗೀತಾ ಕರೆದುಕೊಂಡುಹೋದಳು. ನಾನು ಮಾತ್ರ ರಾತ್ರಿ ತನಕ ಶೂಟಿಂಗ್‌ನಲ್ಲಿ ಮಗ್ನನಾಗಿದ್ದೆ.

ಅಂಡಮಾನ್‌ನಲ್ಲಿ ಬೆಳಗಿನ ಜಾವ ಐದು ಗಂಟೆಗೆಲ್ಲಾ ಬಿಸಿಲು ಬಂದುಬಿಡುತ್ತೆ. ಸಂಜೆ ನಾಲ್ಕು ಗಂಟೆಗೆಲ್ಲಾ ಕತ್ತಲಾಗುತ್ತದೆ. ನಮ್ಮ ಚಿತ್ರದ ಚಿತ್ರೀಕರಣ ಬಹುತೇಕ ಬೆಳಗಿನ ಜಾವವೇ ಹೆಚ್ಚಾಗಿರುತ್ತಿತ್ತು. ಹೀಗಾಗಿ ಐದೂವರೆ ಗಂಟೆಗೆಲ್ಲಾ ನಾವು ಮುಖಕ್ಕೆ ಮೇಕಪ್ ಬಳಿದು ಸೆಟ್‌ನಲ್ಲಿರಬೇಕಾದರೆ ಬೆಳಗಿನ ಜಾವ ಮೂರು ಗಂಟೆಗೇ ಏಳಬೇಕಿತ್ತು. ನನ್ನ ಮುದ್ದಿನ ಚಿಲ್ಟು ಬೆಂಗಳೂರಿನಲ್ಲಿದ್ದಾಗ ಮೂರು ಗಂಟೆಗೆ ಎಂದೂ ಎದ್ದವಳೇ ಅಲ್ಲ, ಹೀಗಾಗಿ ಆಕೆ ಮೂರು ಗಂಟೆಗೆ ಏಳುತ್ತಾಳೋ ಇಲ್ಲವೋ ಎಂಬ ಅಳುಕು ನಮ್ಮನ್ನು ಕಾಡುತ್ತಿತ್ತು. ಆದರೆ ನಮಗೆ ಆಶ್ಚರ್ಯವೆಂದರೆ ಮೊದಲ ಬಾರಿ ಆಕೆಯನ್ನು ನಿದ್ರೆಯಿಂದ ಎಬ್ಬಿಸಿದಾಕ್ಷಣ ಆಕೆ ಕೂಡಲೇ ಎದ್ದು ಕುಳಿತು ಶೂಟಿಂಗ್‌ಗೆ ತಯಾರಾಗುತ್ತಿದ್ದಳು. ಸುಮಾರು ಒಂದು ತಿಂಗಳ ಕಾಲ ನಿತ್ಯವೂ ಹೀಗೇ ಬೆಳಗಿನ ಜಾವ ಮೂರು ಗಂಟೆಗೆ ಎದ್ದು ಶೂಟಿಂಗ್‌ಗೆ ಹೋಗುವುದು ದಿನಚರಿಯಾಗಿತ್ತು.

ನಾನು ಎಂದೂ ಆಕೆಯ ಜೊತೆ ಇಷ್ಟೊಂದು ಸಮಯವನ್ನು ಕಳೆದಿರಲಿಲ್ಲ, ಅವಳ ಜೊತೆ ಆಟವಾಡಿರಲಿಲ್ಲ. ಇದೇ ಮೊದಲ ಬಾರಿಗೆ ನಾನು ಅಷ್ಟು ಸುದೀರ್ಘ ಸಮಯ ಅವಳೊಂದಿಗೆ ಕಳೆದದ್ದು. ಬೆಳಗಿನ ಜಾವ ಐದು ಗಂಟೆಗೆ ಮುಖಕ್ಕೆ ಮೇಕಪ್ ಮಾಡಿಕೊಂಡು ಇಬ್ಬರೂ ಶೂಟಿಂಗ್‌ಗೆ ಹೊರಡುತ್ತಿದ್ದೆವು. ದಾರಿಯಲ್ಲಿ ಅಂದಿನ ದಿನದ ಶೂಟಿಂಗ್ ಬಗ್ಗೆ ಚರ್ಚಿಸುತ್ತಿದ್ದೆವು.

ಆಗೆಲ್ಲ ಒಂದು ಕುತೂಹಲ ನನ್ನನ್ನು ಕಾಡುತ್ತಿತ್ತು. ಈ ಪುಟ್ಟ ಹುಡುಗಿ ತನ್ನ ತುಂಟಾಟಗಳನ್ನು ಬಿಟ್ಟು ಇಷ್ಟು ಗಂಭೀರವಾಗಿ ನಟಿಸಲು ಹೇಗೆ ಸಾಧ್ಯ ಎಂಬ ಕುತೂಹಲ ಅದು. ಕೊನೆಗೆ ನನಗೆ ಉತ್ತರ ಸಿಕ್ಕಿತು. ಈಕೆ ಎಷ್ಟಾದರೂ ರಾಜ್‌ಕುಮಾರ್ ಅವರ ಮೊಮ್ಮಗಳು ತಾನೇ? ಅಪ್ಪಾಜಿಗಂತೂ ಅವರ ಎರಡನೇ ತಲೆಮಾರಿನ ಕೂಸೊಂದು ನಟಿಸುತ್ತಿರುವ ಬಗ್ಗೆ ಎಲ್ಲಿಲ್ಲದ ಸಂತೋಷ. ಕಲೆಯೆಂಬುದು ರಕ್ತಗತವಾಗಿ ಬಂದಿರುತ್ತದೆ ಎಂಬ ಅಂಶ ನಿಜವಿರಬಹುದು ಎಂದು ನಾನು ಆಲೋಚಿಸುವಂತೆ ನನ್ನ ಚಿಲ್ಟು ಅಂದು ಸಮುದ್ರದಲ್ಲಿ ನಟಿಸಿದಳು. ಆ ಘಟನೆ ಹೀಗಿದೆ:

ನಾನು ಮತ್ತು ನನ್ನ ಮಗಳು ಸಮುದ್ರದ ಮಧ್ಯ ಬೋಟೊಂದರಲ್ಲಿ ಪ್ರಯಾಣಿಸುತ್ತಿರುವಾಗ ಖಳನಾಯಕರು ಮತ್ತೊಂದು ಬೋಟ್‌ನಲ್ಲಿ ನಮ್ಮನ್ನು ಹಿಂಬಾಲಿಸುವ ದೃಶ್ಯವದು. ಅರ್ಧ ದಾರಿ ಹೋದ ನಂತರ ನಾನು ಬೋಟ್‌ನಿಂದ ಸಮುದ್ರಕ್ಕೆ ಧುಮುಕಬೇಕು. ನಾನು ಧುಮುಕಿದ ನಂತರ ಆಕೆ ಒಬ್ಬಳೇ ಅದೇ ಬೋಟ್‌ನಲ್ಲಿ ಮುಂದೆ ಸಾಗಬೇಕು. ಅಬ್ಬರದ ಅಲೆಗಳ ನಡುವೆ ಆಕೆ ಒಬ್ಬಳೇ ಹೇಗೆ ಹೋಗುತ್ತಾಳೆ ಎಂದು ನಮಗೆಲ್ಲಾ ತುಂಬಾ ಹೆದರಿಕೆಯಾಗಿತ್ತು. ಆದರೆ ಆಕೆ ಮಾತ್ರ ಯಾವ ಭಯವಿಲ್ಲದೆ ಬೋಟ್‌ನಲ್ಲಿ ಮುಂದೆ ಹೋಗಿದ್ದನ್ನು ಕಂಡು ನನಗೇ ಆಶ್ಚರ್ಯವಾಯಿತು.


ಇನ್ನೊಂದು ದೃಶ್ಯ: ಅಂದು ಚಿತ್ರೀಕರಣ ನಡೆಯುತ್ತಿದ್ದಾಗ ದೊಡ್ಡದಾಗಿ ಮಳೆ ಪ್ರಾರಂಭವಾಯಿತು. ಆಗ ಅಲೆಗಳೂ ಜೋರಾಗಿ ಅರ್ಭಟಿಸಲಾರಂಭಿಸಿದವು. ಆದರೆ ಅವಕ್ಕೆ ಹೆದರದೇ ಚಿಲ್ಟು ಚಿತ್ರೀಕರಣದಲ್ಲಿ ಪಾಲ್ಗೊಂಡಳು. ನೀರಿನಲ್ಲಿ ಇಳಿಯಲೂ ಹೆದರುತ್ತಿದ್ದ ನನ್ನ ಮಗಳು ಸಮುದ್ರದ ಮಧ್ಯದಲ್ಲಿ ಇಷ್ಟೊಂದು ಬೋಲ್ಡ್‌ಆಗಿ ನಟಿಸಲು ಹೇಗೆ ಸಾಧ್ಯವಾಯಿತು? ಎಂಬ ಆಶ್ಚರ್ಯ ನನ್ನನ್ನಂತೂ ಬಹಳ ಕಾಡಿತು. ಇದೆಲ್ಲ ಸಾಧ್ಯವಾಗಿದ್ದು ಕ್ಯಾಮೆರಾಮನ್ ರಾಜನ್ ಅವರ ಧೈರ್ಯದ ನುಡಿಗಳಿಂದ ಮಾತ್ರ.

ಆದರೆ ಕೊನೆಗೊಂದು ದಿನ ನನ್ನ ಮುದ್ದಿನ ಮಗಳು ಚಿಲ್ಟು ನಾನಿಲ್ಲದೆ ಬೋಟ್‌ನಲ್ಲಿ ಒಬ್ಬಳೇ ಇರುವುದಿಲ್ಲ ಎಂದು ಹಠ ಹಿಡಿದಳು. ಆ ದಿನ ಆಕೆ ಯಾಕೆ ಹಾಗೆ ಮಾಡಿದಳೋ ಗೊತ್ತಿಲ್ಲ. ಕೊನೆಗೆ ನಾನು ಸ್ವಲ್ಪ ಗೋಣಿ ಚೀಲ ಮತ್ತು ಬೆಡ್‌ಶೀಟನ್ನು ಮೈಗೆಲ್ಲ ಹೊದ್ದುಕೊಂಡು ಆ ಬೋಟ್‌ನ ಮೂಲೆಯಲ್ಲಿ ಅಡಗಿ ಕುಳಿತುಕೊಂಡೆ. ನಾನು ಹಾಗೆ ಕುಳಿತುಕೊಂಡ ನಂತರವೇ ಆಕೆಗೆ ನಟಿಸುವ ಧೈರ್ಯ ಬಂತು.

ಇದೆಲ್ಲ ನಾನು ಯಾಕೆ ಹೇಳುತ್ತಿದ್ದೇನೆ ಎಂದರೆ, ಅಪ್ಪಾಜಿ ಜೊತೆ ನಾನು ನಟಿಸಿದಾಗ ನನಗಾದ ಅನುಭವವೇ ಒಂದು, ನನ್ನ ಮಗಳ ಜೊತೆ ನಟಿಸಿದಾಗ ಆದ ಅನುಭವವೇ ಮತ್ತೊಂದು. ಇನ್ನೊಂದು ಮುಖ್ಯವಾದ ಅಂಶ ಯಾವುದೆಂದರೆ, ಸ್ವಂತ ಮಗಳ ಜೊತೆ ನಟಿಸಿದ ಕೆಲವು ದೃಶ್ಯಗಳು ಭಾವಪೂರ್ಣವಾಗಿಬಂದದ್ದು. ಆಕೆ ನನ್ನ ಎದುರಿಗಿದ್ದುದರಿಂದ ನಾನು ಸಿನಿಮಾ ಎಂಬುದನ್ನೇ ಮೈಮರೆತು ನಟಿಸಿದ್ದೆ.

ನಿರೂಪಣೆ: ಸದಾಶಿವ ಶೆಣೈ

46




ಬಾಕ್ಸಾಫೀಸಿನಲ್ಲಿ ಈ ಚಿತ್ರ ಯಶಸ್ವಿ ಆಗದಿದ್ದರೂ ಎಲ್ಲರೂ ಆಕೆಯ ನಟನೆಯನ್ನು ಕೊಂಡಾಡಿದರು. ಅಪ್ಪಾಜಿಗೂ ಇಷ್ಟವಾಯಿತು. ಆ ವರ್ಷ ರಾಜ್ಯ ಪ್ರಶಸ್ತಿ ಪ್ರಕಟವಾದಾಗ ಅತ್ಯುತ್ತಮ ಬಾಲನಟಿ ಪ್ರಶಸ್ತಿ ಈಕೆಗೇ ದೊರಕಿದ್ದು ನೋಡಿ ನಮ್ಮ ಮನೆಯಲ್ಲಿ ಎಲ್ಲರಿಗೂ ಸಂತೋಷವಾಯಿತು. ಯಾಕೆಂದರೆ ನನ್ನ ತಂಗಿ ಪೂರ್ಣಿಮಾ, ನನ್ನ ತಮ್ಮ ಪುನೀತ್ ಕೂಡಾ ಮೊದಲ ಚಿತ್ರದಲ್ಲೇ ಬಾಲನಟನೆಗಾಗಿ ಪ್ರಶಸ್ತಿ ಪಡೆದಿದ್ದರು. ಅದೇ ಸಾಧನೆಯನ್ನು ಚಿಲ್ಟು ಕೂಡಾ ಮಾಡಿದ್ದು ಅಪ್ಪಾಜಿಗೆ ಎಲ್ಲಿಲ್ಲದ ಸಂತೋಷ ಮೂಡಿಸಿತ್ತು.


(ಮುಂದುವರೆಯುವುದು)

"ಮೋರ್‍ಖಿ"ಗೆ ಬ್ಯಾಡ್‌ಲಕ್, 'ಶಿವಾಜಿ'ಗೆ ಗುಡ್‌ಲಕ್

ಕಾವೇರಿ ತೀರ್ಪಿನ ವಿರುದ್ಧದ ಹೋರಾಟದಿಂದಾಗಿ ತಮಿಳು ಚಿತ್ರಗಳು ಮತ್ತು ...ಚಾನೆಲ್‌ಗಳನ್ನು ಬಂದ್ ಮಾಡಲಾಗಿತ್ತು. ಇದರಿಂದಾಗಿ ಕನ್ನಡಿಗರೇ ಆದ ಪ್ರಕಾಶ್ ರೈ ...ನಿರ್ಮಿಸಿರುವ 'ಮೋರ್‍ಖಿ' ಎಂಬ ತಮಿಳು ಸಿನಿಮಾವನ್ನು ಕನ್ನಡಿಗರು ನೋಡಲಾಗಲಿಲ್ಲ. ...ಈ ಚಿತ್ರ ತುಂಬಾ ಅದ್ಭುತವಾಗಿದೆ ಎಂದು ವಿಮರ್ಶಕರು ಕೊಂಡಾಡಿದ್ದಾರಲ್ಲದೆ ತಮಿಳು ...ನಾಡಿನಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ.

ಕನ್ನಡ ಚಿತ್ರರಂಗದಿಂದ ಪ್ರಕಾಶ್ ರೈಗೆ ಸಿಗದಿದ್ದ ಬೆಂಬಲ ಮತ್ತೋರ್ವ ಕನ್ನಡಿಗ ...ಶಿವಾಜಿ ಅಲಿಯಾಸ್ ರಜನೀಕಾಂತ್‌ಗೆ ಸಿಗುತ್ತಿದೆ. ಅವರು ನಟಿಸಿರುವ 'ಶಿವಾಜಿ' ಎಂಬ ...ಅದ್ದೂರಿ ಚಿತ್ರದ ಬಿಡುಗಡೆಗೆ ಕನ್ನಡ ಚಿತ್ರರಂಗ ಸಹಕರಿಸುತ್ತಿದೆ. ಇದಕ್ಕೆ ಇನ್ನೊಂದು ...ಕಾರಣವೂ ಇದೆ. 'ಮಾತಾಡ್ ಮಾತಾಡು ಮಲ್ಲಿಗೆ' ಚಿತ್ರೀಕರಣಕ್ಕೆ ಊಟಿಯಲ್ಲಿ ತಮಿಳರು ...ಅದ್ದಿ ಮಾಡಿದಾಗ ಅಲ್ಲಿನ ನಾಯಕ ...ನಟರೆಲ್ಲಾ ವಿಷ್ಣುವರ್ಧನ್‌ಗೆ ಫೋನ್ ...ಮಾಡಿ ಬೆಂಬಲ ಸೂಚಿಸಿದ್ದನ್ನು ಈಗ ...ಅಂಬರ್‌ನವರು ತಮ್ಮ ಅನುಕೂಲಕ್ಕೆ ...ಬಳಸಿಕೊಳ್ಳುತ್ತಿದ್ದಾರೆ. ಹೀಗಾಗಿ ...'ಶಿವಾಜಿ' ಕರ್ನಾಟಕದಲ್ಲಿ ತೆರೆಕಾಣು ...ವುದು ಬಹುತೇಕ ಖಾತ್ರಿಯಾಗಿದೆ. ...ಅಲ್ಲಿಗೆ ಕಾವೇರಿ ವಿವಾದದ ಕಾವು ...ತಣ್ಣಗಾದಂತೆ.





ಶಿಲ್ಪಾ ರಕ್ಷಣೆಗೆ ಮಾಜಿ ಪ್ರಿಯಕರ

ಈಗ ಇಂಗ್ಲೆಂಡಿನ ಮಾಧ್ಯಮಗಳಲ್ಲಿ ಶಿಲ್ಪಾ ಶೆಟ್ಟಿಗೆ ಅಗ್ರಸ್ಥಾನ. ಆಕೆ ಹೋದಲ್ಲಿ, ಬಂದಲ್ಲಿ ಏನೆಲ್ಲ ಮಾಡಿದಳು, ಎಂತಹ ಬಟ್ಟೆ ತೊಟ್ಟಿದ್ದಳು, ಯಾರೊಂದಿಗೆ ಮಾತನಾಡಿದಳು, ರಾಣಿ ಎಲಿಜಬೆತ್‌ರನ್ನು ಭೇಟಿಯಾದಾಗ ಹೇಗೆ ಹೈ ಹೀಲ್ಡ್ ಚಪ್ಪಲಿಯಿಂದಾಗಿ ಶಿಲ್ಪಾ ಜಾರಿ ಬೀಳುವವಳಿದ್ದಳು.... ಇಂಥದ್ದೇ ಸುದ್ದಿಗಳು. ಇವೆಲ್ಲ ಪರವಾಗಿಲ್ಲ. ಆದರೆ 'ನ್ಯೂಸ್ ಆಫ್ ದಿ ವರ್ಲ್ಡ್' ಎಂಬ ಪತ್ರಿಕೆ ಹಿಂದೊಮ್ಮೆ ಶಿಲ್ಪಾ ಶೆಟ್ಟಿ ಮತ್ತು ನಟ ಅಕ್ಷಯ್ ಕುಮಾರ್ ನಡುವೆ ಇದ್ದ ಸಂಬಂಧದ ಬಗ್ಗೆ ಅಶ್ಲೀಲವಾಗಿ ಬರೆದಿದೆ. "ಈಗ ಇಂಗ್ಲೆಂಡಿನಲ್ಲಿ ಶಿಲ್ಪಾ ಶೆಟ್ಟಿ ತಾನೋರ್ವ ಸಂಪ್ರದಾಯಸ್ಥ ಭಾರತೀಯ ಸ್ತ್ರೀ ಎಂಬಂತೆ ವರ್ತಿಸುತ್ತಿರಬಹುದು. ಆದರೆ ಅಕ್ಷಯ್‌ಕುಮಾರ್‌ನೊಂದಿಗಿನ ಆಕೆಯ ಸಂಬಂಧ ಗರ್ಮಾಗರಂ ಆಗಿತ್ತು" ಎಂದಿರುವ ಆ ಪತ್ರಿಕೆ ಅವರ ಲೈಂಗಿಕ ಸಂಬಂಧದ ಬಗ್ಗೆ ತೀರಾ ಕೆಟ್ಟದಾಗಿ ಬರೆದಿದೆ. ಅಷ್ಟೇ ಅಲ್ಲ, ಅಂತಹ ವಿವರಗಳನ್ನು ಸ್ವತಃ ಅಕ್ಷಯ್‌ಕುಮಾರ್‌ನೇ ತಮಗೆ ಹೇಳಿದ ಎಂಬಂತೆ ಬಿಂಬಿಸಿದೆ.



ಇದನ್ನು ನೋಡಿ ಶಿಲ್ಪಾಶೆಟ್ಟಿ "ಅವರೇನೋ ಬರೆದಿರಬಹುದು. ಆದರೆ ಅಕ್ಷಯ್ ನನ್ನ ಬಗ್ಗೆ ಹಾಗೆಲ್ಲ ಮಾತನಾಡುವವನಲ್ಲ" ಎಂದಷ್ಟೆ ಹೇಳಿ ಸುಮ್ಮನಾಗಿದ್ದಾಳೆ. ಆದರೆ ಅಕ್ಷಯ್ ಕುಮಾರ್ ಮಾತ್ರ ಕೆಂಡಾಮಂಡಲನಾಗಿದ್ದಾನೆ. "ನಾನು ಶಿಲ್ಪಾ ಬಗ್ಗೆ ಹಾಗೆಲ್ಲ ಮಾತನಾಡಿಲ್ಲ, ಮಹಿಳೆಯರ ಬಗ್ಗೆ ಹೀಗೆ ಬರೆಯುವುದು ಸರಿಯಲ್ಲ, ನಾನು ಆ ಪತ್ರಿಕೆ ವಿರುದ್ಧ ಮೊಕದ್ದಮೆ ಹೂಡುತ್ತೇನೆ" ಎಂದು ಅಕ್ಷಯ್ ಗುಡುಗಿದ್ದಾನೆ.

ಅಂತೂ ಶಿಲ್ಪಾ ಪಾಲಿಗೆ ಅಕ್ಷಯ್ ಮಾಜಿ ಪ್ರಿಯಕರನಾದರೂ, ಆಕೆಯ ಮಾನ ಕಾಪಾಡುವ ಹೀರೋ ಆಗಿಯೇ ಉಳಿದಿದ್ದಾನೆ, ಅಲ್ಲವೇ?

R.B.P. LANKESH, Kannada Weekly Price Rs. 10/- 11-4-2007 RNI No. KARKAN2005/14648 Regd.No.KA/BG(S)/2036/2005-07



'ಸ್ನೇಹಾನಾ-ಪ್ರೀತಿನಾ' ಚಿತ್ರದಲ್ಲಿ ಲಕ್ಷ್ಮಿ.

ಪಂಜಾಬಿ ಹುಡುಗಿಯರ ದಾಳಿ



ಪಂಜಾಬ್‌ನಿಂದ ಕರ್ನಾಟಕಕ್ಕೆ ಬರೀ ಗೋಧಿ ಮಾತ್ರ ಆಮದಾಗುತ್ತಿಲ್ಲ, ಅದರ ಜೊತೆಗೆ ಗೋಧಿ ಮೈ ಬಣ್ಣದ ನಾಯಕಿಯರು ಕೂಡಾ ಸಾಲುಸಾಲಾಗಿ ಗಾಂಧಿನಗರಕ್ಕೆ ಸರಬರಾಜಾಗುತ್ತಿದ್ದಾರೆ.

'ಮುಂಗಾರು ಮಳೆ' ಚಿತ್ರದ ನಾಯಕಿ ಸಂಜನಾ ಗಾಂಧಿ ಪಂಜಾಬಿನವಳು. ಇದಕ್ಕೂ ಮುನ್ನ ಸುಮಾರು ಐದಾರು ವರ್ಷಗಳ ಹಿಂದೆ ರವೀಂದ್ರ ಮಾನ್ ಎಂಬ ಲೇಡಿ ಜೆಟ್ಟಿ ಕನ್ನಡ ಚಿತ್ರರಂಗಕ್ಕೆ ಬಂದಿದ್ದಳು. ಅದಕ್ಕೂ ಮುಂಚೆ ಟೈಗರ್ ಪ್ರಭಾಕರ್ ಜೊತೆ ನಟಿಸಿ ಅವರ ಶಯನಗೃಹಕ್ಕೆ ದಾಳಿಯಿಟ್ಟ ದಾಲಿ ಎಂಬ ಡಾಲ್ ಕೂಡ ಅಲ್ಲಿಯವಳೇ. ಸದ್ಯದಲ್ಲೇ ಬಿಡುಗಡೆಯಾಗಲಿರುವ 'ಪಲ್ಲಕ್ಕಿ'ಯಲ್ಲಿ ನಟಿಸಿರುವ ರಮಣೀತ ಚೌಧರಿ ಕೂಡಾ ಸಿಖ್ಖರ ನಾಡಿನಿಂದ ಬಂದವಳು. ಈಗ ಮದನ್ ಮಲ್ಲು ತನ್ನ ಮಗನಿಗಾಗಿ ನಿರ್ದೇಶಿಸುತ್ತಿರುವ 'ನಿನ್ನದೇ ನೆನಪು' ಚಿತ್ರಕ್ಕೂ ಪಂಜಾಬಿನ ಮಾಯಾ ಎಸ್. ಎಂಬ ಹುಡುಗಿಯನ್ನು ಕರೆತಂದಿದ್ದಾರೆ. ಆದರೆ ಈ ಹುಡುಗಿ ಲಂಡನ್‌ನ ರಂಗಭೂಮಿ ಚಟುವಟಿಕೆಯಲ್ಲಿ ಸಕ್ರಿಯವಾಗಿದ್ದರಿಂದ ಈಕೆಗೆ ಪಂಜಾಬಿ ಭಾಷೆ ಕೂಡಾ ಬರುವುದಿಲ್ಲ, ಸದ್ಯಕ್ಕೆ ಇಂಗ್ಲಿಷಿನಲ್ಲೇ ಠಸ್-ಪುಸ್ ಎಂಬ ಮಾತನಾಡುವ ಈ ಹುಡುಗಿ ಹಿಂದಿ ಚಿತ್ರರಂಗಕ್ಕೆ ಹಾರುವ ಕನಸು ಕಂಡಿದ್ದಾಳೆ. ಅದಕ್ಕಾಗಿ ಮೊದಲ ಹಂತವಾಗಿ ಕನ್ನಡಕ್ಕೆ ಬಂದಿದ್ದಾಳಂತೆ.

ಬಂದಳು ಮುನ್ನಿ

ಮತ್ತೊಬ್ಬಳು ಮಹಿಳಾ ನಿರ್ದೇಶಕಿ ಚಿತ್ರರಂಗಕ್ಕೆ ಕಾಲಿಡು... ತ್ತಿದ್ದಾರೆ. ಕಳೆದ ಬಾರಿ ವಿಷ್ಣುವರ್ಧನ್ ನಟಿಸುತ್ತಿರುವ ಹೊಸ... ಚಿತ್ರವನ್ನು ಜೈ ಜಗದೀಶ್ ನಿರ್ಮಿಸುತ್ತಿದ್ದಾರೆ ಮತ್ತು ನಿರ್ದೇಶಿಸು... ತ್ತಾರೆ ಎಂದು ಬರೆದಿದ್ದೆವು. ಆದರೆ ಇದೀಗ ಬಂದ ಸುದ್ದಿಯಂತೆ... ನಿರ್ದೇಶನದ ಜವಾಬ್ದಾರಿಯನ್ನು ಜೈಜಗದೀಶ್ ತಮ್ಮ ಪತ್ನಿ... ವಿಜಯಲಕ್ಷ್ಮಿಸಿಂಗ್ ನೀಡಿದ್ದಾರೆ. ಅಲ್ಲಿಗೆ ಗಂಡ-ಹೆಂಡತಿ ಇಬ್ಬರೂ... ಒಂದೇ ವರ್ಷದ ಅವಧಿಯಲ್ಲಿ ನಿರ್ದೇಶಕರಾದಂತಾಯಿತು... ಇದಕ್ಕಿಂತಲೂ ಕುತೂಹಲದ ಸಂಗತಿಯೆಂದರೆ ವಿಜಯಲಕ್ಷ್ಮಿ... ಸಿಂಗ್ ಅವರ ಸಹೋದರ ರಾಜೇಂದ್ರ ಸಿಂಗ್ ಬಾಬು ಮತ್ತು... ತಂದೆ ಶಂಕರ್‌ಸಿಂಗ್ ಕೂಡಾ ನಿರ್ದೇಶಕರೆಂಬುದನ್ನು ಇಲ್ಲಿ ಗಮನಿಸಬೇಕು. ಹೀಗಾಗಿ ವಿಜಯಲಕ್ಷ್ಮಿ ಸಿಂಗ್ ಒಂದು ರೀತಿಯಲ್ಲಿ ತಂದೆ ಮತ್ತು ಅಣ್ಣನ ದಾರಿಯಲ್ಲೇ ಸಾಗುತ್ತಿದ್ದಾರೆ.



ಮುನ್ನಿಗೆ ನಮ್ಮ ಶುಭ... ಕಾಮನೆಗಳು....

ಕ್ರಿಕೆಟ್ ಸೋಲು 'ಕಬಡ್ಡಿ'ಗೆ ಗೆಲುವು?

ಕ್ರಿಕೆಟ್‌ನಲ್ಲಿ ಭಾರತ ಸೋತಿದ್ದರಿಂದ ಇಡೀ ದೇಶ ನಾಚಿಕೆಯಿಂದ ತಲೆತಗ್ಗಿಸುತ್ತಿದ್ದರೂ ಗಾಂಧಿನಗರದ ಜನರಿಗೆ ಮಾತ್ರ ಎಲ್ಲಿಲ್ಲದ ಖುಷಿ. ಯಾಕೆಂದರೆ ಭಾರತ ಫೈನಲ್ಸ್‌ಗೆ ತಲುಪಿದ್ದರೆ ಇನ್ನೂ ಒಂದು ತಿಂಗಳ ಕಾಲ ಚಿತ್ರಗಳ ಕಲೆಕ್ಷನ್ ಗೋತಾ ಆಗುತ್ತಿತ್ತು ಎಂಬುದು ಅವರ ಚಿಂತೆಯಾಗಿತ್ತು. ಹಾಗೆಂದು ಭಾರತ ಸೋತ ನಂತರ ಕನ್ನಡ ಚಿತ್ರಗಳ ಗಳಿಕೆ ಜಾಸ್ತಿಯೇನೂ ಆಗಿಲ್ಲ.

ಇಂಥ ಸಂದರ್ಭದಲ್ಲಿ ಈಗ 'ಕಬಡ್ಡಿ' ಎಂಬ ಚಿತ್ರ ಕನ್ನಡದಲ್ಲಿ ಆರಂಭವಾಗಿದೆ. ಯುವ ಖಳನಾಯಕನಾಗಿ ಮಿಂಚುತ್ತಿರುವ ಕಿಶೋರ್ ನೇತೃತ್ವದಲ್ಲಿ ರಂಗಭೂಮಿಯ ಕೆಲವು ಯುವಕರು ಸೇರಿ ಈ ಚಿತ್ರ ನಿರ್ಮಿಸುತ್ತಿದ್ದಾರೆ. ಇಡೀ ಚಿತ್ರದಲ್ಲಿ ಶೇ. 60ರಷ್ಟು ಕಬಡ್ಡಿ ಇರುತ್ತದಂತೆ. ಜೊತೆಗೆ ಪ್ರೀತಿ, ಪ್ರೇಮ, ಪ್ರಣಯದಾಟವೂ ಇರುತ್ತಂತೆ. ಅಂದಹಾಗೆ ರಂಗಭೂಮಿಯ ನರೇಂದ್ರಬಾಬು ಎಂಬ ಯುವಕ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಮಂಡ್ಯದಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಕಬಡ್ಡಿ ಟೂರ್ನಮೆಂಟ್‌ನಲ್ಲಿ ಇದರ ಚಿತ್ರೀಕರಣ ನಡೆಯಲಿದೆ.



ಅಶ್ವಥ್‌ಗೆ ಸಹಾಯಹಸ್ತ



ಕರ್ನಾಟಕ ಕಲಾವಿದರ ಸಂಘ ಕೊನೆಗೂ ಎಚ್ಚೆತ್ತುಕೊಂಡಿದೆ. ಅಧ್ಯಕ್ಷ ಅಂಬರೀಶ್ ಅವರ ಆದೇಶದ ಮೇರೆಗೆ ರವಿಚಂದ್ರನ್ ಅವರು ಈಗ ಮೈಸೂರಿನಲ್ಲಿ ಅನಾರೋಗ್ಯದಲ್ಲಿರುವ ಅಶ್ವಥ್ ಅವರಿಗಾಗಿ ಕಲ್ಯಾಣನಿಧಿಯನ್ನು ಸಂಗ್ರಹಿಸುತ್ತಿದ್ದಾರೆ. ಇದರ ಮೊದಲಿಗೆ ಅಂಬರೀಶ್ ಅವರೇ ಇಪ್ಪತ್ತೈದು ಸಾವಿರ ರೂ. ಕೊಟ್ಟಿದ್ದಾರೆ. ಅದಾದನಂತರ ದರ್ಶನ್ ಇಪ್ಪತ್ತೈದು, ಮುಂಗಾರುಮಳೆಯ ಗಣೇಶ್ ಹತ್ತು, ಸಂಗೀತ ನಿರ್ದೇಶಕ ಗುರುಕಿರಣ್ ಹತ್ತು, ಯುವ ನಾಯಕ ಪ್ರೇಮ್ ಹತ್ತು.... ಹೀಗೆ ಒಬ್ಬೊಬ್ಬರೇ ಸ್ವಯಂಪ್ರೇರಿತರಾಗಿ ಬಂದು ರವಿಚಂದ್ರನ್ ಮನೆಯಲ್ಲಿ ಸಂದಾಯ ಮಾಡುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಸುಮಾರು ಆರರಿಂದ ಏಳು ಲಕ್ಷ ರೂಪಾಯಿಗಳ ಮೊತ್ತ ಸಂಗ್ರಹವಾಗಬಹುದು. ಈ ಹಿಂದೆ ಪಾರ್ವತಮ್ಮ ರಾಜ್‌ಕುಮಾರ್ ಅವರು ತಮ್ಮ ಸಂಸ್ಥೆಯಿಂದ ಒಂದು ಲಕ್ಷ ರೂ. ನೀಡಿದ್ದರೆ, ವಿಷ್ಣುವರ್ಧನ್‌ಅವರು ಸ್ನೇಹಲೋಕ ತಂಡದಿಂದ ಐವತ್ತು ಸಾವಿರ ರೂಪಾಯಿ ನೀಡಿದ್ದರು.

ಅಶ್ವಥ್ ಅತ್ಯಂತ ಪ್ರಾಮಾಣಿಕ ಮತ್ತು ಎಲ್ಲರ ಪ್ರೀತಿಗೆಪಾತ್ರರಾದ ನಟ ನಿಜ. ಆದರೆ ಜೀವನದುದ್ದಕ್ಕೂ ದುಡಿದ ಸಂಪಾದನೆ ದುಂದುವೆಚ್ಚ ಮಾಡುವಂತಹ ವ್ಯಕ್ತಿಯೇನಲ್ಲ. ಅವರ ಮಗ ಶಂಕರ್ ಅಶ್ವಥ್ ಕೂಡ ಧಾರಾವಾಹಿಗಳಲ್ಲಿ ದುಡಿಯುತ್ತಾ ಅಪ್ಪನ ಥರ ಒಳ್ಳೆಯ ಹೆಸರು ಮಾಡಿರುವವರು. ಆದರೂ ಅವರು ಈ ದುಸ್ಥಿತಿಗೆ ಹೇಗೆ ಒಳಗಾದರೆಂಬುದೇ ಆಶ್ಚರ್ಯ. ಏನೇ ಇರಲಿ, ಇಂತಹ ಸಜ್ಜನನಿಗೆ ಉದ್ಯಮದವರೆಲ್ಲಾ ಸಹಾಯಹಸ್ತ ನೀಡುತ್ತಿರುವುದನ್ನು ಮೆಚ್ಚೋಣ.

ಹೀರೋ ಆದ ಶರಣ್

ಕಣ್ಣೀರ ರಾಣಿ ಶೃತಿಯ ಸಹೋದರ ಶರಣ್ ನಾಯಕನಟನ ಪಟ್ಟ ಏರಿದ್ದಾರೆ. 'ಸುಂದರಿ ಗಂಡ ಸದಾನಂದ' ಎಂಬ ಚಿತ್ರ ಈಗಾಗಲೇ ಮುಗಿದಿದ್ದು ಅದರಲ್ಲಿ ಶರಣ್ ಫುಲ್ ಲೆಂತ್ ಹೀರೋ. ಹೊಸಬರನ್ನು ಬೆಂಬಲಿಸುವ ಸದ್ಯದ ಟ್ರೆಂಡ್‌ನಲ್ಲಿ ಈತ ಕೂಡಾ ನಾಯಕನಾಗಿ ಗೆದ್ದುಬಂದಲ್ಲಿ ಆಶ್ಚರ್ಯವಿಲ್ಲ. ಯಾಕೆಂದರೆ ಈತ ಪ್ರತಿಭಾವಂತ ಎಂಬುದನ್ನು ಈಗಾಗಲೇ ಅನೇಕ ಚಿತ್ರಗಳಲ್ಲಿ ತೋರಿಸಿಕೊಟ್ಟಿದ್ದಾನೆ. ಎಷ್ಟೋ ಚಿತ್ರಗಳಲ್ಲಿ ಹೀರೋಗಳಿಗಿಂತ ಜಾಸ್ತಿ ಚಪ್ಪಾಳೆ ಗಿಟ್ಟಿಸಿರುವ ಶರಣ್ ಈಗ ತಮ್ಮ ವೃತ್ತಿಜೀವನದ ಕವಲುದಾರಿಯಲ್ಲಿದ್ದಾರೆ. "ಒಂದು ವೇಳೆ ನಾಯಕನಾಗಿ ಹಿಟ್ ಆದರೂ ಕೂಡಾ 'ಹೀರೋ', 'ಫ್ರೆಂಡ್' ಥರದ ಪಾತ್ರಗಳಲ್ಲಿ ನಟಿಸುವುದನ್ನು ನಾನು ಬಿಡುವುದಿಲ್ಲ" ಎಂದಿದ್ದಾರೆ. ಅಲ್ಲಿಗೆ ಶರಣ್‌ಗೆ ಗಾಂಧಿನಗರದ ನಿಜವಾದ ಬಣ್ಣ ತಿಳಿದಿದೆ ಎಂಬುದಾಯಿತು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44